Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–19 ಮೇ 8–14, 2023 ಪುಟ 16 ರೂ. 10/–

Volume-17 Issue-19 May 8-14, 2023 Pages:16 Price: 10/-

ಬಿಜೆಪಿ ಸೋಲಿನತ್ತ

ವಿಧಾನಸಭೆಯಲ್ಲಿ ಮೊಳಗಲಿದೆ ಜನದನಿ

ಬಹು ಮಹತ್ವದ ಕರ್ನಾಟಕ ಚುನಾವಣೆ



ಕರ್ನಾಟಕದಲ್ಲಿ ಬಿಜೆಪಿ ಒಮ್ಮೆಯೂ ಗೆಲ್ಲದ 53 ಕ್ಷೇತ್ರಗಳು!

ಕಾರ್ಮಿಕ ಸಂಘಟನೆಗಳ ಮಾನ್ಯತೆ ರದ್ದತಿ

ಒಂದು ಫ್ಯಾಸಿಸ್ಟ್ ನಡೆ!



ವಿಜ್ಞಾನ್ ಪ್ರಸಾರ್ : ನೆಹರೂ ಕಾಲದ ಒಂದು ಕಲ್ಪನೆಯ ಕಗ್ಗೊಲೆ




ಸಾವರ್ಕರ್‌ರ 'ಹಿಂದುತ್ವ': ಭಾರತ ದೇಶಕ್ಕೆ ವೈಜ್ಞಾನಿಕ ಆಧಾರ!?

ಸಾವರ್ಕರ್ ಅವರ ಹಿಂದುತ್ವವು ಭಾರತ ದೇಶಕ್ಕೆ ವೈಜ್ಞಾನಿಕ ಆಧಾರಗಳನ್ನು ಒದಗಿಸುತ್ತದೆ!?

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್‌ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–28

ಡಾ.ಶಮ್ಸುಲ್ ಇಸ್ಲಾಂ
ಅನು:ಟಿ.ಸುರೇಂದ್ರರಾವ್

ಇದುವರೆಗೆ ಐದು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ

ಮಿಥ್ಯೆ 1:'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?

ಮಿಥ್ಯೆ 2:ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?

ಮಿಥ್ಯೆ 3:ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?

ಮಿಥ್ಯೆ 4:ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು !?

ಮಿಥ್ಯೆ 5:ಸಾವರ್ಕರ್ ಒಬ್ಬ ವಿಚಾರವಾದಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು !?

ಮಿಥ್ಯೆ 6:ಗಾಂಧಿ ಹತ್ಯೆಯ ಪ್ರಕರಣದಲ್ಲಿ ಆರೋಪಗಳು ಸಾಬೀತಾಗಲೇ ಇಲ್ಲ!?

ಈಗ ಮಿಥ್ಯೆ 7..


ಸಾವರ್ಕರ್ ವಿರಚಿತ ಹಿಂದುತ್ವ 1923 ರಲ್ಲಿ ಕಾಣಿಸಿಕೊಂಡಿತು. ಹಿಂದೂ ರಾಷ್ಟ್ರೀಯತೆ ಹಾಗೂ ಹಿಂದುತ್ವ ಸಿದ್ಧಾಂತಕ್ಕೆ ಅದು ಅತ್ಯಂತ ಮೌಲಿಕ ಹಾಗೂ ಪಾಂಡಿತ್ಯಪೂರ್ಣ ಕೊಡುಗೆಯಾಗಿದೆ ಎಂದು ಶ್ಲಾಘಿಸಲಾಗುತ್ತದೆ. ಭಾರತದಲ್ಲಿ ಮತೀಯವಾದೀ ಹಿಂದೂ ಪ್ರಭುತ್ವವನ್ನು ಸ್ಥಾಪಿಸಬೇಕು ಎಂಬ ಆಲೋಚನೆಯ ಪ್ರಮುಖ ಬೆಂಬಲಿಗರೊಬ್ಬರು ಈ ಪುಸ್ತಕವನ್ನು ಈ ಕೆಳಗಿನ ಮಾತುಗಳಲ್ಲಿ ಕೊಂಡಾಡಿದ್ದಾರೆ: "ಅದು ನಿಜಕ್ಕೂ ನವ ಸತ್ಯಗಳೊಂದಿಗೆ ನಮ್ಮ ಕಾಲಜ್ಞಾನಿಗಳನ್ನು ಪ್ರೇರೇಪಿಸಿದ ವೈದಿಕ ಪ್ರಭಾತಗಳಲ್ಲಿ ಒಂದಾಗಿದ್ದು, 'ಹಿಂದುತ್ವ' ದ ಲೇಖಕರಿಗೆ ಈ 'ಮಂತ್ರ'ದ, ಈ ಹಿಂದುತ್ವದ ಅರ್ಥವಿವರಣೆಯ ಸಾಕ್ಷಾತ್ಕಾರವಾಗಿರಬೇಕು!"

ಸಾವರ್ಕರ್ ಅವರ ಹಿಂದುತ್ವ ವನ್ನು ಹಿಂದೂ ಸಂಘಟನೆಯ ಅಥವಾ ಸಂಘದ ಬೈಬಲ್ ಎಂದು ಹೇಳಲಾಗುತ್ತಿದೆ. ಕೆ.ಬಿ.ಹೆಡ್ಗೆವಾರ್ ಅವರ ನಂತರ ಆರ್‌ಎಸ್‌ಎಸ್ ನ ಮುಖ್ಯಸ್ಥರಾಗಿದ್ದ ಎಂ.ಎಸ್. ಗೋಲ್ವಾಲ್ಕರ್ ಅವರು ಕೂಡ ಸಾವರ್ಕರ್ ಅವರ ಹಿಂದುತ್ವ ವನ್ನು ಹಿಂದೂ ರಾಷ್ಟ್ರೀಯತೆಯ ಬಗೆಗಿನ ಪಠ್ಯಪುಸ್ತಕದ ಅವಶ್ಯಕತೆಯನ್ನು ಈಡೇರಿಸಿದ ಒಂದು ಮಹಾನ್ ವೈಜ್ಞಾನಿಕ ಪುಸ್ತಕ ಎಂದು ಪರಿಗಣಿಸಿದ್ದಾರೆ. ಆರ್‌ಎಸ್‌ಎಸ್ ಪ್ರಕಾಶನದಲ್ಲಿ ಹೊರಬಂದ ಹೆಡ್ಗೆವಾರ್ ಅವರ ಜೀವನವೃತ್ತಾಂತದ ಪ್ರಕಾರ "ಸಾವರ್ಕರ್ ಅವರ ವಿವಾದಕ್ಕೆಡೆಯಿಲ್ಲದ ತರ್ಕ ಮತ್ತು ಸ್ಪಷ್ಟತೆಯಿಂದ ಕೂಡಿದ ಸ್ಪೂರ್ತಿದಾಯಕ ಹಾಗೂ ಉಜ್ವಲವಾದ ಹಿಂದುತ್ವ ಪರಿಕಲ್ಪನೆಯ ನಿರೂಪಣೆಯು ಡಾಕ್ಟರ್ (ಹೆಡ್ಗೆವಾರ್) ಅವರ ಹೃದಯ ವೀಣೆಯ ತಂತಿಯನ್ನು ಮೀಟಿದೆ."

ಹಿಂದೂ ರಾಷ್ಟ್ರ ಕಲ್ಪನೆಯ ಮತ್ತೊಬ್ಬ ಪ್ರಸಿದ್ಧ ಪ್ರತಿಪಾದಕರಾಗಿದ್ದ ಜಿ.ಎಂ.ಜೋಶಿಯವರು ಆ ಪುಸ್ತಕದ ಬಗ್ಗೆ ಹೀಗೆ ಹೇಳಿದ್ದಾರೆ: "ಸಾವರ್ಕರ್ ಅವರ ಪುಸ್ತಕ ಎಲ್ಲಾ ಕಾಲಕ್ಕೂ ಸಲ್ಲುತ್ತದೆ. ಈ ದೇಶದ ಹಿಂದೂಗಳು ಹಾಗೂ ಹಿಂದೂಯೇತರರಿಗೆ ಶತ ಶತಮಾನಗಳ ಕಾಲ ಈ ಪುಸ್ತಕವು ಮಾರ್ಗದರ್ಶನ ಮಾಡುತ್ತದೆ. ಹಿಂದುತ್ವ ಪರಿಕಲ್ಪನೆಯು ಸಾವರ್ಕರ್ ಅವರದ್ದೇ ಆಗಿದೆ ಮತ್ತು ಅದು ಆಧುನಿಕ ರಾಜಕೀಯ ಸಿದ್ಧಾಂತದಲ್ಲಿನ ರಾಷ್ಟ್ರದ ವಿವರಣೆಗೆ ಯಥಾವತ್ತಾಗಿ ಹೊಂದುತ್ತದೆ ... .. ಸಾವರ್ಕರ್ ಅವರು ತಮ್ಮ ಪ್ರತಿಪಾದನೆಯಲ್ಲಿ ಸಂಪೂರ್ಣವಾಗಿ ತರ್ಕಬದ್ಧರಾಗಿದ್ದಾರೆ. ಎಲ್ಲಾ ಆಕ್ಷೇಪಣೆಗಳಿಗೂ ಉದ್ರೇಕವಿಲ್ಲದೆ ಹಾಗೂ ತರ್ಕಬದ್ಧವಾಗಿ ಉತ್ತರಿಸಿದ್ದಾರೆ. ಅವರು ತಮ್ಮ ವಿರೋಧಿಗಳಿಗೆ ಸಮರ್ಥವಾಗಿ ಮನವರಿಕೆ ಮಾಡಿದ್ದಾರೆ ಏಕೆಂದರೆ ಅವರ ನಿಶ್ಚಿತಾಭಿಪ್ರಾಯವು ಅವರ ಆಳವಾದ ಅಧ್ಯಯನ ಹಾಗೂ ಸ್ಪಷ್ಟ ಆಲೋಚನೆಗಳ ಫಲವಾಗಿದೆ. ಆದರೆ ಒಮ್ಮೆ ಒಂದು ಸಿದ್ಧಾಂತವನ್ನು ಸಂದೇಹಕ್ಕೆಡೆಯಿಲ್ಲದೇ ಸಾಬೀತು ಮಾಡಿದಾಗ ಅವರ ಬರಹಗಳು ಕವಿಗಳ ಮಾತುಗಳಂತೆ ಭಾವುಕವಾಗುತ್ತವೆ."

ವಾಸ್ತವಾಂಶಗಳು

ಹಿಂದೂ ರಾಷ್ಟ್ರೀಯವಾದದ ಸಮರ್ಥನೆಯಲ್ಲಿ ಇದು ಅಮೂಲ್ಯವಾದ ಕೊಡುಗೆ ಎಂದು ಈ ಮೇಲಿನ ಹೇಳಿಕೆಗಳು ಹಿಂದುತ್ವ ಪುಸ್ತಕವನ್ನು ವೈಭವೀಕರಿಸಿದ್ದಾಗ್ಯೂ, ಈ ಪುಸ್ತಕದ ವಿಷಯ ಅಥವಾ ವಸ್ತುವು ಅನೇಕ ಹಿಂದೂ ಮುಖಂಡರುಗಳನ್ನು ಆಕರ್ಷಿಸಲಿಲ್ಲ ಮತ್ತು ಸಾಮಾನ್ಯ ಹಿಂದೂಗಳ ಗ್ರಹಣ ಶಕ್ತಿಗೆ ಮೀರಿದ್ದಾಗಿ ಹಾಗೆಯೇ ಉಳಿಯಿತು. ನಿಜ ಹೇಳಬೇಕೆಂದರೆ, ಆ ಪುಸ್ತಕದ ಶೀರ್ಷಿಕೆಯೇ ಮರುಚಿಂತನೆ ಅಥವಾ ಆನಂತರ ನೀಡಿದ್ದಾಗಿರಬೇಕು. ಮೂಲ ಪ್ರಕಾಶನ (1923) ವನ್ನು ಅವಲೋಕಿಸಿದರೆ ಆ ಪುಸ್ತಕದ ಶೀರ್ಷಿಕೆಯನ್ನು ಹಿಂದೂಯಿಸಂ ಎಂದು ಮುದ್ರಿಸಲಾಗಿತ್ತು, ಮತ್ತು ಆ ನಂತರದಲ್ಲಿ ಹಿಂದುತ್ವ ಎಂದು ಮುದ್ರಿಸಲಾದ ಕಾಗದದ ಚೂರನ್ನು ಅಂಟಿಸಲಾಗಿದೆ ಎಂಬುದನ್ನು ನೋಡಬಹುದು. ಆ ಪದವು ಸಾವರ್ಕರ್‌ವಾದಿಗಳ ಗ್ರಹಣ ಶಕ್ತಿಗೇ ಮೀರಿದ್ದಾಗಿದ್ದರಿಂದ, ನಾಲ್ಕನೇ ಮುದ್ರಣದಿಂದ ಆ ಪುಸ್ತಕಕ್ಕೆ ಹಿಂದುತ್ವ ಎನ್ನುವುದನ್ನು ತೆಗೆದುಹಾಕಿ ಹಿಂದೂ ಎಂದರೆ ಯಾರು? ಎಂಬ ಹೊಸ ಶೀರ್ಷಿಕೆಯೊಂದಿಗೆ ಮುದ್ರಿಸಲಾಯಿತು. 1963 ರಲ್ಲಿ ಮಹಾರಾಷ್ಟ್ರ ಪ್ರಾಂತೀಯ ಹಿಂದೂ ಮಹಾಸಭಾವು ಸಾವರ್ಕರ್ ಅವರ ಆಯ್ದ ಕೃತಿಗಳ ಭಾಗವಾಗಿ ಅದನ್ನು ಹಿಂದುತ್ವದ ಸಾರಗಳು (ಎಸೆನ್ಶಿಯಲ್ಸ್ ಆಫ್ ಹಿಂದುತ್ವ) ಎಂದು ಮುದ್ರಿಸಿತು.



ಅಹ್ಮದಾಬಾದಿನಲ್ಲಿ 1937 ರ ಡಿಸೆಂಬರಿನ ಹಿಂದೂ ಮಹಾಸಭಾದ 19 ನೇ ಅಧಿವೇಶನದಲ್ಲಿ ಹಿಂದೂ ಮಹಾಸಭಾದ ಗುರಿಯೇ ಹಿಂದುತ್ವ ಎಂದು ಸಾವರ್ಕರ್ ಅವರು ಘೋಷಿಸಿದ್ದಾಗ್ಯೂ ಹಿಂದುತ್ವ ದಲ್ಲಿ ಸವಿಸ್ತಾರವಾಗಿ ಹೇಳಲ್ಪಟ್ಟಿದ್ದ ಹಿಂದೂರಾಷ್ಟ್ರದ ಪರಿಕಲ್ಪನೆಯು ಗೌಣವಾಗಿಯೇ ಉಳಿಯಿತು. ಆ ಪುಸ್ತಕದ ಎರಡನೇ ಮುದ್ರಣದ ಸಮಯದಲ್ಲಿ ಲೇಖಕರ ನಿಕಟ ಸಂಬಂಧಿಯಾಗಿದ್ದ ಪ್ರಕಾಶಕ ಎಸ್.ಎಸ್. ಸಾವರ್ಕರ್ ಅವರು ಸಿದ್ಧಪಡಿಸಿದ ಒಂದು ಟಿಪ್ಪಣಿಯ ಪ್ರಕಾರ ಆ ಪುಸ್ತಕಕ್ಕೆ ಹೆಚ್ಚು ಗಿರಾಕಿಗಳೇ ಇರಲಿಲ್ಲ ಎಂಬ ಅಂಶ ಬೆಳಕಿಗೆ ಬಂತು. ಆ ಟಿಪ್ಪಣಿ ಹೀಗಿದೆ:

"ಹಿಂದುತ್ವ ಪ್ರತಿಗಳಿಗಾಗಿ ವಿದ್ವಾಂಸರಿಂದ ಹಾಗೂ ಸಾವರ್ಕರ್ ಅವರ ಅಭಿಮಾನಿಗಳಿಂದ ಪತ್ರಗಳು ಹಾಗೂ ವೈಯಕ್ತಿಕ ಕೋರಿಕೆಗಳು ಬಂದಿವೆ. ಅವರಿಗೆ ನಾನು ನಕಾರಾತ್ಮಕ ಉತ್ತರ ಕಳಿಸಬೇಕಾಯಿತು, ಏಕೆಂದರೆ ಪ್ರತಿಗಳು ಲಭ್ಯವಿರಲಿಲ್ಲ. ಇಲ್ಲ ಎಂದು ಹೇಳಲು ನನಗೆ ಬೇಸರವಾಗುತ್ತಿತ್ತು. ಹೊಸ ಪುಸ್ತಕಗಳನ್ನು ಮುದ್ರಿಸಲು ನನ್ನ ಬಳಿ ಬಂಡವಾಳವಿರಲಿಲ್ಲ ಮತ್ತು ಮುದ್ರಣದ ವೆಚ್ಚ ತೂಗಿಸುವಷ್ಟು ಬೇಡಿಕೆಗಳು ಕೂಡ ಇರಲಿಲ್ಲ."

ಅದರ ಮೊದಲ ಮುದ್ರಣ 1923 ರಲ್ಲಿ ಆಗಿದ್ದರೆ ಎರಡನೇ ಮುದ್ರಣವು 1942 ರಲ್ಲಿ ಬೆಳಕು ಕಂಡಿತು ಎಂಬ ವಾಸ್ತವಾಂಶವು ಆ ಪುಸ್ತಕಕ್ಕೆ ಇದ್ದ ನೀರಸ ಜನಪ್ರಿಯತೆಯನ್ನು ಸಾರುತ್ತದೆ. ಅದರ ಇತ್ತೀಚಿನ ಮುದ್ರಣವು 2003 ರಲ್ಲಿ ಹೊರಬಂದಿದೆ ಎನ್ನುವುದರೊಂದಿಗೆ ಕಳೆದ ಎಂಟು ದಶಕಗಳಲ್ಲಿ ಅದು ಕೇವಲ ಏಳು ಮುದ್ರಣ ಕಾಣಲು ಸಾಧ್ಯವಾಯಿತು.

ಸಾವರ್ಕರ್ ಅವರು ರತ್ನಗಿರಿ ಜೈಲಿನಲ್ಲಿದ್ದಾಗ 1923 ರಲ್ಲಿ ಹಿಂದುತ್ವ ಪುಸ್ತಕವನ್ನು ಬರೆದರು ಮತ್ತು ಅದನ್ನು ಕಳ್ಳತನದಲ್ಲಿ ಹೊರಗೆ ಸಾಗಿಸಲು ಸಾಧ್ಯವಾಯಿತು, ಬ್ರಿಟಿಷ್ ಆಡಳಿತ ಶಾಮೀಲಾಗದೆ ಅದು ಸಾಧ್ಯವಾಗುತ್ತಿರಲಿಲ್ಲ. ಅದನ್ನು 'ಒಬ್ಬ ಮರಾಠಾ' ಎಂಬ ಕಾವ್ಯನಾಮದಲ್ಲಿ ಪ್ರಕಟಿಸಲಾಯಿತು ಏಕೆಂದರೆ ಲೇಖಕ ಸಾವರ್ಕರ್ ಜೈಲಿನಲ್ಲಿದ್ದರು ಮತ್ತು ಅಧಿಕೃತ ಅನುಮತಿಯಿಲ್ಲದೇ ಅಂತಹ ಕೃತಿಗಳನ್ನು ಪ್ರಕಟಿಸಲು ಸಾಧ್ಯವಾಗುತ್ತಿರಲಿಲ್ಲ. ವಾಸ್ತವಾಂಶವೇನೆಂದರೆ, ಖೋಟಾ ಹೆಸರನ್ನು ಬಳಸುವ ಅಗತ್ಯವಿರಲಿಲ್ಲ, ಏಕೆಂದರೆ ನಾಗಪುರದ ವಕೀಲ, ವಿ.ವಿ. ಕೇಲ್ಕರ್ ಅದರ ಮೊದಲ ಮುದ್ರಣ ಹೊರತಂದಾಗ ಅದು ಸಾವರ್ಕರ್ ಅವರ ಪುಸ್ತಕವೆಂಬ ಅಂಶ ರಹಸ್ಯವಾಗೇನೂ ಇರಲಿಲ್ಲ. ಈ ಸತ್ಯ ಎಲ್ಲರಿಗೂ ಗೊತ್ತಿದ್ದಾಗ್ಯೂ, ಬ್ರಿಟಿಷ್ ಆಳರಸರು ಅದನ್ನು ನಿಷೇಧಿಸಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಸ್ವಾರಸ್ಯಕರ ಸಂಗತಿಯೆಂದರೆ, ಲೇಖಕ ಹಾಗೂ ಪುಸ್ತಕದ ವಸ್ತುವು ದೇಶದ ಹಿಂದೂ ಅಸ್ಮಿತೆ ಹಾಗೂ ಅದರ ನಿವಾಸಿಗಳ ಬಗ್ಗೆ ಮಾತ್ರ ಒತ್ತು ನೀಡಿತ್ತು, ಬಳಸಿದ ಕಾವ್ಯನಾಮ 'ಒಬ್ಬ ಮರಾಠಾ' ಎನ್ನುವುದು ಲೇಖಕನ ಪ್ರಾದೇಶಿಕ ಅಸ್ಮಿತೆಯನ್ನು ಹೇಳಿತ್ತೇ ಹೊರತು ಮತಧರ್ಮವನ್ನಲ್ಲ.

1923 ರ ಮುದ್ರಣವು ಇಂಗ್ಲಿಷ್ ಭಾಷೆಯಲ್ಲಿತ್ತಾದರೂ (128 ಡೆಮಿ ಗಾತ್ರದ ಪುಟಗಳು) ಇಂಗ್ಲಿಷ್ ವಾಕ್ಯಗಳ ನಡುವೆ ಮಧ್ಯೆ ಮಧ್ಯೆ ಸಂಸ್ಕೃತ ಹಾಗೂ ಹಿಂದಿ ಅಕ್ಷರಗಳನ್ನು ತುರುಕಲಾಗಿತ್ತು ಎನ್ನುವುದು ಸೋಜಿಗವಾಗಿತ್ತು. ಓದಲು ಅದು ಇರಸುಮುರುಸಾಗುತ್ತಿತ್ತು. ಮೂಲ ಪ್ರಕಾಶನದಲ್ಲಿ 8 ಅಧ್ಯಾಯಗಳಾಗಿ ವಿಂಗಡಿಸಲಾಗಿತ್ತು ಆದರೆ ನಂತರದ ಪ್ರಕಾಶನಗಳಲ್ಲಿ ವಿಂಗಡಣೆಯನ್ನು ಕೈಬಿಡಲಾಗಿತ್ತು ಮತ್ತು ಅದರ ಬದಲು ಹಲವು ಉಪಶೀರ್ಷಿಕೆಗಳನ್ನು ಬಳಸಲಾಗಿತ್ತು. ಅದಲ್ಲದೆ, ನಂತರದ ಪ್ರಕಾಶನಗಳಲ್ಲಿ ಯಾವುದೇ ಸ್ಪಷ್ಟನೆಗಳಿಲ್ಲದೇ ಹೆಚ್ಚುವರಿ ವಿಷಯಗಳನ್ನು ಸೇರಿಸಲಾಗಿತ್ತು. ನಂತರದ ಯಾವ ಪ್ರಕಾಶನಗಳನ್ನೂ ಪರಿಷ್ಕೃತ ಮುದ್ರಣ ಎಂದು ಹೇಳದ ಕಾರಣ ಆ ಬದಲಾವಣೆಗಳನ್ನು ಸಾವರ್ಕರ್ ಅವರು ಅನುಮೋದಿಸಿದ್ದರೆ ಎಂದು ಹೇಳುವುದು ಕಷ್ಟ.

ಸಾವರ್ಕರ್ ಅವರ ಇತರ ಕೃತಿಗಳಿಗೆ ಹೋಲಿಸಿದರೆ ಹಿಂದುತ್ವ ಪುಸ್ತಕವು ಗೊತ್ತುಗುರಿಯಿಲ್ಲದ, ಅಸ್ಪಷ್ಟವಾದ, ಅಸಂಬದ್ಧ, ಚಿಟ್ಟುಹಿಡಿಸುವ, ವಿರೋಧಾಭಾಸದ ಹಾಗೂ ಅನಗತ್ಯ ಪುನರಾವರ್ತನೆಯದಾಗಿತ್ತು. ಒಟ್ಟಿನಲ್ಲಿ, ಹಿಂದೂ ರಾಷ್ಟ್ರೀಯವಾದದ ಬೈಬಲ್ ಎಂದು ಪ್ರಸಾರಮಾಡಿದ ಹಿಂದುತ್ವ ದಲ್ಲಿ ಕಾಲು ಭಾಗಕ್ಕಿಂತಲೂ ಕಡಿಮೆ ಜಾಗವನ್ನು ವಸ್ತುವಿಷಯಕ್ಕೇ ಮೀಸಲಿಡಲಾಗಿತ್ತು. ಪುಸ್ತಕದ ಪ್ರಮುಖ ಭಾಗಗಳಲ್ಲಿ ಹಿಂದು/ಹಿಂದೂಸ್ತಾನ್, ಜನಪದ ಸಾಹಿತ್ಯ, ಬೌದ್ಧಮತದಲ್ಲಿನ ಕೆಡುಕುಗಳು, ಸಿಖ್ಖರು, ಜೈನರು, ಬೌದ್ಧರು ಹೇಗೆ ಹಿಂದೂಗಳು ಎಂಬ ಮೂಲ ಪರಿಭಾಷೆಗಳ ಬಗ್ಗೆಯೇ ಮತ್ತೆ–ಮತ್ತೆ ಚರ್ಚೆಗಳನ್ನು ಮಾಡಲಾಗಿದೆ ಮತ್ತು ಹಿಂದೂ ಮತದಲ್ಲಿ ವೈದಿಕ ಹಾಗೂ ಅವೈದಿಕ ಗುಂಪುಗಳ ನಡುವೆ ಅಖಂಡವಾಗಿ ನಿರಂತರವಾಗಿ ಎದ್ದುಬರುತ್ತಿದ್ದ ತಿಕ್ಕಾಟಗಳ ವಿವರಣೆ ಇವೆ.

ಹಿಂದುತ್ವ ದಲ್ಲಿನ 'ಹಿಂದೂ' ನಾಮದ ಮೂಲವನ್ನು ಗೊತ್ತುಮಾಡಲು ಸಾವರ್ಕರ್ ಪ್ರಯತ್ನ ಎಷ್ಟು ರಕ್ಷಣಾತ್ಮಕವಾಗಿದೆ ಎಂಬುದೇ ಹಿಂದೂ ಪದದ ಅಚಾರಿತ್ರಿಕತೆಯ ಕುರಿತು ಅವರಿಗೆ ಅರಿವಿತ್ತು; ಆದರೂ ಆ ಅರಿವಿನ ನಡುವೆಯೇ ಹಿಂದೂ ಧರ್ಮದ ಹಾಗೂ ಹಿಂದೂ ಜನಾಂಗದ ಆದಿಕಾಲದ ಸ್ವರೂಪದ ಬಗೆಗಿನ ಸಿದ್ಧಾಂತವನ್ನು ಪ್ರತಿಪಾದಿಸಿದರು ಎಂಬುದಕ್ಕೆ ಸಾಕ್ಷಿ. ವಾಸ್ತವದಲ್ಲಿ ಅವರು ಇತಿಹಾಸದ 'ರಚನೆ'ಯಲ್ಲಿ ತೊಡಗಿದ್ದರು ಎಂಬುದನ್ನು ಕಾಣಬಹುದು, ಏಕೆಂದರೆ, ಜಿ.ಪಿ.ದೇಶಪಾಂಡೆ ಹೇಳುವಂತೆ:

'ಹಿಂದೂಧರ್ಮ'ದ ಪಠ್ಯಗಳನ್ನು ಬರೆದಿರುವ ಸಂಸ್ಕೃತ ಭಾಷೆಯಲ್ಲಿ ಹಿಂದೂ ಎಂಬ ಪದ ಎಲ್ಲಿಯೂ ಗೋಚರಿಸುವುದಿಲ್ಲ. ವೇದಗಳಲ್ಲಿಯಾಗಲೀ, ಉಪನಿಷತ್ತುಗಳಲ್ಲಿಯಾಗಲೀ ಅಥವಾ ಭಗವದ್ಗೀತೆಯಲ್ಲಿ ಕೂಡ ಹಿಂದು ಪದ ಬರೆದಿಲ್ಲ. ನಮಗೆ ಗೊತ್ತಿರುವಂತೆ, ಯಾವ ಸ್ಮೃತಿಯಲ್ಲೂ ಅಥವಾ ಪುರಾಣಗಳಲ್ಲೂ ಹಿಂದೂ ಧರ್ಮ ಅಥವಾ ಹಿಂದೂ ಎಂಬ ಪದ ಕಾಣಿಸುವುದಿಲ್ಲ.

ಈ ಕಾರಣದಿಂದಾಗಿಯೇ ಸಾವರ್ಕರ್ ಅವರು ಹಿಂದೂಧರ್ಮ ಆದಿಕಾಲದ್ದು ಎಂದು ನಂಬಿದ್ದರೂ ಕೂಡ 'ಹಿಂದೂ' ಎಂಬ ಪದನಾಮವು ಅಯೋನಿಯನ್ ಗ್ರೀಕರು, ಪರ್ಶಿಯನ್ನರು ಮತ್ತು ಅರಬ್ಬರ ಮೂಲದಿಂದ ಬಂತು ಎಂದು ಒಪ್ಪಿಕೊಳ್ಳುತ್ತಾರೆ.

ಹಾಗಿದ್ದೂ, ಹಿಂದುತ್ವ ಪುಸ್ತಕವು ಹಿಂದೂ ರಾಷ್ಟ್ರದ ಮಿಥ್ಯೆಯನ್ನು ಸೃಷ್ಟಿಮಾಡಿ ಪ್ರಸಾರ ಮಾಡುವಲ್ಲಿ ಬಹಳ ದೂರ ಕ್ರಮಿಸಿದೆ ಎಂಬ ವಾಸ್ತವವನ್ನು ನಿರಾಕರಿಸಲಾಗದು. ಅದು ವಿವೇಕಯುತವಾಗಿಯಲ್ಲವಾದರೂ ಭಾವನಾತ್ಮಕವಾಗಿ ಧ್ವನಿಸಲಿ ಮತ್ತು ಆಕರ್ಷಕವಾಗಲಿ ಎಂಬ ದೃಷ್ಟಿಯಿಂದ ಸಾವರ್ಕರ್ ಅವರು ತಮ್ಮ ಹಿಂದೂ ರಾಷ್ಟ್ರದ ಹಾಗೂ ರಾಷ್ಟ್ರವಾದದ ಪರಿಕಲ್ಪನೆಯನ್ನು ಪ್ರಸಾರ ಮಾಡಲು ರಾಮಾಯಣ ಮಹಾಕಾವ್ಯವನ್ನು ನಿಜವಾದ ಇತಿಹಾಸ ಎಂದು ಮುಂದಿಡುತ್ತಾರೆ. ಅದಕ್ಕೆ ನಿದರ್ಶನವಾಗಿ ಅವರು ಹೀಗೆ ಬರೆದಿದ್ದಾರೆ:

"ಯಾರೂ ಕಟಿ ಹಾಕಲಾಗದ ಹಾಗೂ ಕಟ್ಟಲು ದಿಟ್ಟತನ ತೋರದ ಅಶ್ವಮೇಧ ಯಾಗದ ಕುದುರೆ ಅಯೋಧ್ಯೆಗೆ ಹಿಂತಿರುಗಿದ ದಿನ, ಅದರ ಮೇಲೆ ಶ್ರೇಷ್ಠ ಬಿಳಿ ಬಣ್ಣದ ಸಾರ್ವಭೌಮತೆಯ ಛತ್ರಚಾಮರ ಬಿಚ್ಚಿ ಹರಡಿಕೊಂಡಿತು, ಕೆಚ್ಚೆದೆಯ ಕಲಿ ರಾಮಚಂದ್ರ, ಕುಲೀನ ರಾಮಚಂದ್ರನ ಸಾಮ್ರಾಜ್ಯದ ಸಿಂಹಾಸನದ ಪಟ್ಟಾಭಿಷೇಕವು ಅವನ ಪ್ರೀತಿ ಪಾತ್ರರೊಂದಿಗೆ ನೆರವೇರಿತು, ಆರ್ಯ ರಕ್ತದ ರಾಜಕುಮಾರರು ಮಾತ್ರವಲ್ಲದೇ ದಕ್ಷಿಣದ ಹನುಮಾನ್, ಸುಗ್ರೀವ, ವಿಭೀಷಣರೂ ಕೂಡ ಅಲ್ಲಿ ಉಪಸ್ಥಿತರಿದ್ದರು. ಆ ದಿನವೇ ಹಿಂದೂ ಜನರ ನಿಜವಾದ ಹುಟ್ಟಿದ ದಿನ; ಅದು ನಮ್ಮ ನಿಜವಾದ ರಾಷ್ಟ್ರೀಯ ದಿನ. ಏಕೆಂದರೆ ಅಂದು ಆರ್ಯರು ಮತ್ತು ಅನಾರ್ಯರು ಒಗ್ಗೂಡಿದ ಒಂದು ದೇಶವಾಗಿ ಜನ್ಮತಾಳಿತು. ಆ ಹಿಂದಿನ ಎಲ್ಲಾ ತಲೆಮಾರುಗಳ ಪ್ರಯತ್ನದ ಫಲವಾಗಿ

ಪುಟ 10 ಕ್ಕೆ

ಬಾಗೇಪಲ್ಲಿ ಕ್ಷೇತ್ರ: ಶಾಸಕರ ವಿರುದ್ಧ ತೀವ್ರ ಅತೃಪ್ತಿ ಸಿಪಿಐ(ಎಂ) ಗೆ ಗೆಲುವಿನ ವಿಶ್ವಾಸ

ಆರ್.ರಾಮಕೃಷ್ಣ–ಎಸ್.ವೈ.ಜಿ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಕರ್ನಾಟಕ–ಆಂಧ್ರ ಪ್ರದೇಶಗಳಗಡಿಭಾಗಕ್ಕೆಹೊಂದಿಕೊಂಡಿರುವ ಕ್ಷೇತ್ರ 'ಬಾಗೇಪಲ್ಲಿ' ಹಲವು ಕಾರಣಗಳಿಗಾಗಿ ಇಡೀ ರಾಜ್ಯದ ಗಮನ ಸೆಳೆಯುತ್ತ ಬಂದಿರುವ ಕ್ಷೇತ್ರ. ರಾಜ್ಯದ ಅತಿ ಹಿಂದುಳಿದ ತಾಲ್ಲೂಕುಗಳ ಪೈಕಿ ಒಂದಾಗಿರುವ ಬಾಗೇಪಲ್ಲಿಯಲ್ಲಿ ತ್ರಿಕೋನ ಸ್ಪರ್ಧೆ ಎಂದು ಹೇಳಲಾಗುತ್ತಿದೆಯಾದರೂ ವಾಸ್ತವಿಕ ಸ್ಪರ್ಧೆ ಇರುವುದು ಸಿಪಿಐ(ಎಂ) ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ. ಕಳೆದ ಎರಡು ಅವಧಿಯಿಂದ ಶಾಸಕರಾಗಿರುವ ಎಸ್.ಎನ್. ಸುಬ್ಬಾರೆಡ್ಡಿ ಮತ್ತೆ ಈಗ ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದರೆ, ಪ್ರಜಾವೈದ್ಯ ಎಂದೇ ಖ್ಯಾತರಾದ ಯುವ ಸಾಮಾಜಿಕ ಕಾರ್ಯಕರ್ತ, ಹೋರಾಟಗಾರ ಡಾ. ಅನಿಲ್ ಕುಮಾರ್‌ರವರು ಸಿಪಿಐ(ಎಂ) ಅಭ್ಯರ್ಥಿಯಾಗಿದ್ದಾರೆ. ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸಿ. ಮುನಿರಾಜು ಅವರು ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿದ್ದಾರೆ.

ಜೆಡಿ(ಎಸ್) ಪಕ್ಷವು ಇಲ್ಲಿ ಸಿಪಿಐ(ಎಂ) ಗೆ ಬೆಂಬಲ ಘೋಷಿಸಿ ಅಭ್ಯರ್ಥಿಯ ಗೆಲುವಿಗೆ ಕೆಲಸ ಮಾಡುತ್ತಿದೆ. ಅದೇ ರೀತಿ ಸಂಯುಕ್ತ ರೈತ ಸಂಘಟನೆಗಳ ಹೋರಾಟ ಸಮಿತಿ, ದಲಿತ ಸಂಘಟನೆಗಳು ಸೇರಿದಂತೆ ಹಲವು ಪ್ರಗತಿಪರ ಸಂಘಟನೆಗಳು ಸಿಪಿಐ(ಎಂ) ಅಭ್ಯರ್ಥಿಗೆ ಬೆಂಬಲ ಘೋಷಿಸಿ ಗೆಲುವಿಗಾಗಿ ಶ್ರಮಿಸುತ್ತಿವೆ.

ಕೆಲ ವರ್ಷಗಳ ಹಿಂದೆ ಸಿಪಿಐ(ಎಂ)ನಿಂದ ಉಚ್ಚಾಟಿತರಾಗಿ ಬಳಿಕ ಕಟ್ಟಿದ ಪಿ.ಎಸ್.ಎಸ್. ಎಂಬ ಸಂಘಟನೆಯಲ್ಲಿನ ಕೆಲವರು ಮಿಥುನ್ ರೆಡ್ಡಿ ಎಂಬ ಬಿಜೆಪಿಯ ಯುವಮೋರ್ಚಾದ ಅಧ್ಯಕ್ಷನಾಗಿದ್ದ ಬೆಂಗಳೂರಿನ ಹಣ ಬಲದ ವ್ಯಕ್ತಿಯನ್ನು ಬಾಗೇಪಲ್ಲಿ ಕ್ಷೇತ್ರದಲ್ಲಿ ಕಣಕ್ಕಿಳಿಸಿದ್ದಾರೆ. ಸಿಪಿಐ(ಎಂ) ಶಾಸಕರಾಗಿದ್ದ ದಿವಂಗತ ಜಿ.ವಿ.ಶ್ರೀರಾಮರೆಡ್ಡಿಯವರ ನಿಜ ವಾರಸುದಾರ ತಾನೇ ಎಂದು ಪ್ರಚಾರ ಮಾಡುತ್ತಿದ್ದಾರೆ! ಆಮ್ ಆದ್ಮಿ ಪಕ್ಷವೂ ಸಹ ಇಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದೆ. ಆಪ್ ಗೂ ಜಿ.ವಿ.ಶ್ರೀರಾಮರೆಡ್ಡಿಯೇ 'ಐ ಕಾನ್'! ಈ ಅಭ್ಯರ್ಥಿಗೂ ಜಿವಿಎಸ್ ನೆರಳೇ ಬೇಕು! ತನ್ನ ಪಕ್ಷದ ಬಗ್ಗೆ, ಕೇಜ್ರಿವಾಲ್ ಸರಕಾರದ ಸಾಧನೆಗಳಿಗಿಂತ ಪ್ರಧಾನವಾಗಿ ಸಿಪಿಐ(ಎಂ) ಅನ್ನು ಆರಂಭದಿಂದಲೇ ಟೀಕಿಸುವ ಪ್ರಚಾರ ಮುಂದುವರಿಸಿದೆ. ಜನಾರ್ಧನರೆಡ್ಡಿಯವರ ಕಲ್ಯಾಣ ಕರ್ನಾಟಕ ಪಕ್ಷವೂ ಸ್ಪರ್ದೆಯಲ್ಲಿದೆ. ಒಟ್ಟು 15 ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದಾರೆ.

ಬಾಗೇಪಲ್ಲಿ, ಗುಡಿಬಂಡೆ, ಇದೀಗ ಚೇಳೂರು ನೂತನ ತಾಲ್ಲೂಕುಗಳನ್ನು ಒಳಗೊಂಡಿರುವ ಬಾಗೇಪಲ್ಲಿ ಕ್ಷೇತ್ರದಲ್ಲಿ ಒಟ್ಟು 2,01,021 ಮತದಾರರ ಪೈಕಿ, 1,01,367 ಮಹಿಳಾ ಮತದಾರರಿದ್ದು, ಇದು ಮಹಿಳಾ ಪ್ರಧಾನ ಕ್ಷೇತ್ರವಾಗಿದೆ. ಜನರ ಬದುಕಿನ ಜ್ವಲಂತ ಸಮಸ್ಯೆಗಳನ್ನು ನಗಣ್ಯಗೊಳಸಿ ಜಾತಿ, ಒಳಜಾತಿಗಳ ಆಧಾರದಲ್ಲಿ ಲೆಕ್ಕಾಚಾರ ಮಾಡುವ ಪ್ರವೃತ್ತಿ ಹೆಚ್ಚಿನ ಪಕ್ಷಗಳಲ್ಲಿದೆ. ಜಾತಿ ಸಂಯೋಜನೆಯನ್ನು ಗಮನಿಸುವುದಾದರೆ ಒಕ್ಕಲಿಗರು 60,000, ಬಲಿಜಿಗರು 40,000, ಪರಿಶಿಷ್ಟ ಜಾತಿ 35,000(ಶೇ 26), ಪ.ಪಂಗಡ 25,000(ಶೇ.17) ಹಾಗೂ ಮುಸ್ಲಿಂ ಜನಸಂಖ್ಯೆ 15,000 ಇದೆ ಎಂಬ ಅಂದಾಜುಗಳಿವೆ.

ಸ್ವಾತಂತ್ರ್ಯಾ ನಂತರದಲ್ಲಿ ಆರಂಭದ ಎರಡು ದಶಕಗಳ ಕಾಲ ಬಾಗೇಪಲ್ಲಿಯು ಎಸ್.ಸಿ. ಮೀಸಲು ಕ್ಷೇತ್ರವಾಗಿತ್ತು. ನಂತರದಲ್ಲಿ ಸಾಮಾನ್ಯ ಕ್ಷೇತ್ರವಾಗಿದೆ. ಇಲ್ಲಿಯವರೆಗೆ ಒಟ್ಟು 8 ಬಾರಿ ಕಾಂಗ್ರೆಸ್, 3 ಬಾರಿ ಸಿಪಿಐ(ಎಂ), 3 ಬಾರಿ ಸ್ವತಂತ್ರ ಅಭ್ಯರ್ಥಿಗಳು ಇಲ್ಲಿ ಗೆದ್ದಿದ್ದಾರೆ. 1983 ರಲ್ಲಿ ಸಿಪಿಐ(ಎಂ)ನ ಅಪ್ಪಾಸ್ವಾಮಿ ರೆಡ್ಡಿ, 1994 ಮತ್ತು 2004 ರಲ್ಲಿ ಜಿ.ವಿ.ಶ್ರೀರಾಮರೆಡ್ಡಿ ಯವರು ಗೆದ್ದಿದ್ದರು. ಬಿಜೆಪಿ ಇಲ್ಲಿಯವರೆಗೂ ಈ ಕ್ಷೇತ್ರದಲ್ಲಿ ಗೆದ್ದಿಲ್ಲ. ಒಂದು ಮತದ ನೆಲೆಯನ್ನೂ ಸೃಷ್ಟಿಸಿಕೊಳ್ಳಲೂ ಆಗಿಲ್ಲ.

ವ್ಯಾಪಕ ಅಸಮಾಧಾನ

ಎರಡು ಅವಧಿಗೆ ಶಾಸಕರಾಗಿದ್ದ ಸುಬ್ಬಾರೆಡ್ಡಿಯವರು, ತಮಗೆ ನೂರಾರು ಎಕರೆ ಜಮೀನು ಖರೀದಿಸಿರುವುದು, ತಮ್ಮ ಮಾಲೀಕತ್ವದ ಬಾರ್‌ಗಳ ಸಂಖ್ಯೆ ಹೆಚ್ಚಿಸಿಕೊಂಡಿಸಿರುವುದು ಬಿಟ್ಟರೆ, ಕ್ಷೇತ್ರದ ಜನತೆಗೆ ಯಾವುದೇ ಪ್ರಯೋಜನ ಆಗಿಲ್ಲ, ಅಭಿವೃದ್ದಿ ಕೆಲಸಗಳೂ ಇಲ್ಲವೇ ಇಲ್ಲ ಎಂದು ಕ್ಷೇತ್ರದ ಜನರು ವ್ಯಾಪಕವಾಗಿ ದೂರುತ್ತಿದ್ದಾರೆ. ಜೊತೆಗೆ ಸುಬ್ಬಾರೆಡ್ಡಿಯವರು ಕ್ಷೇತ್ರದ ಹೊರಗಿನವರಾಗಿದ್ದು, ಸ್ಥಳೀಯವಾಗಿ ವಾಸವಿಲ್ಲ, ಅತಿಥಿಯಂತೆ ವಾರದಲ್ಲಿ ಯಾವಾಗಲೋ ಬಂದು, ಅರ್ದ ದಿನವಿದ್ದು ಜನರ ಕಷ್ಟಗಳನ್ನು ಕೇಳದೇ ಹೊರಟು ಹೋಗುತ್ತಾರೆ ಎಂಬ ಅಸಮಾಧಾನಗಳು ವ್ಯಕ್ತವಾಗುತ್ತಿವೆ. ಹಣ ಬಲವನ್ನೇ ನಂಬಿರುವ ಸುಬ್ಬಾರೆಡ್ಡಿಯವರು ಎಷ್ಟೇ ಹಣ ಚೆಲ್ಲಿದರೂ ಮೂರನೇ ಬಾರಿ ಗೆಲ್ಲುವುದಿಲ್ಲ ಎಂದೂ ಜನರು ಹೇಳುತ್ತಿದ್ದಾರೆ.


ಇನ್ನೂ ಬಿಜೆಪಿ ಅಭ್ಯರ್ಥಿಯೂ ಸಹ ಕ್ಷೇತ್ರದ ಹೊರಗಿನವರಾಗಿದ್ದು, ಕ್ಷೇತ್ರದ ಜನತೆಯೊಂದಿಗೆ ಅವರಿಗೆ ನಿಕಟ ಬಾಂಧವ್ಯವಿಲ್ಲ, ಕೇವಲ ರಿಯಲ್ ಎಸ್ಟೇಟ್ ಇತ್ಯಾದಿಗಳ ಮೂಲಕ ಗಳಿಸಿದ ಕಪ್ಪುಹಣದ ಬಲದ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಹಣಬಲಕ್ಕೆ ಜಾತಿಬಲವನ್ನು ಜೋಡಿಸಿ ಗೆಲ್ಲಲು ಪ್ರಯತ್ನಿಸುತ್ತಿದ್ದಾರೆ ಎಂದು ಕ್ಷೇತ್ರದಲ್ಲಿ ಜನರು ವ್ಯಾಪಕವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಇವರು ಬಿ. ಎಲ್. ಸಂತೋಷ್ ಮತ್ತು ಬಿ.ಎಸ್. ಯಡಿಯೂರಪ್ಪ ಇವರ ಅಭ್ಯರ್ಥಿ ಎಂದೂ ಹೇಳಲಾಗುತ್ತಿದೆ. ಸಚಿವ ಕೆ. ಸುಧಾಕರ್ ಅವರ ಅಭ್ಯರ್ಥಿ ಕೋನಪ್ಪರೆಡ್ಡಿ ಟಿಕೆಟ್ ಪಡೆಯುವಲ್ಲಿ ಸಫಲರಾಗಲಿಲ್ಲ ಎನ್ನುವುದೂ ಇದೆ. ಪ್ರಸ್ತುತ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರಕಾರದ ಭ್ರಷ್ಟಾಚಾರ, ದುರಾಡಳಿತ, ದುಷ್ಟ ನೀತಿಗಳು ಸಹ, ಕ್ಷೇತ್ರದಲ್ಲಿ ಮೊದಲೇ ನೆಲೆ ಇಲ್ಲದ ಬಿಜೆಪಿ ಅಭ್ಯರ್ಥಿಗೆ ತೊಡಕಾಗಿವೆ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಕಮ್ಯೂನಿಸ್ಟ್ ಚಳುವಳಿಯ ದಟ್ಟ ಪ್ರಭಾವ

ಜೋಡಿದಾರ್ ಪದ್ಧತಿ ಅಥವಾ ಜಮೀನ್ದಾರಿ ಪದ್ಧತಿಯ ವಿರುದ್ಧ ಭೂಮಿ ಹಕ್ಕಿಗಾಗಿ ನಡೆದ ಹೋರಾಟಗಳು, ಬಗರ್ ಹುಕುಂ ಸಾಗುವಳಿ ಭೂಮಿ ಹಕ್ಕಿಗಾಗಿ ನಡೆದ ರೈತ ಚಳುವಳಿಗಳು, ನೀರಾವರಿ ಹೋರಾಟಗಳು ಹೀಗೆ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಜನ ಚಳುವಳಿಗಳ ದಟ್ಟ ಪ್ರಭಾವ ಇರುವ ಬಾಗೇಪಲ್ಲಿ ಕ್ಷೇತ್ರವು ಹಿಂದೂ–ಮುಸ್ಲಿಂ ಇತ್ಯಾದಿ ಸಮುದಾಯಗಳ ನಡುವಿನ ಕೋಮುಸೌಹಾರ್ದತೆಗೂ ಹೆಸರಾಗಿದ್ದು ಇಲ್ಲಿ ಮತೀಯವಾದಿ ಪ್ರಚಾರಗಳಿಗೆ ಹೇಳಿಕೊಳ್ಳುವ ಬೆಂಬಲವೇನೂ ಇಲ್ಲ. ಆದರೆ ಬಿಜೆಪಿಯು, ಜಿ.ವಿ.ಶ್ರೀರಾಮರೆಡ್ಡಿಯವರ ಫೋಟೋ ಹಾಕಿಕೊಂಡ ಪ್ರಚಾರ ನಡೆಸುತ್ತಿರುವ ಪಿ.ಎಸ್.ಎಸ್. ಸಂಘಟನೆಯ ಅಭ್ಯರ್ಥಿಯನ್ನು, ಸಿಪಿಐ(ಎಂ) ಅಭ್ಯರ್ಥಿಯನ್ನು ಸೋಲಿಸುವ ಉದ್ದೇಶಕ್ಕೆ ಬಳಕೆ ಮಾಡಲು ಪ್ರಯತ್ನಿಸುತ್ತಿರುವುದು ಗುಟ್ಟಾಗೇನೂ ಉಳಿದಿಲ್ಲ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಐದಾರು ದಶಕಗಳಿಂದಲೂ ನಡೆಯುತ್ತಾ ಬಂದಿರುವ ರೈತ ಚಳುವಳಿ, ಎ.ಕೆ. ಗೋಪಾಲನ್ ಅವರು ಸಹ ಪಾಲ್ಗೊಂಡ ಜೋಡಿದಾರ್ ಪದ್ಧತಿ ವಿರುದ್ಧದ ಚಳುವಳಿಗಳನ್ನು ನೆನಪಿಟ್ಟುಕೊಂಡಿರುವ ಹಿರಿಯರು ಈಗಲೂ ಇದ್ದು, ತಲೆಮಾರಿನಿಂದ ತಲೆಮಾರಿಗೆ ಕಮ್ಯೂನಿಸ್ಟ್ ಚಳುವಳಿಯ ಪ್ರಭಾವವೂ ಹರಿದು ಬರುತ್ತಿದೆ. ಇದಲ್ಲದೇ ಸಿಪಿಐ(ಎಂ) ಶಾಸಕರಾಗಿ ಎರಡು ಅವಧಿಯಲ್ಲಿ ಜಿ.ವಿ.ಶ್ರೀರಾಮರೆಡ್ಡಿಯವರು ಕೈಗೊಂಡ ಹತ್ತಾರು ಸರಕಾರಿ ಶಾಲೆ–ಕಾಲೇಜು–ಆಸ್ಪತ್ರೆ–ರಸ್ತೆ, ಐ.ಟಿ.ಐ ಕಾಲೇಜ್, ವಂಡಮಾನ್ ಡ್ಯಾಂ, ಪರಗೋಡು ಡ್ಯಾಂ, ಹಂಪಸಂದ್ರ ಹೊಸಕೆರೆ ಡ್ಯಾಂ, ಮರಿಮಾಕಲಪಲ್ಲಿ ಡ್ಯಾಂ ಮುಂತಾದ

ಅಣೆಕಟ್ಟೆಗಳು, ಹಲವಾರು ಬಸ್ ನಿಲ್ದಾಣಗಳು, ಡಿಪೋಗಳು, ವಿದ್ಯುತ್ ಟ್ರಾನ್ಸಾಮರ್‌ಗಳು, ಜೋಡಿ ರಸ್ತೆ ಮುಂತಾದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಹಾಗೂ ವಿಧಾನ ಸಭೆಯಲ್ಲಿ ಸಿಪಿಐಎಂ ಶಾಸಕ ಶ್ರೀರಾಮರೆಡ್ಡಿಯವರ ಜನಪರ ಮಧ್ಯಪ್ರವೇಶವನ್ನು ಜನರು ನೆನಪಿಸಿಕೊಳ್ಳುತ್ತಿದ್ದಾರೆ ಮತ್ತು ಸುಬ್ಬಾರೆಡ್ಡಿಯವರ ಅವಧಿಯ ಪ್ರಗತಿ–ಕೆಲಸದೊಂದಿಗೆ ಹೋಲಿಕೆ ಮಾಡುತ್ತಿದ್ದಾರೆ. ಬಾಗೇಪಲ್ಲಿಯ ಹೆಸರು ಕರ್ನಾಟಕದದ್ಯಂತ ಜನ ಗುರುತಿಸುವಂತೆ ಮಾಡಿದ ಸಿಪಿಐ(ಎಂ) ಬಗ್ಗೆ ಹೆಮ್ಮೆ ಪಡುತ್ತಾರೆ.



ಪ್ರಸ್ತುತ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಯಾಗಿರುವ ಡಾ. ಅನಿಲ್ ಕುಮಾರ್ ಅವರು ಸ್ಥಳೀಯರಾಗಿದ್ದು, ದಶಕಗಳಿಂದಲೂ ಕ್ಷೇತ್ರದ ಜನರೊಂದಿಗೆ ಆತ್ಮೀಯ ಒಡನಾಟವುಳ್ಳ ಸಾಮಾಜಿಕ ಕಾರ್ಯಕರ್ತರಾಗಿದ್ದು, ಪ್ರಜಾವೈದ್ಯರೆಂದೇ ಖ್ಯಾತರಾಗಿದ್ದಾರೆ. ಕೊರೊನಾ ಬಿಕ್ಕಟ್ಟಿನ ಕಾಲದಲ್ಲಿ ವ್ಯಾಪಕವಾಗಿ 'ಗ್ರಾಮ ಆರೋಗ್ಯ ಯುವ ಪಡೆ' ಎಂಬ ಸ್ವಯಂ ಸೇವಕರ ಗುಂಪುಗಳನ್ನು ರಚಿಸಿ – ಹಳ್ಳಿಹಳ್ಳಿಗಳಲ್ಲಿ 'ಪ್ರಾಥಮಿಕ ಚಿಕಿತ್ಸಾ ಕೇಂದ್ರ'ಗಳನ್ನು ಸ್ಥಾಪಿಸಿ, ತಮ್ಮ ಪೀಪಲ್ಸ್ ಆಸ್ಪತ್ರೆಯನ್ನೇ ಕೋವಿಡ್ ಚಿಕಿತ್ಸಾ ಕೇಂದ್ರವನ್ನಾಗಿಸಿ ಸಾವಿರಾರು ಜನರಿಗೆ ಚಿಕಿತ್ಸೆ ನೀಡಿ ನೂರಾರು ಅಮೂಲ್ಯ ಜೀವಗಳನ್ನು ಉಳಿಸಿದ ಹೆಗ್ಗಳಿಕೆ ಹೊಂದಿದ್ದಾರೆ.

ಡಾ. ಅನಿಲ್ ಕುಮಾರ್ ಅವರು ವೈದ್ಯ ದಂಪತಿ ಹಾಗೂ ತಮ್ಮ ತಂದೆ–ತಾಯಿಗಳಾದ ಡಾ. ರಾಮಪ್ಪ–ಡಾ. ಸರೋಜಮ್ಮ ಮತ್ತು ಆ ವೈದ್ಯ ಕುಟುಂಬದ ಪರಂಪರೆಯತೆಯೆ ಜನ ಸಾಮಾನ್ಯರು ಮತ್ತು ಬಡವರಿಗೆ ಅತ್ಯುತ್ತಮ ವೈದ್ಯಕೀಯ ಸೇವೆಯನ್ನು ನೀಡುವ ಪರಂಪರೆಯನ್ನು ಮುಂದುವರಿಸಿದ್ದು ಬಡ ರೋಗಿಗಳಿಗೆ ಚಿಕಿತ್ಸೆಗೆ ಸಾವಿರಾರು ಉಚಿತ ಕಾರ್ಡು ನೀಡುವ ಮೂಲಕವೂ ಸಾಕಷ್ಟು ಜನಪ್ರೀತಿಯನ್ನು ಗಳಿಸಿದ್ದಾರೆ.

ಹತ್ತಾರು ದಲಿತ ಕೇರಿಗಳಲ್ಲಿ ಮಕ್ಕಳಿಗೆ ವಿಶೇಷ ಪಾಠ ಶಾಲೆಗಳನ್ನು ಏರ್ಪಡಿಸಿ, ದಲಿತ ಸಬಲೀಕರಣಕ್ಕಾಗಿ ಶ್ರಮಿಸುತ್ತಿರುವ ಕೆಲಸಗಳು, 'ಜನಪದವಾಗಲಿ ಸಂವಿಧಾನ' ಎಂಬ ಘೋಷಣೆಯಡಿ, ಭಾರತದ ಸಂವಿಧಾನ ಹಾಗೂ ಜನರ ಮೂಲಭೂತ ಹಕ್ಕುಗಳ ಬಗೆಗೆ ಜಾಗೃತಿ ಮೂಡಿಸಿದ ಯುವಜನರ ನಡುವಿನ ಚಟುವಟಿಕೆಗಳು, ಹಾಗೆಯೇ ಶಾಶ್ವತ ನೀರಾವರಿ ಹೋರಾಟದ ನೇತಾರ ಜಿ.ವಿ. ಶ್ರೀರಾಮರೆಡ್ಡಿಯವರೊಂದಿಗೆ ಸೇರಿ, ಶಾಶ್ವತ ನೀರಾವರಿ ವ್ಯವಸ್ಥೆಗಾಗಿ ನಡೆಸಿದ ಚಳುವಳಿ, ಚಿಕ್ಕಬಳ್ಳಾಪುರ ಜಿಲ್ಲೆಗೆ ಕೃಷ್ಣ ನದಿ ನೀರಿನ ಪಾಲು ಹಂಚಿಕೆ ತೀರ್ಪಿಗಾಗಿ ಡಾ. ಅನಿಲ್ ಕುಮಾರ್ ನಡೆಸಿದ ಯಶಸ್ವಿ ಕಾನೂನು ಹೋರಾಟ ಮುಂತಾದವುಗಳ ಮೂಲಕ ಜನಪ್ರಿಯರಾಗಿದ್ದಾರೆ.

ಬೆಂಗಳೂರಿನ ಹೊರಗೆ ಜಿಲ್ಲೆ–ತಾಲ್ಲೂಕುಗಳಲ್ಲಿ ಕೈಗಾರಿಕೆಗಳ ಸ್ಥಾಪನೆ, ಔದ್ಯೋಗಿಕ ಬೆಳವಣಿಗೆ, ವ್ಯಾಪಕ ಉದ್ಯೋಗ ಸೃಷ್ಟಿಸಬೇಕು, ಪ್ರತಿ ಕುಟುಂಬದ ಆದಾಯ ಹೆಚ್ಚಬೇಕು, ಆರ್ಥಿಕವಾಗಿ ಪ್ರತಿ ಕುಟುಂಬವೂ ಸ್ವಾವಲಂಬಿ ಆಗಬೇಕು ಎಂಬ ಡಾ.ಅನಿಲ್ ಅವರ ಜನಪರ ಕಣ್ಣೋಟವು ಜನರ ಗಮನ ಸೆಳೆದಿದೆ. 'ಸರ್ವ ಜನಾಂಗದ ಶಾಂತಿಯ ತೋಟ'ವೆಂಬ ಹಿರಿಮೆಯ ಕರ್ನಾಟಕದಲ್ಲಿ, ಹಿಂದೂ–ಮುಸ್ಲಿಂ–ಕ್ರೈಸ್ತ ಜನರ ಸಹಬಾಳ್ವೆಯ ರಕ್ಷಣೆಗೆ ಬದ್ಧವಾಗಿ ಕೆಲಸ ಮಾಡುವೆ ಎಂಬ ಸೌಹಾರ್ದಪರ ನಿಲುವುಗಳು ಸಹ ಜನಮನವನ್ನು ಗೆಲ್ಲಲು ನೆರವಾಗುತ್ತಿವೆ.

ಈ ಎಲ್ಲವುಗಳ ಫಲವಾಗಿ ಬಾಗೇಪಲ್ಲಿ ಕ್ಷೇತ್ರದಲ್ಲಿ ಸಿಪಿಐ(ಎಂ) ಪರವಾದ ಒಂದು ಪ್ರಬಲವಾದ ಅಲೆಯು ಸೃಷ್ಟಿಯಾಗಿರುವುದು ಸ್ಪಷ್ಟವಾಗಿಯೇ ಎದ್ದು ಕಾಣುತ್ತಿದೆ. ಅದರಲ್ಲೂ ಈ ಹಿಂದೆ ಅಷ್ಟೊಂದು ಬಲ ಇಲ್ಲದಿದ್ದ ಗುಡಿಬಂಡೆ, ಚೇಳೂರುಗಳಲ್ಲಿ ಹೊಸ ಹೊಸ ವಿಭಾಗದ ಜನರು ಅದರಲ್ಲೂ ದಲಿತ, ಹಿಂದುಳಿದ, ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ನೂರಾರು ಜನರು ಗುಂಪು ಗುಂಪುಗಳಲ್ಲಿ ಪ್ರತಿ ದಿನವೂ ಎಂಬಂತೆ ಸಿಪಿಐ(ಎಂ) ಬೆಂಬಲಿಗರಾಗಿ ಬಂದು ಸೇರುತ್ತಿದ್ದಾರೆ. ಗುಡಿಬಂಡೆ ಮತ್ತು ಚೇಳೂರುಗಳಲ್ಲಿ ನಡೆದ ಬಹಿರಂಗ ಸಭೆಗಳಲ್ಲಿ ಈ ಹಿಂದೆಂದಿಗಿಂತಲೂ ದೊಡ್ಡ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದು, ಅವರ ಉತ್ಸಾಹ ಹುರುಪುಗಳು, ನಾಯಕ–ನಾಯಕಿಯರ ಮಾತುಗಳಿಗೆ ವಿಶೇಷವಾಗಿ ಸ್ಪಂದಿಸುವ ರೀತಿಯು ಎಲ್ಲರ ಗಮನ ಸೆಳೆಯುತ್ತಿದೆ.

ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡದ ತಾಂಡಾಗಳಲ್ಲಿ ಪಕ್ಷದ ಬಗೆಗೆ ವಿಶೇಷ ಅಭಿಮಾನ ಇಟ್ಟುಕೊಂಡು, ಬದ್ಧತೆಯಿಂದ ಕೆಲಸ ಮಾಡುವ ಜನರು ಮತ್ತು ಯುವಜನರ ಪಡೆಯೇ ಇದ್ದು, ಅವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಇನ್ನು ಅಸಂಘಟಿತ ವಲಯದ ಕಾರ್ಮಿಕ ವಿಭಾಗ, ಕಟ್ಟಡ ಕಾರ್ಮಿಕರು, ಮೆಕಾನಿಕ್‌ಗಳು, ಕೂಲಿಕಾರರು ಮುಂತಾದ ನಾನಾ ದುಡಿಯುವ ಜನ ವಿಭಾಗಗಳೂ ಸಿಪಿಐ(ಎಂ) ಬೆಂಬಲಕ್ಕೆ ನಿಂತಿವೆ. ಕ್ಷೇತ್ರದ ವೈದ್ಯರು, ಆರ್.ಎಂ.ಪಿ. ವೈದ್ಯರು ವಕೀಲರು, ಮೆಕಾನಿಕ್ ಗಳು, ವಿವಿಧ ಸಾಮಾಜಿಕ ಗುಂಪುಗಳು ಮುಂತಾದ ನಾನಾ ವೃತ್ತಿಗಳ ಜನರು ಸಿಪಿಐ(ಎಂ) ಅಭ್ಯರ್ಥಿಗೆ ಬೆಂಬಲ ಘೋಷಿಸಿದ್ದು ಕಾರ್ಯಕರ್ತರಲ್ಲಿ ಇನ್ನಷ್ಟು ಉತ್ಸಾಹವನ್ನು ತುಂಬಿದೆ.

ಕಳೆದ ಎರಡು ತಿಂಗಳಿನಿಂದಲೇ ಕಲಾವಿದರ ಎರಡು ತಂಡಗಳು ಇಡೀ ಕ್ಷೇತ್ರದಲ್ಲಿ ಕಲಾ ಪ್ರದರ್ಶನಗಳ ಮೂಲಕ ಪ್ರಚಾರವನ್ನು ಕೈಗೊಂಡಿದ್ದಾರೆ. 9 ವಾಹನಗಳಲ್ಲಿ ಕಾರ್ಯಕರ್ತರು ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡುತ್ತಿದ್ದಾರೆ. ಗ್ರಾಮ ಸಭೆ, ಗ್ರಾಮ ಸಮಿತಿ, ವಾರ್ಡ್ ಸಮಿತಿಗಳ ರಚನೆಯು ಕೊನೆ ಗಳಿಗೆಯವರೆಗೆ ಪ್ರಚಾರದ ಹುರುಪನ್ನು ಕಾಯ್ದುಕೊಂಡು ಹೋಗಲು ಮತ್ತು ವಿರೋಧಿಗಳ ಕುತಂತ್ರ ಮತ್ತು ಅಕ್ರಮಗಳ ಬಗೆಗೆ ಎಚ್ಚರ ವಹಿಸಲು ನೆರವಾಗಲಿದೆ. ಸಿಪಿಐ(ಎಂ) ಅಭ್ಯರ್ಥಿ ಈಗಾಗಲೇ ಎರಡು ಸುತ್ತು ಕ್ಷೇತ್ರದ ಬಹುತೇಕ ಎಲ್ಲ ಮನೆಗಳಿಗೂ ಭೇಟಿ ನೀಡಿ ಜನರ ವಿಶ್ವಾಸ ಗೆಲ್ಲುವ ಪ್ರಯತ್ನ ಮಾಡಿದ್ದು ಈಗಲೂ ಜನರ ಭೇಟಿ ಮುಂದುವರಿದಿದೆ. ಸೀಮಿತ ಸಂಪನ್ಮೂಲಗಳಿದ್ದರೂ, ಅಸೀಮ ಬದ್ಧತೆಯ ಕಾರ್ಯಕರ್ತರೇ ಸಿಪಿಐ(ಎಂ) ಪಕ್ಷದ ಬಂಡವಾಳವಾಗಿದ್ದು ಕಾರ್ಯಕರ್ತರು ಉತ್ಸಾಹದಿಂದ ಮತ್ತು ಗೆಲ್ಲುವ ವಿಶ್ವಾಸದಿಂದ ಕೆಲಸ ಮಾಡುತ್ತಿದ್ದಾರೆ.

ಚುನಾವಣೆಯಲ್ಲಿ ಬಿಜೆಪಿ–ವಿರೋಧಿ ಮತಗಳ ಕ್ರೋಢೀಕರಣವನ್ನು ಹೆಚ್ಚಿಸಲು ಕಾರ್ಯತಂತ್ರಗಳನ್ನು ರೂಪಿಸಬೇಕು–ಸಿಪಿಐ(ಎಂ) ಕೇಂದ್ರ ಸಮಿತಿ

ಬಿಜೆಪಿಯನ್ನು ಪ್ರತ್ಯೇಕಿಸಿ ಸೋಲಿಸುವುದು ದೇಶ ಮತ್ತು ಜನತೆಯ ಮುಂದಿರುವ ಪ್ರಧಾನ ಕಾರ್ಯಭಾರ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಪುನರುಚ್ಚರಿಸಿದೆ. ಇದನ್ನು ಸಾಧಿಸಲು, ಸಿಪಿಐ(ಎಂ) ಜಾತ್ಯತೀತ ಪ್ರತಿಪಕ್ಷಗಳೊಂದಿಗೆ ಸಹಕರಿಸುತ್ತದೆ ಮತ್ತು ಒಟ್ಟಾಗಿ ಕೆಲಸ ಮಾಡುತ್ತದೆ ಎಂದು ಅದು ಹೇಳಿದೆ.

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು ಮತ್ತು ದ್ವೇಷ ಮತ್ತು ಹಿಂಸೆಯ ವಿಷಕಾರಿ ಪ್ರಚಾರಗಳಿಗೆ ಪ್ರತಿರೋಧ, ಅದಾನಿ ಹಗರಣ, ಕೇಂದ್ರೀಯ ಸಂಸ್ಥೆಗಳ ದುರ್ಬಳಕೆ, ಜಾತಿ ಗಣತಿ ನಡೆಸುವುದು, ಒಕ್ಕೂಟ ತತ್ವದ ಮೇಲೆ ಪ್ರಹಾರಗಳು ಮುಂತಾದ ರಾಷ್ಟ್ರೀಯ ಮಹತ್ವದ ವಿಷಯಗಳ ಮೇಲೆ ಜಾತ್ಯತೀತ ಪ್ರತಿಪಕ್ಷಗಳ ಗರಿಷ್ಠ ಒಗ್ಗಟ್ಟನ್ನು ಬೆಸೆಯಬೇಕು ಮತ್ತು ಇಂತಹ ಪ್ರಶ್ನೆಗಳನ್ನು ಎತ್ತಿ ತೋರಿಸಬೇಕು. ಇದಲ್ಲದೆ, ಜನರ ಜೀವನೋಪಾಯದ ಮೇಲಿನ ದಾಳಿಗಳ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಎಲ್ಲಾ ಜಾತ್ಯತೀತ ಶಕ್ತಿಗಳ ಒಗ್ಗಟ್ಟನ್ನು ಬೆಸೆಯಬೇಕು ಮತ್ತು ಪ್ರತಿ ರಾಜ್ಯದಲ್ಲೂ, ಅಲ್ಲಿರುವ ಮೂರ್ತ ಪರಿಸ್ಥಿತಿಗಳಿಗೆ ಅನುಗುಣವಾಗಿ, ಜಾತ್ಯತೀತ ಪ್ರತಿಪಕ್ಷಗಳು ಚುನಾವಣೆಯಲ್ಲಿ ಬಿಜೆಪಿ–ವಿರೋಧಿ ಮತಗಳ ಕ್ರೋಢೀಕರಣವನ್ನು ಹೆಚ್ಚಿಸಲು ಕಾರ್ಯತಂತ್ರಗಳನ್ನು ರೂಪಿಸಬೇಕು. ಪರಿಸ್ಥಿತಿಯು ರಾಜ್ಯದಿಂದ ರಾಜ್ಯಕ್ಕೆ ಬದಲಾಗುವುದರಿಂದ ಈ ವ್ಯವಸ್ಥೆಗಳು ಅಗತ್ಯವಾಗಿ ರಾಜ್ಯ–ನಿರ್ದಿಷ್ಟವಾಗಿರಬೇಕಾಗುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿಯು ಎಪ್ರಿಲ್30 ರಂದು ಪ್ರಕಟಿಸಿದ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದೆ.

ದೇಶ ಮತ್ತು ಜನರ ಜೀವನೋಪಾಯದ ಬಗ್ಗೆ ತಕ್ಷಣದ ಕಾಳಜಿಯ ವಿಷಯಗಳ ಕುರಿತು ರಾಷ್ಟ್ರವ್ಯಾಪಿ ಐಕ್ಯ ಕಾರ್ಯಾಚರಣೆಗಳನ್ನು ಪ್ರಾರಂಭಿಸಲು ಎಡಪಕ್ಷಗಳೊಂದಿಗೆ ಸಮಾಲೋಚಿಸಲು ಕೇಂದ್ರ ಸಮಿತಿಯು ನಿರ್ಧರಿಸಿದೆ.

ಇತರ ಜಾತ್ಯತೀತ ವಿರೋಧ ಪಕ್ಷಗಳೊಂದಿಗೆ ಸಮಾಲೋಚಿಸಿ ರಾಷ್ಟ್ರೀಯ ಮಹತ್ವದ ಪ್ರಶ್ನೆಗಳನ್ನು ಸಾರ್ವಜನಿಕ ಕಾರ್ಯಾಚರಣೆಗಳು ಮತ್ತು ಅಭಿವ್ಯಕ್ತಿಗಳ ಮೂಲಕ ಎತ್ತಲು ಅದು ನಿರ್ಧರಿಸಿದೆ.

ಏಪ್ರಿಲ್ 27–29 ರಂದು ನವದೆಹಲಿಯಲ್ಲಿ ಕೇಂದ್ರ ಸಮಿತಿ ಸಭೆ ಸೇರಿತ್ತು. ಸಭೆಯ ನಂತರ ನೀಡಿರುವ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:

ಗಂಭೀರ ಆರ್ಥಿಕ ಪರಿಸ್ಥಿತಿ

ಐಎಂಎಫ್ ಪ್ರಕಾರ, ಭಾರತದ ಜಿಡಿಪಿ ಬೆಳವಣಿಗೆಯು ವಿಶ್ವದ ದೊಡ್ಡ ಆರ್ಥಿಕತೆಗಳಲ್ಲಿ ಅತ್ಯಂತ ವೇಗದ್ದಾಗಿದೆ. ಇದನ್ನು ಮುಂದಿಟ್ಟುಕೊಂಡು ಮೋದಿ ಸರ್ಕಾರವು ನಡೆಸುತ್ತಿರುವ ಅತಿಯಾದ ಪ್ರಚಾರ, 2021ರ ಹಣಕಾಸು ವರ್ಷದ ಶೇ.9.1 ರ ಬೆಳವಣಿಗೆಯನ್ನು ಲೆಕ್ಕ ಹಾಕಿರುವುದು 2020ರ ಶೇ.(–)5.8 ರ ಮೇಲೆ ಎಂಬ ಎಲ್ಲರಿಗೂ ಗೊತ್ತಿರುವ ಸತ್ಯವನ್ನು ಮರೆಮಾಚುತ್ತಿದೆ. 2019 ಕೊವಿಡ್– ಪೂರ್ವದ ಒಂದು ಸಾಮಾನ್ಯ ವರ್ಷವಾಗಿರುವುದರಿಂದ ಅದನ್ನು ಆಧರಿಸಿ ಸಂಯೋಜಿತ ವಾರ್ಷಿಕ ಬೆಳವಣಿಗೆಯ ದರವನ್ನು ಲೆಕ್ಕ ಹಾಕಿದರೆ ಭಾರತದ ವಾರ್ಷಿಕ ಬೆಳವಣಿಗೆಯು ಶೇ. 3.8. 2022 ರ ಮತ್ತು 2023 ರ ಹಣಕಾಸು ವರ್ಷದಲ್ಲಿ ಭಾರತವು ತನ್ನ ಆರ್ಥಿಕತೆಗೆ 350 ಶತಕೋಟಿ ಡಾಲರುಗಳನ್ನು ಸೇರಿಸಿದರೆ, ಅಮೆರಿಕ ಸಂಯುಕ್ತ ಸಂಸ್ಥಾನ(ಯುಎಸ್) 1390 ಶತಕೋಟಿ ಡಾಲರುಗಳನ್ನು ಮತ್ತು ಚೀನಾ 1274 ಶತಕೋಟಿ ಡಾಲರುಗಳನ್ನು ಸೇರಿಸಿವೆ. ಎಲ್ಲಾ ದೊಡ್ಡ ಆರ್ಥಿಕತೆಗಳಲ್ಲಿ ಭಾರತದ್ದೇ ಅತ್ಯಂತ ಕಡಿಮೆ ತಲಾ ಆದಾಯ. ತಲಾ ಆದಾಯದ ಪರಿಭಾಷೆಯಲ್ಲಿ ಯುಎಸ್ 31 ಪಟ್ಟು ಹೆಚ್ಚು, ಚೀನಾ 5 ಪಟ್ಟು, ಬ್ರೆಜಿಲ್ 4 ಪಟ್ಟು, ಯುಕೆ 18 ಪಟ್ಟು, ಜರ್ಮನಿ 20 ಪಟ್ಟು ಹೆಚ್ಚು ಹೊಂದಿವೆ. ಹೀಗಾಗಿ, ನಮ್ಮ ಜಿಡಿಪಿ ವಿಶ್ವದಲ್ಲಿ 5 ನೇ ಅತಿ ದೊಡ್ಡದು ಎಂದು ಹೇಳಿಕೊಂಡರೂ ನಮ್ಮ ತಲಾ ಆದಾಯವು ಅಂಗೋಲಾ, ಐವರಿ ಕೋಸ್ಟ್ ಇತ್ಯಾದಿಗಳಿಗಿಂತ ಕಡಿಮೆಯಾಗಿದೆ.

ಉತ್ಪಾದನೆ ಮತ್ತು ಕೈಗಾರಿಕಾ ವಲಯಗಳು ಹೆಚ್ಚೆಂದರೆ ಸ್ಥಗಿತತೆಯಲ್ಲಿವೆ, ಕುಸಿಯುತ್ತಿಲ್ಲ, ಅಷ್ಟೇ. 8 ಕೋಟಿ ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಫೆಬ್ರವರಿಯಲ್ಲಿ ಶೇ. 7.2 ಇದ್ದದ್ದು ಮಾರ್ಚ್‌ನಲ್ಲಿ ಶೇ. 3.6 ಕ್ಕೆ, ಅಂದರೆ ಅರ್ಧಕ್ಕೆ ಇಳಿದಿದೆ.

ಪರಿಣಾಮವಾಗಿ, ನಿರುದ್ಯೋಗ ದರವು ಸುಮಾರು ಶೇ.8 ರಷ್ಟು ದಾಖಲೆಯ ಗರಿಷ್ಠ ಮಟ್ಟದಲ್ಲಿಯೇ ಮುಂದುವರಿಯುತ್ತಿದೆ. ಉದ್ಯೋಗಿಗಳ ಸಂಖ್ಯೆಯು ಬಹುತೇಕ ಸ್ಥಗಿತಗೊಂಡಿದೆ– ಸಾಂಕ್ರಾಮಿಕ ಪೂರ್ವ ಜನವರಿ 2020 ರಲ್ಲಿ 41.1 ಕೋಟಿ ಇದ್ದರೆ, ಜನವರಿ 2023 ರಲ್ಲಿ 40.9 ಕೋಟಿ. ಕಳೆದ 8 ವರ್ಷಗಳಲ್ಲಿ ಗ್ರಾಮೀಣ ಕೂಲಿಗಳು ವಾಸ್ತವವಾಗಿ ಸ್ಥಗಿತಗೊಂಡಿವೆ. ಮನರೇಗ ಸ್ಕೀಮ್ ಹೆಚ್ಚು ಅಗತ್ಯವಿದ್ದರೂ, ಅದಕ್ಕೆ ಬಜೆಟ್ ಹಂಚಿಕೆಗಳನ್ನು 1/3 ರಷ್ಟು ಕಡಿತಗೊಳಿಸಲಾಗಿದೆ ಮತ್ತು ಕೂಲಿ ಪಾವತಿಯ ಬಾಕಿಗಳು ದೀರ್ಘಕಾಲದಿಂದ ಹಾಗೆಯೇ ಉಳಿದಿವೆ.

ಇಂತಹ ಪರಿಸ್ಥಿತಿಗಳಲ್ಲಿ ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿಯ ಕಾಮಗಾರಿಗಳಿಗೆ ಹೆಚ್ಚಿನ ಸಾರ್ವಜನಿಕ ವೆಚ್ಚವನ್ನು ಮಾಡಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ; ಇದು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ, ಜನರ ಖರೀದಿ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚಲು ಉತ್ತೇಜನೆ ನೀಡುತ್ತದೆ ಎಂದು ಅದು ಹೇಳಿದೆ.

ಅದಾನಿ ತನಿಖೆ

ಅದಾನಿ ಸಮೂಹದ ವಿರುದ್ಧದ ವಂಚನೆಯ ಆರೋಪಗಳನ್ನು ತನಿಖೆ ಮಾಡಲು ಸರ್ಕಾರವು ಸ್ಪಷ್ಟವಾಗಿ ನಿರಾಕರಿಸುತ್ತಿದ್ದು, ಸೆಬಿ ತನಿಖೆಯ ಸ್ಥಿತಿಗತಿ ವರದಿಯನ್ನು ಸಲ್ಲಿಸಲು ಸುಪ್ರೀಂ ಕೋರ್ಟ್ ವಿಧಿಸಿದ್ದ ಮೇ 2 ಗಡುವನ್ನು ಆರು ತಿಂಗಳ ವರೆಗೆ ವಿಸ್ತರಿಸಲು ಮನವಿ ಸಲ್ಲಿಸಿದೆ.

ಈ ಆರೋಪಗಳ ಸತ್ಯಾಸತ್ಯತೆ ಹೊರಬರಬೇಕಾದರೆ, ತನಿಖೆಗೆ ಜೆಪಿಸಿ ರಚಿಸುವುದು ಅವಶ್ಯಕ ಎಂದು ಕೇಂದ್ರ ಸಮಿತಿ ಪುನರುಚ್ಚರಿಸಿದೆ.

ಕುಸ್ತಿಪಟುಗಳ ಪ್ರತಿಭಟನೆ

ಲೈಂಗಿಕ ಕಿರುಕುಳದ ಆರೋಪಗಳ ವಿರುದ್ಧ ನ್ಯಾಯಕ್ಕಾಗಿ ಒತ್ತಾಯಿಸಿ ಭಾರತದ ಪದಕ ವಿಜೇತ ಕುಸ್ತಿಪಟುಗಳ ಪ್ರತಿಭಟನೆಗೆ ಕೇಂದ್ರ ಸಮಿತಿಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಆರಂಭಿಕ ಹಿಂಜರಿಕೆಯ ಹೊರತಾಗಿಯೂ, ದಿಲ್ಲಿ ಪೊಲೀಸರು ಭಾರತದ ಕುಸ್ತಿ ಒಕ್ಕೂಟ(ಡಬ್ಲ್ಯುಎಫ್‌ಐ) ಅಧ್ಯಕ್ಷ, ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸರಣ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಿಸಬೇಕಾಗಿ ಬಂದಿದೆ.

ಡಬ್ಲ್ಯುಎಫ್‌ಐ ಅಧ್ಯಕ್ಷರನ್ನು ಈ ಹುದ್ದೆಯಿಂದ ತೆಗೆದುಹಾಕಬೇಕು ಮತ್ತು ಎಫ್‌ಐಆರ್ ಮೇಲೆ ಪೊಲೀಸರು ತಕ್ಷಣ ಕ್ರಮ ಕೈಗೊಂಡು ಕಠಿಣ ಶಿಕ್ಷೆ ವಿಧಿಸಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಜಮ್ಮು ಮತ್ತು ಕಾಶ್ಮೀರ

ಜಮ್ಮು ಮತ್ತು ಕಾಶ್ಮೀರ 2018 ರಿಂದ ಚುನಾಯಿತ ವಿಧಾನಸಭೆ ಇಲ್ಲದೆ ಉಳಿದಿದೆ. ಕೇಂದ್ರ ಸರ್ಕಾರವು ಚುನಾವಣೆಗಳನ್ನು ನಡೆಸುವ ಮೊದಲು ಪೂರೈಸಲು ಮೂರು ಷರತ್ತುಗಳನ್ನು ಹಾಕಿತ್ತು–ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಳ್ಳಬೇಕು; ಮತದಾರರ ಪಟ್ಟಿಗಳ ಉನ್ನತೀಕರಣ ಮತ್ತು ಚುನಾವಣೆ ನಡೆಸಲು ಶಾಂತಿಯುತ ವಾತಾವರಣ. ಸರ್ಕಾರವೇ ಒಪ್ಪಿಕೊಂಡಂತೆ ಈ ಮೂರೂ ಈಡೇರಿವೆ. ಆದರೂ ಚುನಾವಣೆಗಳನ್ನು ನಡೆಸಲು ನಿರಾಕರಣೆ, ಆಳುವ ಮಂದಿಗೆ ತಮ್ಮ ಆಯ್ಕೆಯ ಸರ್ಕಾರವನ್ನು ರಚಿಸುವ ಬಗ್ಗೆ ಖಚಿತವಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಇದು ಜನರ ಮೂಲಭೂತ ಸಾಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ನಗ್ನ ಉಲ್ಲಂಘನೆಯಾಗಿದೆ.

ಕೂಡಲೇ ಚುನಾವಣೆ ನಡೆಸುವಂತೆ ಕೇಂದ್ರ ಸಮಿತಿ ಆಗ್ರಹಿಸಿದೆ.

ಅರಣ್ಯ ಸಂರಕ್ಷಣಾ ಕಾಯ್ದೆ ತಿದ್ದುಪಡಿ

ವ್ಯರ್ಥಗೊಂಡ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾದ ಈ ತಿದ್ದುಪಡಿಯು ವಿನಾಶಕಾರಿ, ಹವಾಮಾನ ಬದಲಾವಣೆಗಳ ಸವಾಲುಗಳನ್ನು ಹದಗೆಡಿಸುತ್ತದೆ ಮತ್ತು ಅದರ ಪರಿಣಾಮವು ಈಗಾಗಲೇ ದೇಶದಲ್ಲಿ ವಿವಿಧ ರೀತಿಯಲ್ಲಿ ಅನುಭವಕ್ಕೆ ಬರುತ್ತಿದೆ. ಈ ತಿದ್ದುಪಡಿಗಳು ತಮ್ಮ ಪ್ರದೇಶಗಳಲ್ಲಿನ ಯಾವುದೇ ಯೋಜನೆಗೆ ಒಪ್ಪಿಗೆ ನೀಡುವ ಅಥವಾ ತಡೆಹಿಡಿಯುವ ಗ್ರಾಮ ಸಭೆಗಳ ಸಾಂವಿಧಾನಿಕ ಮತ್ತು ಕಾನೂನು ಹಕ್ಕುಗಳನ್ನು ನಿರ್ಮೂಲಗೊಳಿಸುತ್ತವೆ; ಅರಣ್ಯ ಭೂಮಿಯನ್ನು ಬೇರೆಡೆಗೆ ತಿರುಗಿಸಲು ವಿಧಿ–ವಿಧಾನಗಳನ್ನು ಉದಾರೀಕರಿಸುತ್ತವೆ; ಅರಣ್ಯಗಳ ಖಾಸಗೀಕರಣವನ್ನು ಉತ್ತೇಜಿಸುತ್ತವೆ ಮತ್ತು ಅರಣ್ಯ ನಿರ್ವಹಣೆಯ ಮೇಲೆ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ದುರ್ಬಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವನ್ನು ನೀಡುತ್ತವೆ. ಇದು ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳ ಹಕ್ಕುಗಳ ಮೇಲೆ ಮತ್ತೊಂದು ಪ್ರಹಾರವಾಗಿದೆ ಹಾಗೂ ಪ್ರಸ್ತುತ ಅರಣ್ಯ ಹಕ್ಕುಗಳ ಕಾಯಿದೆಯ ನೇರ ಉಲ್ಲಂಘನೆಯಾಗಿದೆ.

ಈ ತಿದ್ದುಪಡಿಯನ್ನು ಹಿಂಪಡೆಯಬೇಕು.

ತ್ರಿಪುರಾ

ವಿಧಾನಸಭೆ ಚುನಾವಣೆಯ ನಂತರ ಆಡಳಿತಾರೂಢ ಬಿಜೆಪಿ ಹರಿಯ ಬಿಟ್ಟಿರುವ ಹಿಂಸಾಚಾರವನ್ನು ಕೇಂದ್ರ ಸಮಿತಿ ತೀವ್ರವಾಗಿ ಖಂಡಿಸಿದೆ. ದೈಹಿಕ ದಾಳಿಗಳ ಹೊರತಾಗಿ, ದೊಡ್ಡ ಪ್ರಮಾಣದ ಸುಲಿಗೆ ನಡೆಯುತ್ತಿದೆ ಮತ್ತು ಜನರು ಬೇಡಿಕೆಯ ಹಣವನ್ನು ಪಾವತಿಸದಿದ್ದರೆ ಅವರ ಆಸ್ತಿಗಳು, ಅಂಗಡಿಗಳು, ಆಟೋ ರಿಕ್ಷಾಗಳು ಮುಂತಾದ ಜೀವನೋಪಾಯದ ಸಾಧನಗಳನ್ನು ನಾಶಪಡಿಸುವುದಾಗಿ ಬೆದರಿಕೆ ಹಾಕುತ್ತಾರೆ. ಇದರಿಂದ ಲಕ್ಷಾಂತರ ಜನರ ಜೀವನ ಮತ್ತು ಜೀವನೋಪಾಯಗಳು ಹಾಳಾಗುತ್ತಿವೆ.

ಕೇಂದ್ರ ಸಮಿತಿಯು ಈ ಹಿಂಸಾಚಾರವನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಸಂವಿಧಾನದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ತಪ್ಪಿತಸ್ಥರನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿತು.

ಪ್ರತಿಪಕ್ಷಗಳ ನಡೆಗಳು

ಬಿಜೆಪಿಯನ್ನು ಪ್ರತ್ಯೇಕಿಸಿ ಸೋಲಿಸುವುದು ದೇಶ ಮತ್ತು ಜನತೆಯ ಮುಂದಿರುವ ಪ್ರಧಾನ ಕಾರ್ಯಭಾರ ಎಂದು ಕೇಂದ್ರ ಸಮಿತಿ ಪುನರುಚ್ಚರಿಸಿದೆ. ಇದನ್ನು ಸಾಧಿಸಲು, ಸಿಪಿಐ(ಎಂ) ಜಾತ್ಯತೀತ ಪ್ರತಿಪಕ್ಷಗಳೊಂದಿಗೆ ಸಹಕರಿಸುತ್ತದೆ ಮತ್ತು ಒಟ್ಟಾಗಿ ಕೆಲಸ ಮಾಡುತ್ತದೆ.

ಕೋಮು ಧ್ರುವೀಕರಣದ ತೀಕ್ಷ್ಣಗೊಳಿಸುವುದು, ದ್ವೇಷ ಮತ್ತು ಹಿಂಸೆಯ ವಿಷಕಾರಿ ಪ್ರಚಾರಗಳು, ಅದಾನಿ ಹಗರಣ, ಕೇಂದ್ರೀಯ ಸಂಸ್ಥೆಗಳ ದುರ್ಬಳಕೆ, ಜಾತಿ ಗಣತಿ ನಡೆಸುವುದು, ಒಕ್ಕೂಟ ತತ್ವದ ಮೇಲೆ ಪ್ರಹಾರಗಳು, ಮುಂತಾದ ರಾಷ್ಟ್ರೀಯ ಮಹತ್ವದ ವಿಷಯಗಳ ಮೇಲೆ ಜಾತ್ಯತೀತ ಪ್ರತಿಪಕ್ಷಗಳ ಗರಿಷ್ಠ ಒಗ್ಗಟ್ಟನ್ನು ಬೆಸೆಯಬೇಕು ಮತ್ತು ಇಂತಹ ಪ್ರಶ್ನೆಗಳನ್ನು ಎತ್ತಿ ತೋರಿಸಬೇಕು. ಇದಲ್ಲದೆ, ಜನರ ಜೀವನೋಪಾಯದ ಮೇಲಿನ ದಾಳಿಗಳ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಎಲ್ಲಾ ಜಾತ್ಯತೀತ ಶಕ್ತಿಗಳ ಒಗ್ಗಟ್ಟನ್ನು ಬೆಸೆಯಬೇಕು ಮತ್ತು ಪ್ರತಿ ರಾಜ್ಯದಲ್ಲೂ, ಅಲ್ಲಿರುವ ಮೂರ್ತ ಪರಿಸ್ಥಿತಿಗಳಿಗೆ ಅನುಗುಣವಾಗಿ, ಜಾತ್ಯತೀತ ಪ್ರತಿಪಕ್ಷಗಳು ಚುನಾವಣೆಯಲ್ಲಿ ಬಿಜೆಪಿ–ವಿರೋಧಿ ಮತಗಳ ಕ್ರೋಢೀಕರಣವನ್ನು ಹೆಚ್ಚಿಸಲು ಕಾರ್ಯತಂತ್ರಗಳನ್ನು ರೂಪಿಸಬೇಕು. ಪರಿಸ್ಥಿತಿಯು ರಾಜ್ಯದಿಂದ ರಾಜ್ಯಕ್ಕೆ ಬದಲಾಗುವುದರಿಂದ ಈ ವ್ಯವಸ್ಥೆಗಳು ಅಗತ್ಯವಾಗಿ ರಾಜ್ಯ–ನಿರ್ದಿಷ್ಟವಾಗಿರಬೇಕಾಗುತ್ತದೆ.

ಕೇಂದ್ರ ಸಮಿತಿ ಕರೆಗಳು:

ದೇಶ ಮತ್ತು ಜನರ ಜೀವನೋಪಾಯದ ಬಗ್ಗೆ ತಕ್ಷಣದ ಕಾಳಜಿಯ ವಿಷಯಗಳ ಕುರಿತು ರಾಷ್ಟ್ರವ್ಯಾಪಿ ಐಕ್ಯ ಕಾರ್ಯಾಚರಣೆಗಳನ್ನು ಪ್ರಾರಂಭಿಸಲು ಎಡಪಕ್ಷಗಳೊಂದಿಗೆ ಸಮಾಲೋಚಿಸಲು ಕೇಂದ್ರ ಸಮಿತಿಯು ನಿರ್ಧರಿಸಿದೆ.

ಇತರ ಜಾತ್ಯತೀತ ವಿರೋಧ ಪಕ್ಷಗಳೊಂದಿಗೆ ಸಮಾಲೋಚಿಸಿ ರಾಷ್ಟ್ರೀಯ ಮಹತ್ವದ ಪ್ರಶ್ನೆಗಳನ್ನು ಪ್ರದರ್ಶಿಸಬಹುದಾದ ಸಾರ್ವಜನಿಕ ಕಾರ್ಯಾಚರಣೆಗಳು ಮತ್ತು ಅಭಿವ್ಯಕ್ತಿಗಳ ಮೂಲಕ ಎತ್ತಲು ಅದು ನಿರ್ಧರಿಸಿತು.

ಸಂಘಟನಾ ನಿರ್ಣಯ:

ಕೃಷಿ ಕಾರ್ಮಿಕರ ಚಳವಳಿಯ ನಾಯಕ ವಿಕ್ರಮ್ ಸಿಂಗ್ ಅವರನ್ನು ಕೇಂದ್ರ ಸಮಿತಿಯ ಸದಸ್ಯರನ್ನಾಗಿ ಸೇರಿಸುವ ಮೂಲಕ ಕೇಂದ್ರ ಸಮಿತಿಯಲ್ಲಿ ಖಾಲಿ ಇರುವ ಸ್ಥಾನವನ್ನು ತುಂಬಲು ಕೇಂದ್ರ ಸಮಿತಿ ನಿರ್ಧರಿಸಿದೆ.



ಕರ್ನಾಟಕದಲ್ಲಿ ಬಿಜೆಪಿ ಒಮ್ಮೆಯೂ ಗೆಲ್ಲದ 53 ಕ್ಷೇತ್ರಗಳು!

ಗುರುರಾಜ ದೇಸಾಯಿ

ಈ ಬಾರಿಯ ಚುನಾವಣೆಯಲ್ಲಿ 130ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರವನ್ನು ರಚಿಸಲಿದ್ದೇವೆ ಎಂದು ಬಿಜೆಪಿ ಬೀಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಬಹುತೇಕ ಮಾಧ್ಯಮಗಳು ಬಿಜೆಪಿಯ ಪರ ತುತ್ತೂರಿ ಊದುತ್ತಿವೆ. 2006ರಲ್ಲಿ ಆದ ರಾಜಕೀಯ ಬೆಳವಣಿಗೆಯ ಲಾಭ ಪಡೆದ ಬಿಜೆಪಿ, ದೊಡ್ಡ ಪಕ್ಷವಾಗಿ ಹೊರಹೊಮ್ಮುತ್ತಲೆ ಬಂದಿದೆ. (2013ರ ಚುನಾವಣೆ ಹೊರತು ಪಡಿಸಿ) ರಾಜ್ಯದಲ್ಲಿ ಬಿಜೆಪಿ ಇದುವರೆಗೂ ಬಹುಮತಕ್ಕೆ ಬೇಕಾದ 113 ಸ್ಥಾನಗಳ ಗುರಿಯನ್ನು ಎಂದಿಗೂ ಮುಟ್ಟಿಲ್ಲ. ಅಧಿಕಾರ ರಚಿಸಲು ಸ್ಪಷ್ಟ ಬಹುಮತ ಸಿಗದ ಕಾರಣ 'ಆಪರೇಶನ್ ಕಮಲ'ದ ಮೂಲಕ ಅಧಿಕಾರದ ರುಚಿ ಉಣ್ಣುತ್ತಲೆ ಬಂದಿದೆ.

1983ರಲ್ಲಿ 18 ಸ್ಥಾನಗಳಲ್ಲಿ ಗೆದ್ದ ಬಿಜೆಪಿ ಜನತಾಪಕ್ಷಕ್ಕೆ ಬೆಂಬಲ ನೀಡಿತ್ತು. ಆದರೆ ಎರಡೇ ವರ್ಷಕ್ಕೆ (1985ರಲ್ಲಿ) ನಿಮ್ಮ ಸಹವಾಸ ಬೇಡ ಎಂದ ಜನತಾ ಪಕ್ಷ, ಸರ್ಕಾರ ವಿಸರ್ಜಿಸಿ ಮತ್ತೆ ಚುನಾವಣೆ ಎದುರಿಸಿ ಸ್ವತಂತ್ರವಾಗಿ ಅಧಿಕಾರ ಹಿಡಿದಿತ್ತು. ಆ ನಂತರ 2004ರಲ್ಲಿ 79 ಸ್ಥಾನ ಗೆದ್ದರೂ ಪ್ರತಿಪಕ್ಷದಲ್ಲಿ ಕೂರಬೇಕಾಗಿತ್ತು. 2006ರಲ್ಲಿ ಜೆಡಿಎಸ್ ಪಕ್ಷಕ್ಕೆ ಬೆಂಬಲ ಸೂಚಿಸುವ ಮೂಲಕ ಅಧಿಕಾರದಲ್ಲಿತ್ತು. ಆದರೆ, ಬಿಜೆಪಿ ಹೈಕಮಾಂಡ್ ಕುತಂತ್ರದಿಂದಾಗಿ ಕುಮಾರಸ್ವಾಮಿ ಯಡಿಯೂರಪ್ಪರಿಗೆ ಅಧಿಕಾರ ಹಸ್ತಾಂತರಿಸದೇ ಸರ್ಕಾರ ವಿಸರ್ಜಿಸಬೇಕಾಯಿತು. ಇದರಿಂದ ಯಡಿಯೂರಪ್ಪನವರ ಮೇಲಿನ ಅನುಕಂಪದಿಂದ 2008ರಲ್ಲಿ ಬಿಜೆಪಿ 110 ಸ್ಥಾನ ಗೆದ್ದಿತ್ತು. ಆದರೂ ಬಹುಮತಕ್ಕೆ 03 ಸೀಟುಗಳ ಕೊರತೆಯಿತ್ತು. ಆಗ ಯಡಿಯೂರಪ್ಪನವರು 'ಆಪರೇಷನ್ ಕಮಲ' ನಡೆಸಿ ಅಧಿಕಾರಕ್ಕೆ ಬಂದರು.

ಇನ್ನು 2013ರಲ್ಲಿ ಬಿಜೆಪಿ 40 ಸ್ಥಾನಗಳಿಗೆ ಕುಸಿದಿತ್ತು. 2018ರಲ್ಲಿ 104 ಸ್ಥಾನ ಗೆದ್ದರೂ ಸರಳ ಬಹುಮತ ಸಿಗದೇ ವಿರೋಧ ಪಕ್ಷವಾಗಿತ್ತು. ಆದರೆ 2019ರಲ್ಲಿ ಮತ್ತೆ 'ಆಪರೇಷನ್ ಕಮಲ' ನಡೆಸಿ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರವನ್ನು ಕೆಡವಿ ಅಧಿಕಾರಕ್ಕೆ ಬಂದಿದೆ.

ಒಂದು ಅಚ್ಚರಿಯ ಸಂಗತಿ ಏನೆಂದರೆ, ಬಿಜೆಪಿ ಇಲ್ಲಿಯವರೆಗೆ ನಡೆದ ಚುನಾವಣೆಗಳಲ್ಲಿ ಒಮ್ಮೆಯೂ ಗೆಲ್ಲದ 53 ಕ್ಷೇತ್ರಗಳಿವೆ. ಆ ಕ್ಷೇತ್ರಗಳಲ್ಲಿ ಬಿಜೆಪಿ ಎರಡನೇ, ಮೂರನೇ ಹಾಗೂ ನಾಲ್ಕನೇ ಸ್ಥಾನಕ್ಕೂ ತಳ್ಳಲ್ಪಟ್ಟಿದೆ. ದಕ್ಷಿಣ ಕರ್ನಾಟಕ, ಹಳೇ ಮೈಸೂರು, ಕಲ್ಯಾಣ ಕರ್ನಾಟಕದ ಕೆಲ ಪ್ರದೇಶಗಳಲ್ಲಿ ಬಿಜೆಪಿಗೆ ವಿಶೇಷವಾಗಿ, ವಿಧಾನಸಭಾ ಚುನಾವಣೆಯಲ್ಲಿ ಬಹಳ ಹಿಂದಿನಿಂದಲೂ ನೆಲೆ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಈ ಕ್ಷೇತ್ರಗಳಲ್ಲಿ ಗೆಲ್ಲಲು ನಾನಾ ತಂತ್ರಗಳನ್ನು ಅನುಸರಿಸುತ್ತಿದ್ದರೂ ಬಿಜೆಪಿ ಗೆಲ್ಲಲು ಸಾಧ್ಯವಾಗಿಲ್ಲ. ಆ ಕ್ಷೇತ್ರಗಳು ಯಾವುವು ಎಂಬುದರ ಕಡೆ ಗಮನ ಹರಿಸೋಣ.


ಕಲ್ಯಾಣ ಕರ್ನಾಟಕ

ಅಫಜಲಪುರ: ಅಫಜಲಪುರ ಕ್ಷೇತ್ರವು ಕಲಬುರಗಿ ಜಿಲ್ಲೆಯಲ್ಲಿದೆ. 1957ರಿಂದ ಕಾಂಗ್ರೆಸ್ ಒಂಬತ್ತು ಬಾರಿ ಗೆದ್ದಿದೆ. ಬಿಜೆಪಿ 1994ರಿಂದ ಚುನಾವಣೆಗೆ ಸ್ಪರ್ಧಿಸಿದೆ. ಆದರೆ ಈ ಕ್ಷೇತ್ರದಲ್ಲಿ ಗೆಲ್ಲಲು ವಿಫಲವಾಗಿದೆ. 2008 ಮತ್ತು 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಎರಡನೇ ಸ್ಥಾನವನ್ನು ಉಳಿಸಿಕೊಂಡಿದೆ. 2013ರಲ್ಲಿ ಬಿಜೆಪಿ 5ನೇ ಸ್ಥಾನಕ್ಕೆ ಕುಸಿದಿತ್ತು.

ಶಹಾಪುರ: ಯಾದಗಿರಿ ಜಿಲ್ಲೆಯ ಶಹಾಪುರ ವಿಧಾನಸಭಾ ಕ್ಷೇತ್ರವು ರಾಯಚೂರು ಲೋಕಸಭಾ ಕ್ಷೇತ್ರದ ಒಂದು ಭಾಗವಾಗಿದೆ. ಇಲ್ಲಿ ಕಾಂಗ್ರೆಸ್ 8 ಬಾರಿ, ಜನತಾದಳ 2 ಬಾರಿ, ಸ್ವತಂತ್ರ ಅಭ್ಯರ್ಥಿಗಳು 2 ಬಾರಿ, ಕೆಜೆಪಿ 1 ಬಾರಿ ಗೆಲುವು ಸಾಧಿಸಿದೆ. 2013ರ ಚುನಾವಣೆಯಲ್ಲಿ ಬಿಜೆಪಿ 7ನೇ ಸ್ಥಾನಕ್ಕೆ ಕುಸಿದಿತ್ತು. 2018ರಲ್ಲಿ 2ನೇ ಸ್ಥಾನದಲ್ಲಿತ್ತು.

ಗುರುಮಿಟ್ಕಲ್: ಯಾದಗಿರಿ ಜಿಲ್ಲೆಯ ಗುರುಮಿಟ್ಕಲ್ ಕ್ಷೇತ್ರ ಕಾಂಗ್ರೆಸ್‌ನ ಪ್ರಬಲ ಹಿಡಿತದಲ್ಲಿದೆ. ಇಲ್ಲಿ ಬಿಜೆಪಿ ಎಂದಿಗೂ ಬಹುಮತ ಪಡೆದಿಲ್ಲ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 1972ರಿಂದ 2004 ರವರೆಗೆ ಇದೇ ಕ್ಷೇತ್ರದಿಂದ ಗೆದ್ದು ಪ್ರತಿನಿಧಿಸಿದ್ದರು.

ಮಾನ್ವಿ: ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ಬಿಜೆಪಿ ಒಂದು ಬಾರಿಯೂ ಗೆದ್ದಿಲ್ಲ. ಕಾಂಗ್ರೆಸ್ 10 ಬಾರಿ, ಜನತಾದಳ 1, ಸ್ವತಂತ್ರ ಅಭ್ಯರ್ಥಿ 1 ಬಾರಿ ಗೆಲುವು ಸಾಧಿಸಿದ್ದಾರೆ. 2013 ರಲ್ಲಿ ಬಿಜೆಪಿ 5 ಸ್ಥಾನದಲ್ಲಿ, 2018 ರಲ್ಲಿ 3 ನೇ ಸ್ಥಾನದಲ್ಲಿತ್ತು.



ಸಿಂಧನೂರು: ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಒಮ್ಮೆಯೂ ಬಿಜೆಪಿ ಗೆಲುವು ಸಾಧಿಸಿಲ್ಲ. 6 ಬಾರಿ ಕಾಂಗ್ರೆಸ್, 4 ಬಾರಿ ಜೆಡಿಎಸ್, 2 ಬಾರಿ ಸ್ವತಂತ್ರ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. 2013ರ ಚುನಾವಣೆಯಲ್ಲಿ ಬಿಜೆಪಿ 5ನೇ ಹಾಗೂ 2018ರಲ್ಲಿ 3ನೇ ಸ್ಥಾನ ಪಡೆದಿತ್ತು.

ಕೊಪ್ಪಳ: ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸಲು ಸಾಧ್ಯವಾಗಿಲ್ಲ. ಕರಡಿ ಸಂಗಣ್ಣ 2008ರಲ್ಲಿ ಜೆಡಿಎಸ್‌ನಿಂದ ಗೆದ್ದಿದ್ದರು. ನಂತರ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು. 9 ಬಾರಿ ಕಾಂಗ್ರೆಸ್ ಗೆದ್ದಿದ್ದರೆ, ಜೆಡಿಎಸ್, ಜೆಡಿಯು ಹಾಗೂ ಸ್ವತಂತ್ರ ಅಭ್ಯರ್ಥಿ ಒಂದೊಂದು ಬಾರಿ ಗೆದ್ದಿದ್ದಾರೆ. 2013 ಹಾಗೂ 2018ರ ಚುನಾವಣೆಯಲ್ಲಿ ಬಿಜೆಪಿ 2 ನೇ ಸ್ಥಾನದಲ್ಲಿತ್ತು.

ಹಳೇ ಮೈಸೂರು ಪ್ರಾಂತ:

ಹಳೇ ಮೈಸೂರು ಪ್ರಾಂತ್ಯದಲ್ಲಿನ ಬಹಳಷ್ಟು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿಲ್ಲ. ಕೆಲವೆಡೆ ಅಭ್ಯರ್ಥಿಗಳಿಗಾಗಿ ಪರದಾಡಿದ ಕಥೆಯೂ ಇದೆ. ಅಂತಹ ಕ್ಷೇತ್ರಗಳು ಯಾವವು ನೋಡೋಣ ಬನ್ನಿ.

ಬಾಗೇಪಲ್ಲಿ: ಇದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಸಿಪಿಐ(ಎಂ) ನಡುವಿನ ಕಾದಾಟಕ್ಕೆ ಸಾಕ್ಷಿಯಾಗಿರುವ ಏಕೈಕ ಕ್ಷೇತ್ರ ಇದಾಗಿದೆ. ಇಲ್ಲಿ ಬಿಜೆಪಿಗೆ ಎರಡನೇ ಸ್ಥಾನಕ್ಕೆ ಬರಲೂ ಸಾಧ್ಯವಾಗಿಲ್ಲ. 2018ರ ಚುನಾವಣೆಯಲ್ಲಿ ಬಿಜೆಪಿ ಶೇ. 2.52 ಮತ ಗಳಿಸಿತ್ತು. 2008ರಲ್ಲಿ ಮಾತ್ರ ಶೇ.20.90 ಮತಗಳೊಂದಿಗೆ 4ನೇ ಸ್ಥಾನ ಪಡೆದು ಗಮನ ಸೆಳೆದಿತ್ತು. ಇಲ್ಲಿಯವರೆಗೆ 7 ಬಾರಿ ಕಾಂಗ್ರೆಸ್, ಸಿಪಿಐಎಂ 3 ಬಾರಿ, ಸ್ವತಂತ್ರ ಅಭ್ಯರ್ಥಿಗಳು 2 ಬಾರಿ ಗೆಲುವು ಸಾಧಿಸಿದ್ದಾರೆ. ಬಿಜೆಪಿ 2013ರಲ್ಲಿ 8, 2018 ರಲ್ಲಿ 4ನೇ ಸ್ಥಾನದಲ್ಲಿತ್ತು.

ಚಿಂತಾಮಣಿ: ಈ ಜಿಲ್ಲೆಯಲ್ಲಿರುವ ಚಿಂತಾಮಣಿ ಕ್ಷೇತ್ರದಲ್ಲೂ ಬಿಜೆಪಿ ಗೆಲುವು ಪಡೆಯಲು ಸಾಧ್ಯವಾಗಿಲ್ಲ. 2004ರ ವಿಧಾನಸಭಾ ಚುನಾವಣೆಯಲ್ಲಿ ಶೇ. 44.81ರಷ್ಟು ಮತಗಳೊಂದಿಗೆ ಬಿಜೆಪಿ 2ನೇ ಸ್ಥಾನ ಪಡೆಯಲು ಸಫಲವಾಗಿತ್ತು. 8 ಬಾರಿ ಕಾಂಗ್ರೆಸ್, 3 ಬಾರಿ ಸ್ವತಂತ್ರ, ಜನತಾ ಪಕ್ಷ, ಜನತಾದಳ 1 ಬಾರಿ ಗೆಲುವು ಸಾಧಿಸಿವೆ. 2013ರಲ್ಲಿ ಬಿಜೆಪಿ 4ನೇ ಸ್ಥಾನ ಹಾಗೂ 2018ರಲ್ಲಿ 2ನೇ ಸ್ಥಾನದಲ್ಲಿತ್ತು.

ಶಿಡ್ಲಘಟ್ಟ: ಈ ಜಿಲ್ಲೆಯಲ್ಲಿರುವ ಶಿಡ್ಲಘಟ್ಟ ಕ್ಷೇತ್ರದಲ್ಲೂ ಬಿಜೆಪಿ ಗೆಲುವು ಪಡೆಯಲು ಸಾಧ್ಯವಾಗಿಲ್ಲ. 11 ಬಾರಿ ಕಾಂಗ್ರೆಸ್, ಜೆಡಿಎಸ್ 2 ಬಾರಿ, ಜನತಾ ಪಕ್ಷ 1 ಬಾರಿ ಗೆಲುವು ಸಾಧಿಸಿದೆ. 2013 ಹಾಗೂ 2018 ರಲ್ಲಿ ಬಿಜೆಪಿ 5ನೇ ಸ್ಥಾನದಲ್ಲಿತ್ತು.

ಗೌರಿಬಿದನೂರು: ಇದೇ ಜಿಲ್ಲೆಯ ಗೌರಿಬಿದನೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯವಿದೆ. 1994ರಲ್ಲಿ ಬಿಜೆಪಿ ಕೇವಲ ಶೇ. 5.44ರಷ್ಟು ಮತಗಳನ್ನು ಗಳಿಸಿತ್ತು. 2008ರಿಂದ ಪಕ್ಷದ ಬಲವಾಗುತ್ತಿದೆ. ಆದರೆ, ಗೆಲ್ಲಲು ವಿಫಲವಾಗಿದೆ. 6 ಬಾರಿ ಕಾಂಗ್ರೆಸ್, ಜನತಾ ಪಕ್ಷ 2 ಬಾರಿ, ಸ್ವತಂತ್ರ ಅಭ್ಯರ್ಥಿಗಳು 5 ಬಾರಿ, ಜನತಾದಳ 1 ಬಾರಿ ಗೆಲುವು ಸಾಧಿಸಿದೆ. 2013 ಹಾಗೂ 2018 ರಲ್ಲಿ ಬಿಜೆಪಿ 3ನೇ ಸ್ಥಾನದಲ್ಲಿತ್ತು.

ಕೋಲಾರ: ಕೋಲಾರ ವಿಧಾನಸಭಾ ಕ್ಷೇತ್ರದಲ್ಲಿ 1987ರಿಂದ ಬಿಜೆಪಿ ಗೆಲುವು ಸಾಧಿಸುವಲ್ಲಿ ಸಾಧ್ಯವಾಗಿಲ್ಲ. 5 ಬಾರಿ ಕಾಂಗ್ರೆಸ್, 7 ಬಾರಿ ಸ್ವತಂತ್ರ ಅಭ್ಯರ್ಥಿಗಳು, 1 ಬಾರಿ ಜೆಡಿಯು ಗೆಲುವು ಸಾಧಿಸಿದೆ. 2013 ಹಾಗೂ 2018 ರಲ್ಲಿ ಬಿಜೆಪಿ 4 ನೇ ಸ್ಥಾನದಲ್ಲಿತ್ತು.

ಗುಬ್ಬಿ: ತುಮಕೂರು ಜಿಲ್ಲೆಯ ಗುಬ್ಬಿ ವಿಧಾನಸಭಾ ಕ್ಷೇತ್ರದಲ್ಲಿ 2008 ಮತ್ತು 2018ರ ಚುನಾವಣೆಯಲ್ಲಿ ಬಿಜೆಪಿ ಎರಡನೇ ಸ್ಥಾನ ಪಡೆದಿತ್ತು. 2018ರಲ್ಲಿ ಬಿಜೆಪಿಯನ್ನು ಶೇ. 5.86ರಷ್ಟು ಮತಗಳ ಕಡಿಮೆ ಅಂತರದಿಂದ ಕಾಂಗ್ರೆಸ್ ಸೋಲಿಸಿತ್ತು. ಇಲ್ಲಿ 7 ಬಾರಿ ಕಾಂಗ್ರೆಸ್, 5 ಬಾರಿ ಜನತಾದಳ, 1 ಬಾರಿ ಜನತಾಪಕ್ಷ, 3 ಬಾರಿ ಸ್ವತಂತ್ರ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಕೊರಟಗೆರೆ: ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ಬಿಜೆಪಿಗೆ ಎರಡನೇ ಸ್ಥಾನ ಪಡೆಯಲು ಕೂಡ ಇದುವರೆಗೆ ಆಗಿಲ್ಲ. 9 ಬಾರಿ ಕಾಂಗ್ರೆಸ್, ಜನತಾದಳ 4 ಬಾರಿ, ಜನತಾಪಕ್ಷ 2 ಬಾರಿ ಗೆಲುವು ಸಾಧಿಸಿದೆ. ಬಿಜೆಪಿ 2013ರಲ್ಲಿ 4, 2018ರಲ್ಲಿ 3ನೇ ಸ್ಥಾನದಲ್ಲಿತ್ತು.

ಕುಣಿಗಲ್: ತುಮಕೂರು ಜಿಲ್ಲೆಯ ಕುಣಿಗಲ್ ಕ್ಷೇತ್ರವು ಕಾಂಗ್ರೆಸ್, ಜೆಡಿಎಸ್ ಕಾದಾಟಕ್ಕೆ ಕಾರಣವಾಗಿದೆ. ಈಗ ಬಿಜೆಪಿ ಸಹ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುತ್ತಿದ್ದು, ತ್ರಿಕೋನ ಸ್ಪರ್ಧೆಯನ್ನು ಹೊಂದಿದೆ. 2008ರಿಂದ ಬಿಜೆಪಿ ಈ ಕ್ಷೇತ್ರದಲ್ಲಿ ಎರಡನೇ ಸ್ಥಾನವನ್ನು ಕಾಯ್ದುಕೊಂಡಿದೆ. 9 ಬಾರಿ ಕಾಂಗ್ರೆಸ್, 2 ಬಾರಿ ಜನತಾದಳ, 2 ಬಾರಿ ಜನತಾ ಪಕ್ಷ ಗೆಲುವು ಸಾಧಿಸಿದೆ.

ಮಧುಗಿರಿ: ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ 1994ರಿಂದ ಬಿಜೆಪಿ ಸ್ಪರ್ಧಿಸುತ್ತಿದ್ದು, ಇಲ್ಲಿ ಎರಡನೇ ಸ್ಥಾನವನ್ನೂ ತಲುಪಲು ಸಹ ಸಾಧ್ಯವಾಗಿಲ್ಲ. ಕಾಂಗ್ರೆಸ್ 9 ಬಾರಿ, 4 ಬಾರಿ ಜನತಾದಳ, 2 ಬಾರಿ ಜನತಾ ಪಕ್ಷ ಗೆಲುವು ಸಾಧಿಸಿದೆ. 2013ರಲ್ಲಿ 6 ಮತ್ತು 2018ರಲ್ಲಿ 3 ಸ್ಥಾನ ಪಡೆದಿತ್ತು.

ಕೃಷ್ಣರಾಜನಗರ: ಮೈಸೂರು ಜಿಲ್ಲೆಯ ಕೃಷ್ಣರಾಜನಗರ ಕ್ಷೇತ್ರವು ಜೆಡಿಎಸ್, ಕಾಂಗ್ರೆಸ್ನ ಭದ್ರಕೋಟೆಯಾಗಿದೆ. 6 ಬಾರಿ ಕಾಂಗ್ರೆಸ್, 5 ಬಾರಿ ಜನತಾದಳ, 2 ಬಾರಿ ಜನತಾ ಪಕ್ಷ ಗೆಲುವು ಸಾಧಿಸಿದೆ.

ಹೆಚ್ಡಿ ಕೋಟೆ: ಮೈಸೂರು ಜಿಲ್ಲೆಯಲ್ಲಿ ಹೆಗ್ಗಡದೇವನ ಕೋಟೆ (ಹೆಚ್ಡಿ ಕೋಟೆ) ಕ್ಷೇತ್ರದಲ್ಲಿ 1967ರಿಂದ ಇಲ್ಲಿಯವರೆಗೆ ಬಿಜೆಪಿ ಒಮ್ಮೆಯೂ ಗೆದ್ದಿಲ್ಲ. 2004 ಮತ್ತು 2008ರ ಚುನಾವಣೆಯಲ್ಲಿ ಮಾತ್ರ ಎರಡನೇ ಸ್ಥಾನ ಪಡೆಯಿತು.

ಚಾಮುಂಡೇಶ್ವರಿ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್‌ನ ಜಿಟಿ ದೇವೇಗೌಡ ಹಿಡಿತ ಹೊಂದಿದ್ದಾರೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಸಿಎಂ ಆಗಿದ್ದ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಚಾಮುಂಡೇಶ್ವರಿಯಿಂದ ಸ್ಪರ್ಧಿಸಿದ್ದರು. ಆದರೆ, ಜಿಟಿ ದೇವೇಗೌಡ ವಿರುದ್ಧ 36,042 ಮತಗಳ ಅಂತರದಿಂದ ಸೋತಿದ್ದರು. ಬಿಜೆಪಿ ಇಲ್ಲಿ ಖಾತೆ ತೆರೆಯಲು ಸಾಧ್ಯವಾಗಿಲ್ಲ. 6 ಬಾರಿ ಕಾಂಗ್ರೆಸ್, ಜನತಾದಳ 3 ಬಾರಿ ಗೆಲುವು ಸಾಧಿಸಿದೆ. 2013ರಲ್ಲಿ 4ನೇ ಮತ್ತು 2018ರಲ್ಲಿ 3 ನೇ ಸ್ಥಾನದಲ್ಲಿತ್ತು.

ಕೊಳ್ಳೇಗಾಲ: ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ ಬಿಜೆಪಿ ಪ್ರತಿ ಚುನಾವಣೆಯಲ್ಲಿ ಬೇರೆ ಬೇರೆ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದರೂ ಖಾತೆ ತೆರೆಯುವಲ್ಲಿ ವಿಫಲವಾಗಿದೆ. 10 ಬಾರಿ ಕಾಂಗ್ರೆಸ್, ಜನತಾ ಪಕ್ಷ 2 ಬಾರಿ, ಜನತಾದಳ, ಬಿಎಸ್‌ಪಿ 1 ಬಾರಿ ಗೆಲುವು ಸಾಧಿಸಿದೆ. 2013ರಲ್ಲಿ 4ನೇ, 2018ರಲ್ಲಿ 3ನೇ ಸ್ಥಾನದಲ್ಲಿತ್ತು. ಬಿಎಸ್‌ಪಿಯಿಂದ ಗೆದ್ದಿದ್ದ ಎನ್. ಮಹೇಶ್ ಬಿಜೆಪಿಗೆ ಸೇರ್ಪಡೆಗೊಂಡಿದ್ದರು.

ಹನೂರು: ಚಾಮರಾಜನಗರ ಜಿಲ್ಲೆಯ ಹನೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯವಿದೆ. 2018ರ ಚುನಾವಣೆಯಲ್ಲಿ ಮಾತ್ರ ಬಿಜೆಪಿ ಶೇ. 33.69ರಷ್ಟು ಮತಗಳನ್ನು ಪಡೆಯುವ ಮೂಲಕ ಎರಡನೇ ಸ್ಥಾನ ಗಳಿಸಿತ್ತು.

ಮದ್ದೂರು: ಮಂಡ್ಯ ಜಿಲ್ಲೆಯ ಮದ್ದೂರು ಕ್ಷೇತ್ರದಲ್ಲಿ ಬಿಜೆಪಿ ಮೊದಲಿನಿಂದಲೂ ತನ್ನ ಖಾತೆಯನ್ನು ತೆರೆದಿಲ್ಲ. 2018ರ ಚುನಾವಣೆಯಲ್ಲಿ ಬಿಜೆಪಿ ಠೇವಣಿ ಕಳೆದುಕೊಂಡಿತ್ತು. 7 ಬಾರಿ ಕಾಂಗ್ರೆಸ್, 2 ಬಾರಿ ಜನತಾಪಕ್ಷ, 4 ಬಾರಿ ಜನತಾದಳ ಗೆಲುವು ಸಾಧಿಸಿದೆ. 2013ರಲ್ಲಿ ಬಿಜೆಪಿ 6ನೇ ಸ್ಥಾನ, 2018ರಲ್ಲಿ 3ನೇ ಸ್ಥಾನದಲ್ಲಿತ್ತು.

ಮಳವಳ್ಳಿ: ಮಂಡ್ಯ ಜಿಲ್ಲೆಯ ಮಳವಳ್ಳಿ ಕ್ಷೇತ್ರದಲ್ಲೂ ಬಿಜೆಪಿ ಖಾತೆ ತೆರೆದಿಲ್ಲ. 6 ಬಾರಿ ಕಾಂಗ್ರೆಸ್, ಜನತಾ ಪಕ್ಷ 2 ಬಾರಿ, ಜನತಾದಳ 4 ಬಾರಿ ಗೆಲುವು ಸಾಧಿಸಿದೆ. 2013 ರಲ್ಲಿ ಬಿಜೆಪಿ 9ನೇ ಸ್ಥಾನದಲ್ಲಿತ್ತು. 2018 ರಲ್ಲಿ 3ನೇ ಸ್ಥಾನದಲ್ಲಿತ್ತು.

ಮಂಡ್ಯ: ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಖಾತೆ ತೆರೆಯಲು ಸಾಧ್ಯವಾಗಿಲ್ಲ. ಈಗ ಜಿಲ್ಲೆಯಲ್ಲಿ ನೆಲೆಯೂರಲು ಎಲ್ಲ ರೀತಿಯ ಪ್ರಯತ್ನಗಳನ್ನು ಬಿಜೆಪಿ ನಡೆಸುತ್ತಿದೆ. ಮಂಡ್ಯ ಸ್ವತಂತ್ರ ಸಂಸದೆ ಹಾಗೂ ದಿ. ಅಂಬರೀಶ್ ಅವರ ಪತ್ನಿ ಸುಮಲತಾ ಈ ಬಾರಿ ಬಿಜೆಪಿಗೆ ಬೆಂಬಲ ನೀಡಿದ್ದು, ಇಲ್ಲಿ ಸ್ಪರ್ಧೆ ಕುತೂಹಲ ಮೂಡಿಸಿದೆ. 2013 ಹಾಗೂ 2018 ರಲ್ಲಿ ಬಿಜೆಪಿ 3ನೇ ಸ್ಥಾನದಲ್ಲಿತ್ತು.

ರಾಮನಗರ: ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಹಿಡಿತ ಹೊಂದಿದೆ. ಮಾಜಿ ಮುಖ್ಯಮಂತ್ರಿ ಎಚ್‌ಡಿ ಕುಮಾರಸ್ವಾಮಿ 2004, 2008, 2013, 2018ರ ಚುನಾವಣೆಯಲ್ಲಿ ವಿಜಯಶಾಲಿಯಾಗಿದ್ದಾರೆ. ಇಲ್ಲಿ ಬಿಜೆಪಿ 2013 ಹಾಗೂ 2018ರ ಚುನಾವಣೆಯಲ್ಲಿ 3ನೇ ಸ್ಥಾನದಲ್ಲಿತ್ತು.

ಕನಕಪುರ: ರಾಮನಗರ ಜಿಲ್ಲೆಯ ಕನಕಪುರ ಕಾಂಗ್ರೆಸ್ ಭದ್ರಕೋಟೆಯಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಈ ಬಾರಿ ಬಿಜೆಪಿ ಮುಖಂಡ, ಸಚಿವ ಆರ್.ಅಶೋಕ್ ಕಣಕ್ಕಿಳಿದಿದ್ದಾರೆ.

ಹಳಿಯಾಳ: ಹಳಿಯಾಳ ವಿಧಾನಸಭೆಯು ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಬರುತ್ತದೆ. ಇದು ಕಿತ್ತೂರು ಕರ್ನಾಟಕ ಪ್ರದೇಶದ ಒಂದು ಭಾಗವಾಗಿದ್ದು, ಈ ಕ್ಷೇತ್ರದಲ್ಲೂ ಬಿಜೆಪಿ ಗೆದ್ದಿಲ್ಲ. 2018ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಸುನೀಲ್ ಹೆಗಡೆ ಅವರನ್ನು ಶೇ. 3.91ರಷ್ಟು ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಆರ್ ವಿ ದೇಶಪಾಂಡೆ ಸೋಲಿಸಿದ್ದರು.

ಹೊಳೆನರಸೀಪುರ: ಹಾಸನ ಜಿಲ್ಲೆಯ ಹೊಳೆನರಸೀಪುರ ಕ್ಷೇತ್ರ ಜೆಡಿಎಸ್ ಭದ್ರಕೋಟೆಯಾಗಿದೆ. ಈ ಕ್ಷೇತ್ರವನ್ನು ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡ ಪ್ರತಿನಿಧಿಸುತ್ತಿದ್ದರು. ಈಗ ಅವರ ಪುತ್ರ ಎಚ್.ಡಿ. ರೇವಣ್ಣ ಪ್ರತಿನಿಧಿಸುತ್ತಿದ್ದಾರೆ.

ಇದೇ ರೀತಿ ಕೋಲಾರ ಜಿಲ್ಲೆಯ ಮುಳಬಾಗಿಲು, ಶ್ರೀನಿವಾಸಪುರ, ಮಂಡ್ಯ ಜಿಲ್ಲೆಯ ನಾಗಮಂಗಲ, ಶ್ರೀರಂಗಪಟ್ಟಣ, ತುಮಕೂರು ಜಿಲ್ಲೆಯ ಪಾವಗಡ, ಬಳ್ಳಾರಿ ಜಿಲ್ಲೆಯ ಸಂಡೂರು, ಹಾಸನ ಜಿಲ್ಲೆಯ ಶ್ರವಣಬೆಳಗೊಳ, ಬೀದರ್ ದಕ್ಷಿಣ, ಯಮಕನಮರಡಿ, ಬ್ಯಾಟರಾಯನಪುರ, ಗಾಂಧಿನಗರ, ಕ್ಷೇತ್ರದಲ್ಲಿ ಇಂದಿಗೂ ಬಿಜೆಪಿ ಗೆಲುವು ಕಂಡಿಲ್ಲ. ಎಂಬುದು ಗಮನಾರ್ಹ ಸಂಗತಿಯಾಗಿದೆ.

70 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸುಲಭವಾಗಿ ಮೇಲುಗೈ ಸಾಧಿಸುತ್ತಿದೆ. ಜೆಡಿಎಸ್ 15 ಸ್ಥಾನಗಳಲ್ಲಿ ಸುಲಭವಾಗಿ ಗೆಲುವು ಸಾಧಿಸಲಿದೆ. 70+53+15 = 138 ಕ್ಷೇತ್ರಗಳಲ್ಲಿ ಬಿಜೆಪಿಗೆ ಹಿನ್ನಡೆಯಾಗಲಿದ್ದು. ಅಧಿಕಾರಕ್ಕೆ ಬರುವುದು ಸುಲಭದ ಮಾತಲ್ಲ ಎಂದು ರಾಜಕೀಯ ಲೆಕ್ಕಚಾರ ನಡೆಯುತ್ತಿದೆ. ಹಾಗೊಂದುವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೆ 'ಆಪರೇಷನ್ ಕಮಲ'ದ ಮೂಲಕ ಅಧಿಕಾರಕ್ಕೆ ಬರಬಹುದು ಎಂದು ವಿಧಾನಸೌಧದ ತುಂಬ ಚರ್ಚೆಗಳು ನಡೆಯುತ್ತಿವೆ.

ಚುನಾವಣೆ ಪ್ರಜಾಪ್ರಭುತ್ವದ ಒಂದು ಅಂಗ ಮಾತ್ರ. ಆದರೆ ನಮ್ಮಲ್ಲಿ ಪ್ರಜಾಪ್ರಭುತ್ವದ ಆರಂಭ, ಬೆಳವಣಿಗೆ, ಅಂತ್ಯ ಎಲ್ಲವೂ ಚುನಾವಣೆಯೇ ಅಗಿದೆ. ಪ್ರಜಾಪ್ರಭುತ್ವ ಚುನಾವಣೆಗೆ ಸೀಮಿತವಾಗಿ ಹಲವು ದಶಕಗಳಾಗಿವೆ. ಅಂದರೆ ಪ್ರಜಾಪ್ರಭುತ್ವದ ಇತರ ಅಂಗಗಳಾದ ನ್ಯಾಯಾಂಗ, ಮಾಧ್ಯಮ, ಕಾರ್ಯಾಂಗಗಳು ಅರ್ಥ ಕಳೆದುಕೊಂಡು ದಶಕಗಳಾಗಿವೆ. ಇಂತಹ ಸಂದರ್ಭದಲ್ಲಿ ಸಮರ್ಪಕವಾಗಿ ನಡೆಯುವ ಚುನಾವಣೆಗಳು ಮಾತ್ರ ಪ್ರಜಾಪ್ರಭುತ್ವವನ್ನು ಭಾಗಶಃ ಜೀವಂತ ಇರಿಸಲು ಸಾಧ್ಯ. ಅಂದರೆ ಸಮಾಜದ ಎಲ್ಲ ವರ್ಗದ ಜನರಿಗೆ ಸ್ಪರ್ಧಿಸಿ ಗೆಲ್ಲಲು ಸಾಧ್ಯವಾದರೆ ಮಾತ್ರ ಚುನಾವಣೆಗಳು ಸಮರ್ಪಕವಾಗಿ ನಡೆಯುತ್ತಿದೆ ಎನ್ನಬಹುದು. ಇಲ್ಲವಾದರೆ ಅಧಿಕಾರ ಕೆಲವರಲ್ಲೇ ಕ್ರೋಢೀಕರಣಗೊಂಡು ಅವರು ಪ್ರಜಾಪ್ರಭುತ್ವದ ಹೆಸರಲ್ಲಿ ತಮ್ಮ ಗುಂಪಿನ ಆಸಕ್ತಿಗಳನ್ನು ವೃದ್ಧಿಸಿಕೊಳ್ಳಬಹುದು. ದಿನಗೂಲಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ಸಣ್ಣಪುಟ್ಟ ಕೃಷಿಕರು, ವ್ಯಾಪಾರಿಗಳು, ಉದ್ದಿಮೆದಾರರು ಇವರೇ ನಮ್ಮ ಸಮಾಜದ ಬಹುತೇಕರು. ಇವರೆಲ್ಲ ನಮ್ಮಲ್ಲಿ ನಡೆಯುವ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲಲು ಅವಕಾಶ ಇದೆಯೇ? ಎನ್ನುವ ಪ್ರಶ್ನೆ ಸುತ್ತಾ ಈ ಲೇಖನದ ಚರ್ಚೆ ಇದೆ. ಸದ್ಯ ನಡೆಯುತ್ತಿರುವ ಕರ್ನಾಟಕ ವಿಧಾನಸಭೆ ಚುನಾವಣಾ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು ಲೇಖನದ ಚರ್ಚೆಯನ್ನು ಬೆಳೆಸಲಾಗಿದೆ. ಈ ಲೇಖನ ಎರಡು ಭಾಗಗಳಲ್ಲಿದೆ. ಇದು ಭಾಗ–2. ಭಾಗ–1 ರಲ್ಲಿ ಈ ವಿಷಯದ ಪಕ್ಷಗಳ ತತ್ವ ಸಿದ್ಧಾಂತಗಳು, ಮತದಾರರ ಪಾತ್ರ, ಸಾಮಾಜಿಕ–ಆರ್ಥಿಕ–ರಾಜಕೀಯ ಮೆಜಾರಿಟಿ–ಮೈನಾರಿಟಿ – ಈ ಆಯಾಮುಗಳ ಕುರಿತು ಚರ್ಚಿಸಿದ್ದರು.



ಪ್ರೊ. ಎಂ.ಚಂದ್ರ ಪೂಜಾರಿ

ಪ್ರಜಾಪ್ರಭುತ್ವ ಚುನಾವಣೆಗೆ ಸೀಮಿತವಾಗಿ, ಅದೂ ಅರ್ಥಹೀನವಾಗುತ್ತಿದೆಯೇ?

ಭಾಗ – 2

ರಾಜಕೀಯ ಆಯ್ಕೆಗಳು

ರಾಜಕೀಯ ಪ್ರತಿನಿಧಿತ್ವದ ದೃಷ್ಟಿಯಿಂದ ಜನರ ಮುಂದೆ ಎರಡು ಮೂರು ಆಯ್ಕೆಗಳಿವೆ. ಒಂದು, ಬಲಾಢ್ಯರ ಆರ್ಥಿಕ ಹಿತಾಸಕ್ತಿಯನ್ನು ಮತ್ತು ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಪಾದಿಸುವ ಬಿಜೆಪಿ ಪಕ್ಷ. ಎರಡು, ಬಲಾಢ್ಯರ ಹಿತಾಸಕ್ತಿಯನ್ನು ಆದರೆ ಪ್ರಗತಿಪರ ಮೌಲ್ಯಗಳನ್ನು ಅರೆಬರೆಯಾಗಿ ಪ್ರತಿಪಾದಿಸುವ ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳು. ಮೂರು, ತಳಸ್ತರದ ಜನರ ಆರ್ಥಿಕ ಹಿತಾಸಕ್ತಿಯನ್ನು ಮತ್ತು ಪ್ರಗತಿಪರ ಮೌಲ್ಯಗಳನ್ನು ಪ್ರತಿಪಾದಿಸುವ ಕಮ್ಯುನಿಸ್ಟ್ ಪಕ್ಷಗಳು. ಬಿಜೆಪಿ ಧರ್ಮದ ನೆಲೆಯಲ್ಲಿ ಮತಯಾಚನೆ ಮಾಡುತ್ತದೆ. ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳು ಜಾತಿ ನೆಲೆಯಲ್ಲಿ ಮತಯಾಚನೆ ಮಾಡುತ್ತಿವೆ. ಕಮ್ಯುನಿಸ್ಟ್ ಪಕ್ಷಗಳು ಆರ್ಥಿಕ ನೆಲೆಯಲ್ಲಿ ಮತಯಾಚನೆ ಮಾಡುತ್ತಿವೆ. ಬಲಾಢ್ಯರ ಆರ್ಥಿಕ ಹಿತಾಸಕ್ತಿಯನ್ನು ಪ್ರತಿನಿಧಿಸುವ ಬಿಜೆಪಿ, ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳ ಸ್ವಾಧೀನ ಹೆಚ್ಚಿನ ಸಂಪನ್ಮೂಲ ಇದೆ. ಸಂಪನ್ಮೂಲದ ಒಡೆತನ ಇಂದಿನ ಚುನಾವಣೆ ಗೆಲ್ಲಲು ಅತೀ ಅವಶ್ಯವೆಂದು ಈ ಹಿಂದೆ ನೋಡಿದ್ದೇವೆ. ಇದೇ ಸಂಪನ್ಮೂಲದ ಬಲದಿಂದ ಜಾತಿ, ಧರ್ಮಗಳ ಮೆಜಾರಿಟಿ ಮೈನಾರಿಟಿಗಳೇ ಮುಖ್ಯ ಎಂದು ಈ ಪಕ್ಷಗಳು ಜನರನ್ನು ನಂಬಿಸುತ್ತಿದ್ದಾರೆ. ಹೀಗೆ ಜಾತಿ, ಧರ್ಮಗಳ ಬಗ್ಗೆ ಮಾತಾಡುವ ಬಿಜೆಪಿ, ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳು ಹೆಚ್ಚು ಜನಪ್ರಿಯವಾಗಿವೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರ ಹಿಡಿಯುವಲ್ಲಿ ಈ ಪಕ್ಷಗಳು ಸಫಲವಾಗಿ. ಆರ್ಥಿಕ ಮೆಜಾರಿಟಿ ಮೈನಾರಿಟಿಗಳ ಬಗ್ಗೆ ಮಾತಾಡುವ ಕಮ್ಯುನಿಸ್ಟರು ಹಿಂದಕ್ಕೆ ಸರಿದಿದ್ದಾರೆ. ಅಂದರೆ ಎಲ್ಲ ಜಾತಿ, ಧರ್ಮಗಳಿಂದಲೂ ಪ್ರತಿನಿಧಿಗಳಿದ್ದಾರೆ. ಆದರೆ ಯಾವುದೇ ಜಾತಿ, ಧರ್ಮದಿಂದ ಸಣ್ಣ, ಅತೀ ಸಣ್ಣ ಕೃಷಿಕ ಅಥವಾ ವ್ಯಾಪಾರಿ ಅಥವಾ ಉದ್ದಿಮೆದಾರರು ಅಥವಾ ಕಾರ್ಮಿಕರು, ದಿನಗೂಲಿ ನೌಕರರು ಪ್ರತಿನಿಧಿಗಳಾಗುವುದಿಲ್ಲ.

ಬಿಜೆಪಿ, ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳ ಸಫಲತೆಗೆ ಮತ್ತು ಕಮ್ಯುನಿಸ್ಟರು ವಿಫಲತೆಗೆ ಕೇವಲ ಸಾಮಾಜಿಕ, ಆರ್ಥಿಕ ಕ್ಷೇತ್ರಗಳ ಮೇಲೆ ಈ ಪಕ್ಷಗಳು ಫೋಕಸ್ ಮಾಡುವುದು ಮಾತ್ರ ಕಾರಣವಲ್ಲ. ಬಹುಮುಖ್ಯ ಇತರ ಕಾರಣಗಳಿವೆ. ಒಂದು, ಪ್ರಜಾಪ್ರಭುತ್ವವನ್ನು ಚುನಾವಣೆಗೆ ಸೀಮಿತಗೊಳಿಸಿರುವುದು, ಎರಡು, ಆ ಚುನಾವಣೆಗಳನ್ನೂ ಒಂದು ಸಣ್ಣ ರೂಲಿಂಗ್ ಕ್ಲಾಸ್ ತಮ್ಮ ಹಿಡಿತದಲ್ಲಿಟ್ಟುಕೊಂಡಿರುವುದು, ಮೂರು, ಪ್ರಜಾಪ್ರಭುತ್ವದ ಇತರ ಅಂಗಗಳು – ಮುಖ್ಯವಾಗಿ ಮಾಧ್ಯಮ ಮತ್ತು ನ್ಯಾಯಾಂಗಗಳು ತಮ್ಮ ಮೂಲ ಉದ್ದೇಶಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸಲು ವಿಫಲವಾಗಿರುವುದು ಮುಖ್ಯ ಕಾರಣಗಳು. ಮೇಲಿನ ಪುಟಗಳಲ್ಲಿ ಪ್ರಜಾಪ್ರಭುತ್ವ ಚುನಾವಣೆಗೆ ಸೀಮಿತಗೊಂಡಿರುವುದು ಮತ್ತು ಅದು ಕೂಡ ಸಂಪೂರ್ಣವಾಗಿ ದುಡ್ಡಿನ ಬಲದ ಮೇಲೆ ನಿಂತಿರುವುದನ್ನು ನೋಡಿದ್ದೇವೆ. ಮಾಧ್ಯಮ ಮತ್ತು ನ್ಯಾಯಾಂಗದ ಸೋಲು ಕೂಡ ಪ್ರಜಾಪ್ರಭುತ್ವದ ಸೋಲಿಗೆ ಕಾರಣವಾಗಿರುವುದರ ಕಿರುಚಿತ್ರಣವನ್ನ ಮುಂದಿನ ಭಾಗದಲ್ಲಿ ನೋಡಬಹುದು.

ಮಾಧ್ಯಮ ಇಂದು ಉದ್ದಿಮೆಗಳ ಸ್ವಾಧೀನ ಇದೆ. ಮಾಧ್ಯಮ ಉದ್ದಿಮೆ ನಡೆಸುವವರು ಕೂಡ ಇತರ ಉದ್ದಿಮೆಗಳ ಶೇರುಗಳನ್ನು ಹೊಂದಿದ್ದಾರೆ ಅಥವಾ ಇತರ ಉದ್ದಿಮೆಗಳು ತಮ್ಮ ಶೇರುಗಳನ್ನು ಮಾಧ್ಯಮ ನಡೆಸುವ ಉದ್ದಿಮೆಗಳಿಗೆ ನೀಡುತ್ತವೆ. ಈ ಕೊಡುಕೊಳ್ಳುವ ವ್ಯವಹಾರದ ಉದ್ದೇಶ ಮಾಧ್ಯಮ ನಡೆಸುವ ಉದ್ದಿಮೆ ತಾನು ಶೇರುದಾರರಾಗಿರುವ ಉದ್ದಿಮೆ ಬಗ್ಗೆ ಸಕರಾತ್ಮಕ ಚಿತ್ರಣವನ್ನೇ ಬಿಂಬಿಸುತ್ತಿರಬೇಕೆನ್ನುವುದು. ಉದ್ದಿಮೆಗಳು ಮಾಧ್ಯಮ ನಡೆಸುವುದು ಅಥವಾ ಮಾಧ್ಯಮ ನಡೆಸುವ ಉದ್ದಿಮೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇತರ ಉದ್ದಿಮೆಗಳ ಶೇರುಗಳನ್ನು ಹೊಂದುವುದು ಒಂದೇ ಪರಿಣಾಮವನ್ನು ಸೃಷ್ಟಿಸುತ್ತದೆ. ಅದೇನೆಂದರೆ ಮಾಧ್ಯಮ ನಡೆಸುವವರು ಸರಕಾರವನ್ನು ಎದುರು ಹಾಕಿಕೊಳ್ಳುವ ಸ್ಥಿತಿ ಇಲ್ಲ. ತಮ್ಮ ಮಾಧ್ಯಮ ಮತ್ತು ಮಾಧ್ಯಮೇತರ ಉದ್ದಿಮೆಗಳ ರಕ್ಷಣೆಗೆ ಅವರಿಗೆ ಸರಕಾರದ ಕೃಪೆ ಅಗತ್ಯ ಇದೆ. ಸರಕಾರವನ್ನು ಎದುರು ಹಾಕಿಕೊಂಡರೆ ಅಥವಾ ಸರಕಾರದ ನೀತಿಗಳನ್ನು ಕಟುವಾಗಿ ಟೀಕೆ ಮಾಡಿದರೆ ತಮ್ಮ 50 ಕೋಟಿ ವಿನಿಯೋಜನೆಯ ಮಾಧ್ಯಮದಿಂದಾಗಿ ಅವರು 500 ಕೋಟಿ ಮಾಧ್ಯಮೇತರ ವಿನಿಯೋಜನೆಯನ್ನು ಬಲಿಕೊಡಬೇಕಾಗುತ್ತದೆ.

ಇನ್ನು ಚುನಾವಣೆಯ ದೃಷ್ಟಿಯಿಂದ ಮಾಧ್ಯಮದ ಪಾತ್ರವನ್ನು ಗಮನಿಸಿದರೆ ಪಕ್ಷಗಳು ಮತ್ತು ಅಭ್ಯರ್ಥಿಗಳನ್ನು ಜನರಿಗೆ ಪರಿಚಯಿಸುವ ಜವಾಬ್ದಾರಿಯನ್ನು ಮಾಧ್ಯಮ ಹೊಂದಿದೆ. ವಿವಿಧ ಪಕ್ಷಗಳು ಮತ್ತು ಅವುಗಳ ತತ್ತ್ವ ಸಿದ್ಧಾಂತಗಳು, ಪಕ್ಷಗಳ ಆರ್ಥಿಕ ಸಾಮಾಜಿಕ ನಿಲುವುಗಳು, ಅಧಿಕಾರಕ್ಕೆ ಬಂದರೆ ಅವು ತರಬಹುದಾದ ನೀತಿಗಳು ಇತ್ಯಾದಿಗಳ ಬಗ್ಗೆ ಮಾಧ್ಯಮಗಳು ಚರ್ಚಿಸಬೇಕು. ಅಷ್ಟು ಮಾತ್ರವಲ್ಲ ಸ್ಪರ್ಧಿಸುವ ಅಭ್ಯರ್ಥಿಗಳು ಅವರ ಶಿಕ್ಷಣ, ಸಮಾಜ ಸೇವೆ ಮಾಡಿದ ಅನುಭವ, ಆಸ್ತಿಪಾಸ್ತಿ, ಕ್ರಿಮಿನಲ್ ಹಿನ್ನೆಲೆ ಇತ್ಯಾದಿಗಳ ಬಗ್ಗೆ ಮಾಧ್ಯಮಗಳು ಚರ್ಚಿಸಬೇಕು. ಇವೆಲ್ಲವನ್ನು ಮಾಧ್ಯಮ ಚರ್ಚಿಸಿದರೆ ಕಡಿಮೆ ಶಿಕ್ಷಣ, ಕಡಿಮೆ ಸಮಾಜ ಸೇವೆ, ಅತೀ ಹೆಚ್ಚು ಕೋಟ್ಯಧೀಶರು, ಕ್ರಿಮಿನಲ್ ಹಿನ್ನೆಲೆವುಳ್ಳ ಅಭ್ಯರ್ಥಿಗಳಿರುವ ಪಕ್ಷ ಮತ್ತು ಹೆಚ್ಚು ಶಿಕ್ಷಣ, ಹೆಚ್ಚು ಸಮಾಜ ಸೇವೆ, ತಳಸ್ತರದ ಹಿನ್ನೆಲೆಯಿಂದ ಬಂದ ಅಭ್ಯರ್ಥಿಗಳಿರುವ ಪಕ್ಷ ಯಾವುದೆನ್ನುವ ಚಿತ್ರಣ ಜನರಿಗೆ ಲಭ್ಯವಾಗುತ್ತದೆ. ತಮ್ಮ ಆಸಕ್ತಿಯನ್ನು ರಕ್ಷಿಸುವ ಪಕ್ಷ ಮತ್ತು ಅಭ್ಯರ್ಥಿಯನ್ನು ಗುರುತಿಸಲು ಈ ಮಾಹಿತಿ ಸಹಕರಿಸುತ್ತದೆ. ಆದರೆ ಇವು ಯಾವುವು ಮಾಧ್ಯಮಗಳಲ್ಲಿ ಚರ್ಚಿಸಲ್ಪಡುವುದಿಲ್ಲ. ಅತೀ ಹೆಚ್ಚು ಚುನಾವಣ ಫಂಡ್ ಇರುವ ಪಕ್ಷ ಮತ್ತು ಅಭ್ಯರ್ಥಿ ಮಾಧ್ಯಮದ ಬಹುಭಾಗವನ್ನು ಅಕ್ರಮಿಸಿಕೊಳ್ಳುತ್ತಾರೆ. ದಿನನಿತ್ಯ ಮಾಧ್ಯಮದಲ್ಲಿ ಬರುವುದರಿಂದ ಇವರೇ ಜನಪ್ರಿಯ ನಾಯಕರೆನ್ನುವ ತೀರ್ಮಾನಕ್ಕೆ ಬರುತ್ತಾರೆ. ಇಂತಹ ಸ್ಥಿತಿ ಯೋಗ್ಯರನ್ನು ಮೂಲೆಗುಂಪು ಮಾಡಿ ಆಯೋಗ್ಯರನ್ನು ಚುನಾಯಿಸುವ ಸ್ಥಿತಿ ನಿರ್ಮಾಣ ಮಾಡುತ್ತದೆ.

ಚುನಾವಣೆಯಲ್ಲಿ ನಡೆಯುವ ಹಣದ ಪ್ರಭಾವವನ್ನು ಕುಗ್ಗಿಸುವ ಸಾಮರ್ಥ್ಯ ನ್ಯಾಯಾಂಗಕ್ಕೆ ಇದೆ. ಆದರೆ ನ್ಯಾಯಾಂಗ ಈ ದಿಶೆಯಲ್ಲಿ ಸಲಹೆ ಕೊಡುವುದು ಬಿಟ್ಟರೆ ಹಣದ ಪ್ರಭಾವವನ್ನು ನಿಷೇಧಿಸುವು ದೃಢ ಆದೇಶಗಳನ್ನು ನೀಡಿಲ್ಲ. ಚುನಾವಣೆಯಲ್ಲಿ ಹಣದ ಪ್ರಭಾವವನ್ನು ಕಡಿಮೆ ಮಾಡಲು ಮಾತ್ರ ನ್ಯಾಯಾಂಗ ವಿಫಲಗೊಂಡಿರುವುದಲ್ಲ; ಸಾಮಾನ್ಯರಿಗೆ ನ್ಯಾಯ ನೀಡಲು ನ್ಯಾಯಾಂಗ ವಿಫಲಗೊಂಡಿದೆ. ಜೈಲಲ್ಲಿರುವ ಖೈದಿಗಳಲ್ಲಿ ಮುಕ್ಕಾಲು ಭಾಗ ಖೈದಿಗಳು ವಿಚಾರಣಪೂರ್ವ ಖೈದಿಗಳು. ಅಂದರೆ ಅವರ ಅಪರಾಧ ಏನೆಂದು ತೀರ್ಮಾನ ಆಗುವ ಮುನ್ನವೇ ಅವರು ಆರೇಳು ವರ್ಷ ಜೈಲಲ್ಲಿ ಕೊಳೆಯುತ್ತಿದ್ದಾರೆ. ಇದಕ್ಕೆ ಬಹುಮುಖ್ಯ ಕಾರಣ ವಿಚಾರಣಪೂರ್ವ ಖೈದಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ. ಅಂದರೆ ಅವರಲ್ಲಿ ಬಹುತೇಕರು ದಲಿತ, ಬುಡಕಟ್ಟು, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಹಿನ್ನೆಲೆಯಿಂದ ಬಂದವರು. ಜೊತೆಗೆ ಅವರಿಗೆ ವಕೀಲರನ್ನು ನೇಮಕ ಮಾಡಲು, ಕೋರ್ಟ್ ಫೀ ಕಟ್ಟಲು, ಜಾಮೀನು ನೀಡಲು ಶಕ್ತಿ ಇಲ್ಲದ ಕಾರಣ ವರ್ಷಾನುಗಟ್ಟಲೆ ಜೈಲಲ್ಲಿ ಕೊಳೆಯುತ್ತಿದ್ದಾರೆ.


ಶತಮಾನಗಳಿಂದ ಶೋಷಣೆ ಅನುಭವಿಸುವವರನ್ನು ಸಣ್ಣಪುಟ್ಟ ಅಪರಾಧಗಳಿಗೆ ವರ್ಷಾನುಗಟ್ಟಲೆ ಶಿಕ್ಷಿಸುವ ಮೂಲಕ ಸರಕಾರ ಏನು ಸಂದೇಶ ರವಾನಿಸುತ್ತಿದೆ? ವರ್ತಮಾನದಲ್ಲಿರುವ ಏಣಿಶ್ರೇಣಿಗಳನ್ನು ಮತ್ತು ಅವು ಸೃಷ್ಟಿಸುವ ಆರ್ಥಿಕ, ರಾಜಕೀಯ ವ್ಯಸ್ಥೆಯನ್ನು ಒಪ್ಪಿಕೊಂಡಿ ಬದುಕುವುದು ಬಿಟ್ಟರೆ ನಿಮಗೆ ಬೇರೆ ದಾರಿ ಇಲ್ಲ ಎನ್ನುವ ಸಂದೇಶವನ್ನು ರವಾನಿಸುತ್ತದೆ. ಇವರು ವ್ಯವಸ್ಥೆಯನ್ನು ಪ್ರಶ್ನಿಸುವುದು ಅಥವಾ ಬದಲೀ ವ್ಯವಸ್ಥೆ ಬಗ್ಗೆ ಆಲೋಚಿಸುವುದು ಹೇಗೆ? ಬದಲೀ ವ್ಯವಸ್ಥೆ ಬಗ್ಗೆ ಆಲೋಚಿಸಲು ಸಾಧ್ಯವಾಗದಿದ್ದರೆ ಇವರ ಆಸಕ್ತಿಯನ್ನು ಪ್ರತಿನಿಧಿಸುವ ಪಕ್ಷದ ಕಾರ್ಯಕ್ರಮಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಇವೆಲ್ಲವೂ ಒಂದು ಕಡೆಯಲ್ಲಿ ಬಲಾಢ್ಯರ ಹಿತಾಸಕ್ತಿಯನ್ನು ರಕ್ಷಿಸುವ ಪಕ್ಷಗಳಿಗೆ ಅನುಕೂಲವಾದರೆ ಮತ್ತೊಂಡೆಯಲ್ಲಿ ಬಲಹೀನರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಪಕ್ಷಗಳಿಗೆ ಅನನುಕೂಲವಾಗುತ್ತವೆ.

ಸಮರೋಪ

ಲೇಖನದಲ್ಲಿ ನಮ್ಮ ಪ್ರಜಾಪ್ರಭುತ್ವ ಚುನಾವಣೆಗೆ ಸಿಮೀತವಾಗಿರುವುದು ಮತ್ತು ಈ ಚುನಾವಣೆ ಕೂಡ ದುಡ್ಡಿನ ಬಲದಿಂದಲೇ ನಡೆಯುವುದರ ಕಿರು ಚಿತ್ರಣ ನೀಡಿದ್ದೇನೆ. ದುಡ್ಡಿನ ಬಲದಿಂದಲೇ ನಡೆಯುವ ಚುನಾವಣೆ ಪ್ರಜಾಪ್ರಭುತ್ವನ್ನು ಮಾತ್ರ ಕುಂಠಿಸಿರುವುದಲ್ಲ, ಜನರ ಮುಂದಿರುವ ರಾಜಕೀಯ ಆಯ್ಕೆಯನ್ನು ಕುಂಠಿಸಿದೆ. ಸಾಮಾಜಿಕ ಮೇಜಾರಿಟಿ ಮತ್ತು ಮೈನಾರಿಟಿಗಳನ್ನು ಮಾತ್ರ ಮುಂದಿಕ್ಕಿ ಆರ್ಥಿಕ ಮೆಜಾರಿಟಿ ಮೈನಾರಿಟಿಗಳು ಮುಂಚೂಣಿಗೆ ಬರದಂತೆ ನೋಡಿಕೊಂಡಿದೆ. ಇಂತಹ ಸ್ಥಿತಿಗೆ ದುಡ್ಡಿನ ಪ್ರಭಾವದ ಜೊತೆಗೆ ಮಾಧ್ಯಮ ಹಾಗು ನ್ಯಾಯಾಂಗಗಳು ಅವುಗಳ ➚




ಕೃಪೆ: ಸತೀಶ್ ಆಚಾರ್ಯ



ಕೃಪೆ: ಪಿ. ಮಹಮ್ಮದ್, ವಾ.ಭಾ.

ಬಹು ಮಹತ್ವದ ಕರ್ನಾಟಕ ಚುನಾವಣೆ



ಪ್ರಕಾಶ್ ಕಾರತ್

ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆ ಚುನಾವಣೆಗೆ ವಿಶೇಷ ಮಹತ್ವವಿದೆ. ಒಟ್ಟಾರೆ ರಾಜಕೀಯ ಪ್ರಾಬಲ್ಯ ಸಾಧಿಸುವ ಉದ್ದೇಶ ಹೊಂದಿರುವ ಬಿಜೆಪಿಗೆ ದಕ್ಷಿಣ ಭಾರತದ ಇತರ ರಾಜ್ಯಗಳಲ್ಲಿ ತನ್ನ ಪ್ರಭಾವವನ್ನು ಹರಡುವ ಮಹತ್ವಾಕಾಂಕ್ಷೆ ಇರುವುದರಿಂದ ದಕ್ಷಿಣದ ಈ ರಾಜ್ಯದಲ್ಲಿ ಅಧಿಕಾರವನ್ನು ಉಳಿಸಿಕೊಳ್ಳುವುದು ಮಹತ್ವದ್ದಾಗಿದೆ.

ಚುನಾವಣಾ ಪ್ರಚಾರ ಉತ್ತುಂಗಕ್ಕೆ ಏರಿದ್ದು ಯಾವ ದೃಷ್ಟಿಯಲ್ಲಿ ನೋಡಿದರೂ ಅಧಿಕಾರ-ವಿರೋಧಿ ಅಲೆಯೊಂದಿಗೆ ಬಿಜೆಪಿ ಬಹಳ ಕಠಿಣವಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬ್ರಹ್ಮಾಂಡ ಭ್ರಷ್ಟಾಚಾರ, ಬೆಲೆಯೇರಿಕೆ, ನಿರುದ್ಯೋಗ ಮತ್ತು ರೈತರ ಬಿಕ್ಕಟ್ಟಿನ ವಿರುದ್ಧ ಜನರಲ್ಲಿ ಅಪಾರ ಅಸಮಾಧಾನ ಮಡುಗಟ್ಟಿದೆ.

‘ಆಪರೇಶನ್ ಕಮಲ’ ಮೂಲಕ ಪಕ್ಷಾಂತರಗಳನ್ನು ನಡೆಸಿ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರಕಾರವನ್ನು ಉರುಳಿಸಿ 2019ರ ಜುಲೈನಲ್ಲಿ ಬಿಜೆಪಿ ಸರಕಾರವನ್ನು ರಚಿಸಿತು. ಆಗಿನಿಂದಲೂ ಕಳೆದ ನಾಲ್ಕು ವರ್ಷಗಳಿಂದ ರಾಜ್ಯ ಇಬ್ಬರು ಮುಖ್ಯಮಂತ್ರಿಗಳು ಹಾಗೂ ಮೂವರು ಉಪ ಮುಖ್ಯಮಂತ್ರಿಗಳನ್ನು ಕಂಡಿದೆ. ಬಿ.ಎಸ್. ಯಡಿಯೂರಪ್ಪ 2021ರ ಜುಲೈನಲ್ಲಿ ಅಧಿಕಾರದಿಂದ ಕೆಳಗಿಳಿದು ಬಸವರಾಜ ಬೊಮ್ಮಾಯಿಗೆ ಸಿಎಂ ಪಟ್ಟ ಬಿಟ್ಟುಕೊಡಬೇಕಾಯಿತು. ಬೊಮ್ಮಾಯಿ ಸರಕಾರದ ಆಡಳಿತ ಅತ್ಯಂತ ಅದಕ್ಷವಾಗಿದ್ದು ಭ್ರಷ್ಟಾಚಾರದಿಂದ ತುಂಬಿ ಹೋಗಿದೆ. ಜೆಡಿಎಸ್‌ನಿಂದ ಪಕ್ಷಾಂತರಗೊಂಡು ಬಿಜೆಪಿಗೆ ಬಂದಿದ್ದ ಬೊಮ್ಮಾಯಿ ಆಕ್ರಮಣಾತ್ಮಕ ಹಿಂದೂತ್ವ ಅಜೆಂಡಾವನ್ನು ಮುಂದೊತ್ತಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಯತ್ನಿಸಿದ್ದಾರೆ.

ಗೋಹತ್ಯೆ ಮೇಲೆ ಕಠಿಣ ನಿಷೇಧ ಮತ್ತು ಮುಖ್ಯವಾಗಿ ಮುಸ್ಲಿಮರು ನಡೆಸುವ ಮಾಂಸ ವ್ಯಾಪಾರವನ್ನು ಅಸ್ತವ್ಯಸ್ತಗೊಳಿಸುವ ಮೂಲಕ ಬೊಮ್ಮಾಯಿ ಆಡಳಿತ ನಗ್ನವಾಗಿ ಬಹುಸಂಖ್ಯಾತ ಭಾವನೆಗಳನ್ನು ಬಡಿದೆಬ್ಬಿಸಿದೆ. ಕ್ರೈಸ್ತರನ್ನು ಗುರಿಯಾಗಿಸಿಕೊಂಡು ರಾಜ್ಯವು ಕರಾಳ ಮತಾಂತರ–ನಿಷೇಧ ಕಾನೂನನ್ನು ಕೂಡ ಅಂಗೀಕರಿಸಿದೆ. ಪಿಯುಸಿ ಹಂತದಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದನ್ನು ನಿಷೇಧಿಸಲಾಗಿದೆ. ಒಬಿಸಿಯೊಳಗೇ ಮುಸ್ಲಿಮರಿಗಿದ್ದ 4% ಮೀಸಲಾತಿಯನ್ನು ಸರ್ಕಾರ ತೆಗೆದು ಹಾಕಿದೆ. ಟಿಪ್ಪು ಸುಲ್ತಾನ್ ವಿರುದ್ಧ ನಡೆಸುತ್ತಿರುವ ಅಪಪ್ರಚಾರವನ್ನು ಟಿಪ್ಪುವನ್ನು ಕೊಂದಿದ್ದು ಬ್ರಿಟಿಷರಲ್ಲ; ಕಟ್ಟುಕತೆಯ ಇಬ್ಬರು ಒಕ್ಕಲಿಗರು ಕೊಂದಿದ್ದು ಎಂಬಲ್ಲಿ ವರೆಗೆ ತಂದು ನಿಲ್ಲಿಸಿದ್ದಾರೆ. ಇದು ಕರ್ನಾಟಕ ಸರಕಾರ ಸಾಗಿರುವ ಹಾದಿಯಾಗಿದೆ.

ಆದರೆ, ಕೋಮುವಾದಿ ಧ್ರುವೀಕರಣವನ್ನು ಆಳಗೊಳಿಸಿ ಬಹುಸಂಖ್ಯಾತರ ಭಾವನೆಗಳನ್ನು ಕೆರಳಿಸುವ ಈ ಪ್ರಯತ್ನಗಳು ದಾಖಲೆಯ ಭ್ರಷ್ಟಾಚಾರ ಮತ್ತು ಕಾರ್ಪೊರೇಟ್‌ಪರ ಕಾರ್ಮಿಕ–ವಿರೋಧಿ ಮತ್ತು ರೈತ–ವಿರೋಧಿ ನೀತಿಗಳಿಂದಾಗಿ ಮಂಕಾದವು. ಬೊಮ್ಮಾಯಿ ಸರಕಾರ 40% ಲಂಚದ ಸರಕಾರಕ್ಕೆ ಸಮಾನಾರ್ಥಕ ಪದವಾಗಿ ರೂಪುಗೊಂಡಿದೆ. ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರೇ ಮಾಡಿದ ಆರೋಪವಿದು. ವಿವಿಧ ಇಲಾಖೆಗಳು ಮತ್ತು ಸಚಿವಾಲಯಗಳ ಬಿಲ್ ಪಾಸ್ ಆಗಬೇಕಾದರೆ ಒಟ್ಟು ಬಿಲ್‌ನ 40% ಲಂಚ ಕೊಡಬೇಕಾಗಿದೆ ಎಂದು ಅಧ್ಯಕ್ಷರು ಹೇಳಿದ್ದರು. ಸಚಿವ ಕೆ.ಎಸ್. ಈಶ್ವರಪ್ಪ ಲಂಚ ಕೇಳಿದ್ದಾರೆಂದು ಆರೋಪಿಸಿದ ಒಬ್ಬ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಮಾಡಿಕೊಂಡ ನಂತರ ಈಶ್ವರಪ್ಪ ರಾಜೀನಾಮೆ ಕೊಡಬೇಕಾಯಿತು. ತೀರಾ ಇತ್ತೀಚೆಗೆ ಒಬ್ಬ ಬಿಜೆಪಿ ಶಾಸಕ ಮತ್ತು ಆತನ ಮಗನನ್ನು ಲಂಚ ಕೇಳಿದ ಆರೋಪದ ಮೇಲೆ ಬಂಧಿಸಲಾಗಿದೆ. ಅವರ ಮನೆಗಳಿಂದ ವಿಚಕ್ಷಣಾ ದಳ 8.1 ಕೋಟಿ ರೂಪಾಯಿ ನಗದನ್ನು ವಶಪಡಿಸಿಕೊಂಡಿದೆ.

ಸಾಂಸ್ಥೀಕರಿಸಿದ ಭ್ರಷ್ಟಾಚಾರದ ಮೂಲಕವಾದ ಈ ಬಹಿರಂಗ ಲೂಟಿಯೊಂದಿಗೆ ರೈತ–ವಿರೋಧಿ ನೀತಿಗಳು ಸೇರಿಕೊಂಡಿವೆ. ಕೃಷಿಯೇತರ ಉದ್ದೇಶಗಳಿಗಾಗಿ ಭೂಮಿಯನ್ನು ಪರಿವರ್ತಿಸಲು ಭೂಸುಧಾರಣೆ ಕಾನೂನಿಗೆ ತಿದ್ದುಪಡಿ ತರಲಾಗಿದೆ. ಸಂಸತ್ತಿನಲ್ಲಿ ಅಂಗೀಕರಿಸಲಾದ ಕೃಷಿ ಮಸೂದೆಗೆ ಅನುಗುಣವಾಗಿ ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಕಾರ್ಪೊರೇಟ್‌ಗಳ ಪ್ರವೇಶಕ್ಕೆ ಅನುಮತಿಸಲು ಎಪಿಎಂಸಿ ವ್ಯವಸ್ಥೆಯನ್ನು ದುರ್ಬಲಗೊಳಿಸಲಾಗಿದೆ. ಅಗತ್ಯ ವಸ್ತುಗಳು ಮತ್ತು ಅಡುಗೆ ಅನಿಲಗಳ ಬೆಲೆ ಏರಿಕೆ ಬಡ ವಿಭಾಗಗಳ ದೊಡ್ಡ ಸಮಸ್ಯೆಯಾಗಿದೆ ಎಂದು ಇತ್ತೀಚಿನ ಸಮೀಕ್ಷೆಗಳು ಹೇಳಿವೆ. ಭ್ರಷ್ಟಾಚಾರ ಮತ್ತು ಬೆಲೆಯೇರಿಕೆಯಲ್ಲದೆ ನಿರುದ್ಯೋಗವೂ ದೊಡ್ಡ ಸಮಸ್ಯೆಯಾಗಿದೆ.

ಪ್ರಬಲವಾದ ಆಡಳಿತ–ವಿರೋಧಿ ಅಲೆಯಿದೆ ಎಂಬುದು ಚೆನ್ನಾಗಿ ಗೊತ್ತಿರುವ ಬಿಜೆಪಿ ಕೇಂದ್ರ ನಾಯಕತ್ವವು ಹಿಂದೂತ್ವ ಕಾರ್ಯಸೂಚಿ ಮೇಲೆ ಗಮನ ಕೇಂದ್ರೀಕರಿಸಲು ಮುಂದಾಗಿದೆ. ಸ್ವತಃ ನರೇಂದ್ರ ಮೋದಿ ಮತ್ತು ಅಮಿತ್ ಷಾ ಅವರೇ ಇದರ ನೇತೃತ್ವ ವಹಿಸಿದ್ದಾರೆ. ಬಿಜೆಪಿ ಆಡಳಿತಕ್ಕೆ ಮರಳಿದರೆ ಮುಸ್ಲಿಂ ಮೀಸಲಾತಿಯನ್ನು ರದ್ದುಪಡಿಸುವುದಾಗಿ ಅಮಿತ್ ಷಾ ಕೊಚ್ಚಿಕೊಂಡಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕದಲ್ಲಿ ಗಲಭೆಗಳು ನಡೆಯುತ್ತವೆ ಎಂದವರು ಎಚ್ಚರಿಸಿದ್ದಾರೆ. ಕಾಂಗ್ರೆಸ್ ನಾಯಕತ್ವವು ಭಯೋತ್ಪಾದಕರ ರಕ್ಷಕರು ಮತ್ತು ತುಷ್ಟೀಕರಣದ ಮಾಸ್ಟರ್‌ಗಳು ಎಂದು ಬಿಂಬಿಸಲು ಮೋದಿ ಯತ್ನಿಸಿದ್ದಾರೆ. ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮತ್ತು ರಾಷ್ಟ್ರೀಯ ಪೌರತ್ವ ರಿಜಿಸ್ಟರ್ (ಎನ್‌ಆರ್‌ಸಿ) ಜಾರಿಗೆ ತರುವುದಾಗಿ ಬಿಜೆಪಿ ಪ್ರಣಾಳಿಕೆ ಹೇಳಿದೆ. ದೇವಸ್ಥಾನಗಳ ಸುತ್ತಮುತ್ತಲಿನ ಸ್ಥಳೀಯ ವ್ಯಾಪಾರಗಳನ್ನು ನಿಯಂತ್ರಿಸಲಾಗುವುದೆಂದು ಅದು ಹೇಳಿದೆ. ದೇವಾಲಯಗಳ ಸಮೀಪ ಮುಸ್ಲಿಮರು ಅಂಗಡಿಗಳನ್ನು ತೆರೆಯುವುದನ್ನು ನಿರ್ಬಂಧಿಸಲಾಗುವುದೆಂಬುದು ಇದರ ಅರ್ಥವಾಗಿದೆ.

ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿ ಅನುಸರಿಸುವ ಮಾಮೂಲಿ ತಂತ್ರಗಳು ಮತ್ತು ಘೋಷಣೆಗಳು ಹೆಚ್ಚಿನ ಫಲಿತಾಂಶ ತೋರಿಸುತ್ತಿಲ್ಲ ಎನ್ನುವುದನ್ನು ಪ್ರಸಕ್ತ ಚುನಾವಣೆಯ ಈವರೆಗಿನ ಪ್ರಚಾರ ತೋರಿಸಿದೆ. ರಾಜ್ಯ ಸರಕಾರ ಎಲ್ಲಾ ರಂಗಗಳಲ್ಲಿ ದಯನೀಯವಾಗಿ ವಿಫಲವಾಗಿರುವುದರಿಂದ ‘ಡಬ್ಬಲ್ ಇಂಜಿನ್ ಸರಕಾರ’ದ ಅದರ ಕರೆ ಠುಸ್ ಆಗಿದೆ. ಹಿಂದೂತ್ವ ಕಾರ್ಡ್ ಕೂಡ ಅದರದೇ ಮಿತಿಯನ್ನು ಹೊಂದಿದೆ. ಈಗಾಗಲೇ ಬದ್ಧವಾದ ಮತ್ತು ಕೆಲವು ನಿರ್ದಿಷ್ಟ ಕೋಮು–ಧ್ರುವೀಕರಣ ಪ್ರದೇಶಗಳಲ್ಲಿ ಅದು ಹೆಚ್ಚು ಪ್ರಭಾವ ಬೀರಬಹುದಾದರೂ ಅತೃಪ್ತಿಯಿಂದ ಕುದಿಯುತ್ತಿರುವ ವಿಶಾಲ ಜನಸಮುದಾಯವನ್ನು ಆಕರ್ಷಿಸಲು ಅದಕ್ಕೆ ಸಾಧ್ಯವಾಗದು. ಹಿಂದೂತ್ವದ ಕರೆಯು ಕರಾವಳಿ ಜಿಲ್ಲೆಗಳು ಮತ್ತು ಮಧ್ಯ ಮತ್ತು ಮಲೆನಾಡು ಕರ್ನಾಟಕದ ಕೆಲವು ಭಾಗಗಳಿಗೆ ಸೀಮಿತವಾಗಿರುವಂತೆ ಕಾಣುತ್ತದೆ. ಟಿಕೆಟ್ ಹಂಚಿಕೆ ವಿಚಾರದಲ್ಲಿ ಲಿಂಗಾಯತ ನಾಯಕತ್ವದಲ್ಲಿ ಅವ್ಯವಸ್ಥೆ ಉಂಟಾಗಿದ್ದು ಕೆಲವು ಪ್ರಮುಖ ನಾಯಕರು ಪಕ್ಷವನ್ನು ಬಿಟ್ಟು ಹೋಗಿದ್ದಾರೆ.

‘ಡಬ್ಬಲ್ ಎಂಜಿನ್’ ಘೋಷಣೆಯಲ್ಲಿ ಅಂತರ್ಗತವಾಗಿರುವ ಕೇಂದ್ರೀಯ ಅಂಶಕ್ಕೆ ತದ್ವಿರುದ್ಧವಾಗಿ ಪ್ರಾದೇಶಿಕ ಕನ್ನಡಿಗ ಅಸ್ಮಿತೆ ರಕ್ಷಣೆಯ ಅಂಶವೂ ಈ ಚುನಾವಣೆಯಲ್ಲಿ ಮುಂಚೂಣಿಗೆ ಬಂದಿದೆ. ಡಬ್ಬಲ್ ಎಂಜಿನ್ ಸರಕಾರವು ಹಿಂದಿ ಹೇರಿಕೆಗೆ, ಕೇಂದ್ರೀಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದ ನಿರ್ಲಕ್ಷ್ಯಕ್ಕೆ ಮತ್ತು ಕರ್ನಾಟಕ ಹಾಲು ಸಹಕಾರ ಒಕ್ಕೂಟವನ್ನು ಗುಜರಾತ್‌ನ ಅಮೂಲ್‌ನೊಂದಿಗೆ ವಿಲೀನಗೊಳಿಸುವ ಮಾತುಗಳು ಮುನ್ನೆಲೆಗೆ ಬರಲು ಈ ಸರಕಾರ ಕಾರಣವಾಗಿದೆ.

ತೀರಾ ಹತಾಶಗೊಂಡಿರುವ ಬಿಜೆಪಿ ಪ್ರಚಾರ ಈಗ ಮೋದಿ ಪ್ರಭಾವಳಿ ಮೇಲೆ ಅವಲಂಬಿಸಿದೆ. ಬಿಜೆಪಿ ಅಭ್ಯರ್ಥಿಗಳಿಗೆ ನೀಡುವ ಮತ ನರೇಂದ್ರ ಮೋದಿಗೆ ನಿಮ್ಮ ಮೆಚ್ಚುಗೆಗೆ ಸಮನಾಗುತ್ತದೆ ಎನ್ನುವುದರೊಂದಿಗೆ ಬಸವರಾಜ ಬೊಮ್ಮಾಯಿ ಚುನಾವಣಾ ರ‍್ಯಾಲಿಗಳಲ್ಲಿ ಭಾಷಣ ಆರಂಭಿಸುತ್ತಿದ್ದಾರೆ. ಈ ವರ್ಷ ಫೆಬ್ರವರಿ ತಿಂಗಳಲ್ಲಿ ಹಿಮಾಚಲ ಪ್ರದೇಶದಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಏನಾಯಿತು ಎನ್ನುವುದನ್ನು ಮೋದಿಗಾಗಿ ಓಟು ಕೊಡಿ ಎಂಬ ಮನವಿ ನೆನಪಿಸುತ್ತದೆ. ‘ನೀವು ಬಿಜೆಪಿ ಅಭ್ಯರ್ಥಿಯನ್ನು ನೆನಪಿಟ್ಟುಕೊಳ್ಳಬೇಕಿಲ್ಲ, ಕೇವಲ ಕಮಲ ಚಿಹ್ನೆಯನ್ನು ನೆನಪಿಟ್ಟುಕೊಳ್ಳಿ, ಕಮಲಕ್ಕೆ ಮತ ನೀಡಿದರೆ ಮೋದಿಗೆ ಮತ ನೀಡಿದಂತೆ’ ಎಂದು ಸ್ವತಃ ಮೋದಿಯೇ ಪ್ರಚಾರ ಸಭೆಗಳಲ್ಲಿ ಹೇಳಿದ್ದರು. ಆ ಚುನಾವಣೆಯಲ್ಲಿ ಏನಾಯಿತೆನ್ನುವುದು ನಮಗೆಲ್ಲಾ ಗೊತ್ತಿದೆ: ಬಿಜೆಪಿ ಸೋತು ಸರಕಾರವನ್ನು ಕಳೆದುಕೊಂಡಿತು.

ಬಿಜೆಪಿ–ಆರೆಸ್ಸೆಸ್ ಕೂಟ ಮಹತ್ವದ ರಾಜಕೀಯ ಮತ್ತು ಸೈದ್ಧಾಂತಿಕ ಪ್ರಭಾವ ಹೊಂದಿರುವ ದಕ್ಷಿಣ ಭಾರತದ ಏಕೈಕ ರಾಜ್ಯ ಕರ್ನಾಟಕ. ವಿಧಾನಸಭೆ ಚುನಾವಣೆಯಲ್ಲಿ ಅದರ ಸೋಲು ಹಿಂದೂತ್ವ ಶಕ್ತಿಗಳಿಗೆ ದೊಡ್ಡ ಹಿನ್ನಡೆಯಾಗಲಿದೆ. ಹಾಗೂ 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಗಂಭೀರ ಸವಾಲೊಡ್ಡಲು ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಪ್ರಮುಖ ಶಕ್ತಿ ತುಂಬಲು ವೇದಿಕೆಯಾಗಲಿದೆ.

ಅನು: ವಿಶ್ವ

ಮೂಲ ಉದ್ದೇಶಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಲು ವಿಫಲವಾಗಿರುವುದು ಕೂಡ ಕಾರಣವಾಗಿದೆ. ಈ ಎಲ್ಲ ಬೆಳವಣಿಗೆಗಳು ಒಂದು ಸಣ್ಣ ರೂಲಿಂಗ್ ಕ್ಲಾಸನ್ನು ರೂಪಿಸುತ್ತಿವೆ. ಸಾಮಾಜಿಕ ಮೆಜಾರಿಟಿಗೆ ಮಮತ್ವ ನೀಡುವ ಎಲ್ಲ ಲಿಬರಲ್ ಪಕ್ಷಗಳಲ್ಲೂ ಇದೇ ರೂಲಿಂಗ್ ಕ್ಲಾಸ್ ಕಾರುಬಾರು ಮಾಡುತ್ತಿದೆ. ಇದೇ ಕಾರಣದಿಂದ ಎಲ್ಲ ಲಿಬರಲ್ ಪಕ್ಷಗಳ ಆರ್ಥಿಕ ನೀತಿಗಳು ಹೆಚ್ಚು ಕಡಿಮೆ ಒಂದೇ ಇದೆ.

ಅನುಕೂಲಸ್ಥರಿಂದ ಹೆಚ್ಚು ತೆರಿಗೆ ಸಂಗ್ರಹಿಸುವ ಬದಲು ಅನನುಕೂಲಸ್ಥರಿಂದ ಹೆಚ್ಚು ತೆರಿಗೆ ಸಂಗ್ರಹಿಸುವುದು, ಬಜೆಟ್ ಕೊರತೆಯನ್ನು ಸರಕಾರ ಸಾಲ ಮಾಡಿ ತುಂಬಿಸುವುದು, ಈ ಸಾಲವನ್ನು ಸರಕಾರಿ ಬಾಂಡ್ ಮೂಲಕ ಇದೇ ಅನುಕೂಲಸ್ಥರಿಂದ ಹೆಚ್ಚು ಬಡ್ಡಿ ನೀಡಿ ಪಡೆಯುವುದು, ಭೂಮಿ, ಪ್ರಾಕೃತಿಕ ಸಂಪನ್ಮೂಲಗಳನ್ನು ಅತ್ಯಂತ ಕಡಿಮೆ ಬೆಲೆಗೆ ಅನುಕೂಲಸ್ಥರಿಗೆ ಮಾರಾಟ ಮಾಡುವುದು, ಕಾರ್ಮಿಕ ಕಾಯಿದೆಯನ್ನು ಸಡಿಲಗೊಳಿಸುವುದು, ಉದ್ದಿಮೆಗಳಿಗೆ ಕಡಿಮೆ ಬಡ್ಡಿಗೆ ಸರಕಾರಿ ಬ್ಯಾಂಕ್‌ಗಳ ಸಾಲ ನೀಡುವುದು, ಅವರು ಸಾಲ ಕಟ್ಟದಿದ್ದರೆ ಸಾಲ ಮನ್ನಾ ಮಾಡುವುದು, ಶಿಕ್ಷಣ, ಆರೋಗ್ಯ ಇತ್ಯಾದಿ ಮೂಲ ಸೌಕರ್ಯಗಳ ಮೇಲೆ ಸರಕಾರ ವಿನಿಯೋಜನೆ ಕಡಿಮೆ ಮಾಡುವುದು, ಇವೇ ಮೂಲಕಸೌಕರ್ಯಗಳನ್ನು ನೀಡುವ ಜವಾಬ್ದಾರಿಯನ್ನು ಇದೇ ಅನುಕೂಲಸ್ಥರ ಸ್ವಾಧೀನ ನೀಡುವುದು, ಅವರು ಇವೇ ಮೂಲಸೌಕರ್ಯಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಸಂಪತ್ತು ಸಂಗ್ರಹಿಸುವುದು ಇತ್ಯಾದಿ ಆರ್ಥಿಕ ನೀತಿಗಳ ಮೂಲಕ ಸಂಪನ್ಮೂಲ ಒಂದು ಸಣ್ಣ ವರ್ಗದಲ್ಲಿ ಸಂಪತ್ತು ಕ್ರೋಢೀಕರಣಗಳ್ಳುವ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತಿವೆ. ಇಂತಹ ನೀತಿಗಳಿಂದ ಸಂಪನ್ಮೂಲ ಕೆಲವರಲ್ಲೇ ಕ್ರೋಢೀಕರಣಗೊಳ್ಳುತ್ತದೆ. ಬಹುತೇಕರ ಬದುಕು ದುಸ್ತರವಾಗುತ್ತದೆ. ಬಹುತೇಕರ ಆರ್ಥಿಕ ಸಂಕಷ್ಟಗಳಿಗೆ ಮತ್ತೊಂದು ಜಾತಿ, ಧರ್ಮವೇ ಕಾರಣವೆಂದು ಒಪ್ಪಿಸುವುದು ಜಾತಿ, ಧರ್ಮಗಳೇ ಕಾರುಬಾರು ಮಾಡುವ ರಾಜಕೀಯ ಪರಿಸರದಲ್ಲಿ ಸುಲಭವಾಗುತ್ತದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ ‘ಬಿ’ ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467


ಬಿಜೆಪಿ ಸೋಲಿನತ್ತ ಸಾಗುತ್ತಿದೆ, ವಿಧಾನಸಭೆಯಲ್ಲಿ ಮೊಳಗಲಿದೆ ಜನದನಿ

ಚುನಾವಣಾ ಕದನ ನಿರ್ಣಾಯಕ ಹಂತದಲ್ಲಿದ್ದು, ಪ್ರಚಾರಕ್ಕೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿವೆ. ಕಾಂಗ್ರೆಸ್, ಬಿಜೆಪಿ ಗಳ ಪ್ರಣಾಳಿಕೆಗಳ ಸಾರಾಂಶ ಹಾಗೂ ಪರಿಣಾಮ, ಈ ವಾರದ ಚುನಾವಣಾ ಪ್ರಚಾರದ ವೈಖರಿ ಮತ್ತು ರಾಜಕೀಯ ವಾಗ್ವಾದಗಳ ಚಿತ್ರಣ, ಚುನಾವಣಾ–ಪೂರ್ವ ಸಮೀಕ್ಷೆಗಳು ಮತ್ತಿತರ ಬೆಳವಣಿಗೆಗಳ ಸ್ಥೂಲ ನೋಟ ಇಲ್ಲಿದೆ. ಈ ಎಲ್ಲಾ ಅಂಶಗಳು ಎರಡು ಫಲಿತಾಂಶಗಳನ್ನು ಸೂಚಿಸುತ್ತಿವೆ. ಬಿಜೆಪಿಗೆ ಸ್ಪಷ್ಟ ಬಹುಮತ ಸಿಗದೇ ಸೋಲನ್ನು ಅನುಭವಿಸಲಿದೆ. ಪರ್ಯಾಯ ಪಕ್ಷಗಳ ಕನಿಷ್ಠ ಇಬ್ಬರು (ಸಿಪಿಐ–ಎಂ ನ ಡಾ. ಅನಿಲ್ ಕುಮಾರ್ ಮತ್ತು ಸರ್ವೋದಯದ ದರ್ಶನ್ ಪುಟ್ಟಣ್ಣಯ್ಯ) ಪ್ರತಿನಿಧಿಗಳ ಮೂಲಕ ಮುಂದಿನ ಕರ್ನಾಟಕ ವಿಧಾನಸಭೆಯಲ್ಲಿ ಜನದನಿ ಮತ್ತೆ ಮೊಳಗಲಿದೆ ಎಂಬ ಭರವಸೆ ಮೂಡುತ್ತಿದೆ.

ವಸಂತರಾಜ ಎನ್.ಕೆ.

ಚುನಾವಣಾ ಕದನ ನಿರ್ಣಾಯಕ ಹಂತದಲ್ಲಿದ್ದು, ಪ್ರಚಾರಕ್ಕೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿವೆ. ಕಳೆದ ವಾರ ಬಿಜೆಪಿಯ 98 ಕೇಂದ್ರೀಯ ಸ್ಟಾರ್ ಪ್ರಚಾರಕರು ರಾಜ್ಯಕ್ಕೆ ಬಂದಿಳಿದಿದ್ದಾರೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆಧಿತ್ಯನಾಥ್ ಅವರು ಹಲವಾರು ಸಾರ್ವಜನಿಕ ಸಭೆಗಳು ಮತ್ತು 'ರೋಡ್ಶೋ'ಗಳೊಂದಿಗೆ ರಾಜ್ಯದಾದ್ಯಂತ ಮಿಂಚಿನ ಪ್ರವಾಸ ನಡೆಸುತ್ತಿದ್ದಾರೆ.

'ರೋಡ್ಶೋ' ಎಂಬುದು ಬಿಜೆಪಿಯು ಆವಿಷ್ಕರಿಸಿ ಆಚರಣೆಗೆ ತಂದಿರುವ ಯಾವುದೇ ರಾಜಕೀಯ ಹೂರಣವಿಲ್ಲದ ಹಾನಿಕಾರಕ ಚುನಾವಣಾ ಪ್ರಚಾರದ ವಿಧಾನವಾಗಿದೆ. ಇದು ಕೇವಲ ಹಣ, ಬಲ ಮತ್ತು ರಾಜಕೀಯ ಶಕ್ತಿಯ ಪ್ರದರ್ಶನವಾಗಿದ್ದು, ಗಂಟೆಗಟ್ಟಲೆ ಸಂಚಾರ ಮತ್ತು ಸಾರ್ವಜನಿಕ ಜೀವನವನ್ನು ಸ್ಥಗಿತಗೊಳಿಸುತ್ತದೆ. ಬಿಜೆಪಿ ರೋಡ್ಶೋಗಳ ಒತ್ತಡದಿಂದಾಗಿ ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಇದನ್ನು ಅನುಸರಿಸಬೇಕಾಗಿ ಬಂದಿದೆ. ಭದ್ರತೆಯ ಹೆಸರಿನಲ್ಲಿ, ಬೀದಿ ಬದಿ ಸಭೆಗಳು, ದಿಡೀರ್ ಸಾರ್ವಜನಿಕ ಸಭೆಗಳು, ಮನೆ ಮನೆಗೆ ಪ್ರಚಾರಗಳು, ಇತರ ರಾಜಕೀಯ ಸಂದೇಶ ನೀಡುವ ವಿಧಾನಗಳ ಮೇಲೆ ಚುನಾವಣಾ ಆಯೋಗ ಸಲ್ಲದ ನಿರ್ಬಂಧಗಳನ್ನು ಹಾಕುತ್ತದೆ. ವೆಚ್ಚವನ್ನು ನಿಯಂತ್ರಿಸುವ ಹೆಸರಿನಲ್ಲಿ ಪೋಸ್ಟರ್ಗಳು, ಗೋಡೆ ಬರಹಗಳನ್ನು ನಿಷೇಧಿಸಿದೆ. ಆದರೆ, 'ರೋಡ್ಶೋ' ನಿಂದ ಸಾರ್ವಜನಿಕರಿಗೆ ಆಗುವ ಅನಾನುಕೂಲತೆಯನ್ನು ತಡೆಯಲು ಆಯೋಗ ಯಾವುದೇ ಕಿರಿಬೆರಳೂ ಎತ್ತಿಲ್ಲ, ಇದು ಪ್ರತಿಪಕ್ಷದ ಅಭ್ಯರ್ಥಿಗಳನ್ನು ಮತ್ತು ವಿಶೇಷವಾಗಿ ಕಡಿಮೆ ಸಂಪನ್ಮೂಲಗಳನ್ನು ಹೊಂದಿರುವ ಪಕ್ಷಗಳನ್ನು ಪ್ರತಿಕೂಲ ಪರಿಸ್ಥಿತಿಗೆ ತಳ್ಳುತ್ತದೆ.



ಕೃಪೆ: ಪಿ.ಮಹಮ್ಮದ, ವಾ.ಭಾ.

ಬಿಜೆಪಿ ನಾಯಕಿ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಬಿಜೆಪಿಯ ಎಲ್ಲ ಘಟಕಗಳಿಗೆ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಿ ಬೇಗ ಕಳಿಸಲು ಸುತ್ತೋಲೆ ಹೊರಡಿಸಿದ್ದು ವಿವಾದ ಸೃಷ್ಟಿಸಿದೆ. ಚುನಾವಣಾ ಆಯೋಗಕ್ಕೆ ಈ ಕುರಿತು ಸೂಚಿಸಬೇಕಾಗಿದೆ, ಹಾಗಾಗಿ ಕೂಡಲೇ ಇದನ್ನು ಕಳಿಸುವಂತೆ ಸುತ್ತೋಲೆ ಹೇಳಿದೆ. ಸಚಿವರು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುತ್ತಿದ್ದಾರೆಯೇ ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಕಲಬುರ್ಗಿಯ ಬಿಜೆಪಿ ಅಭ್ಯರ್ಥಿ ಮಣಿಕಂಠ ಅವರು ಪಿಸ್ತೂಲ್ ತೋರಿಸುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ. ಚುನಾವಣಾ ರ್ಯಾಲಿಯೊಂದರಲ್ಲಿ ಎಸೆಯಲಾದ ಕಲ್ಲೊಂದು ಕಾಂಗ್ರೆಸ್ ಮುಖಂಡ ಡಾ.ಜಿ. ಪರಮೇಶ್ವರ್ ತಲೆಗೆ ಬಿದ್ದು ಗಾಯಗೊಂಡಿದ್ದಾರೆ.

ಬೆಂಗಳೂರಿನ ಕ್ಷೇತ್ರವೊಂದರಲ್ಲಿ ಪ್ರಸ್ತುತ ಬಿಜೆಪಿ ಶಾಸಕರಿಂದ ಮತದಾರರ ಚೀಟಿಗಳು ವಾಟ್ಸಪ್ ನಲ್ಲಿ ಬಂದಿವೆ. ಅನೇಕ ವಿರೋಧ ಪಕ್ಷದ ಅಭ್ಯರ್ಥಿಗಳು ಮತ್ತು ನಾಗರಿಕ ಗುಂಪುಗಳು ಚುನಾವಣಾ ಆಯೋಗಕ್ಕೆ ದೂರು ನೀಡಿ, ಮತದಾರರ ಫೋನ್ ಸಂಖ್ಯೆಗಳು ಅವರಿಗೆ ಹೇಗೆ ಲಭ್ಯವಾಗಿವೆ ಎಂದು ಪ್ರಶ್ನಿಸಿದ್ದಾರೆ. ಚುನಾವಣೆಯಲ್ಲಿ ಮತದಾರರಿಗೆ ಹಂಚಲು ಸಂಗ್ರಹಿಸಲಾಗುತ್ತಿರುವ ನಗದು ಮತ್ತು ಸಾಮಗ್ರಿಗಳ ವಶಪಡಿಸಿಕೊಳ್ಳುವಿಕೆ ಈ ವಾರ 300 ಕೋಟಿ ರೂ.ಗಳನ್ನು ದಾಟಿದೆ. ಇದು ಕಳೆದ ನಾಲ್ಕು ಚುನಾವಣೆಗಳಲ್ಲಿ ಜಪ್ತಿಮಾಡಿದ ಮೊತ್ತಕ್ಕಿಂತ ಹೆಚ್ಚು ಮತ್ತು ಕಳೆದ ಚುನಾವಣೆಯ ಸಂದರ್ಭದಲ್ಲಿ ವಶಪಡಿಸಿಕೊಂಡ ಮೊತ್ತದ ಸರಿಸುಮಾರು 2.5 ಪಟ್ಟು ಇದೆ.

ಈ ವಾರ ಬಿಜೆಪಿ ಮತ್ತು ಕಾಂಗ್ರೆಸ್ನ ಪ್ರಣಾಳಿಕೆ ಬಿಡುಗಡೆಯಾಗಿದೆ. ಕಾಂಗ್ರೆಸ್ ಪ್ರಣಾಳಿಕೆಗೂ ಮುನ್ನವೇ ಐದನೇ ಖಾತರಿ ಘೋಷಿಸಿತ್ತು. ಕಾಂಗ್ರೆಸ್ 'ಐದು ಖಾತರಿಗಳು' ಮತ್ತು ನಿರ್ದಿಷ್ಟ ವಿಷಯಗಳ ಮೇಲೆ ಕೇಂದ್ರೀಕರಿಸಿತ್ತು. ಹಾಗಾಗಿ ಭಾವನಾತ್ಮಕ ವಿಷಯಗಳನ್ನು ಪ್ರಸ್ತಾಪಿಸಲು ಮತ್ತು ಗಮನವನ್ನು ಬೇರೆಡೆಗೆ ಸೆಳೆಯಲು ವಿಫಲವಾದ ಬಿಜೆಪಿ ಜನರನ್ನು ಬಾಧಿಸುವ ವಿಷಯಗಳ ಬಗ್ಗೆ ಮಾತಾಡಲೇಬೇಕಾಯಿತು. ಎರಡೂ ಪಕ್ಷಗಳ ಪ್ರಣಾಳಿಕೆಗಳ ಬಿಡುಗಡೆಯೊಂದಿಗೆ ಚುನಾವಣಾ ಭಾಷಣವು ನಿರ್ದಿಷ್ಟ ನೀತಿಗಳು, ಭರವಸೆಗಳು, ಖಾತರಿಗಳ ಮೇಲೆ ಕೇಂದ್ರೀಕರಿಸಿದೆ. ಚುನಾವಣಾ ಪ್ರಚಾರ ಜನರ ಸಮಸ್ಯೆಗಳ ಮೇಲೆ ಇದ್ದರೂ, ಎರಡೂ ಕಡೆಯಿಂದ ಬೈಗಳಗಳು ಈಗಾಗಲೇ ಮಾಮೂಲಿಗಿಂತ ಹೆಚ್ಚೇ ಇದ್ದವು, ಮಾಧ್ಯಮಗಳಿಂದ ಹಿಗ್ಗಿಸಲ್ಪಟ್ಟು ವೇಗವಾಗಿ ಬೈಗಳುಗಳ ಸುರಿಮಳೆಯಾಯಿತು. ಎರಡೂ ಪಕ್ಷಗಳು ಆಯೋಗಕ್ಕೆ ಈ ಬಗ್ಗೆ ದೂರುಗಳು ಮತ್ತು ಪ್ರತಿ–ದೂರುಗಳನ್ನು ಸಲ್ಲಿಸಿದವು. ಚುನಾವಣಾ ಆಯೋಗ ಎಲ್ಲಾ ಪ್ರಚಾರಕರಿಗೆ ಸಂಯಮ ತೋರುವಂತೆ ಮತ್ತು 'ಸಮಸ್ಯೆ ಆಧಾರಿತ ಚರ್ಚೆ' ನಡೆಸುವಂತೆ ನಿರ್ದೇಶನ ನೀಡಿತು. ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯ ದೂರುಗಳ ಮೇಲೆ ಚುನಾವಣಾ ಆಯೋಗವು ಬಿಜೆಪಿ ಅಭ್ಯರ್ಥಿ ಸೋಮಣ್ಣ ವಿರುದ್ಧ (ಸೋಮಣ್ಣ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದ್ದು ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸುತ್ತಿದ್ದಾರೆ) ಎಫ್ಐಆರ್ ದಾಖಲಿಸುವ ಕ್ರಮವನ್ನು ಮಾತ್ರ ತೆಗೆದುಕೊಂಡಿದೆ. ಜೆಡಿಎಸ್ ಅಭ್ಯರ್ಥಿಯನ್ನು ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಸೋಮಣ್ಣ ಆಮಿಷ ಒಡ್ಡಿರುವ ಧ್ವನಿಮುದ್ರಣದೊಂದಿಗೆ ದೂರು ನೀಡಲಾಗಿದೆ ಎಂದು ಹೇಳಲಾಗಿದೆ.



'ನಿಮ್ಮದು ಬಿಟ್ಟಿ, ನಮ್ಮದು ಸಬಲೀಕರಣ'

ಕಳೆದ ವಾರ ನಾವು ಜೆಡಿ(ಎಸ್) ಮತ್ತು ಸಿಪಿಐ(ಎಂ) ಪ್ರಣಾಳಿಕೆಗಳ ಪ್ರಮುಖ ಅಂಶಗಳನ್ನು ನೋಡಿದ್ದೇವೆ. ಸಾಮೂಹಿಕ ಸಂಘಟನೆಗಳು, ಜನಾಂದೋಲನಗಳು ಮತ್ತು ಕಾರ್ಯಕರ್ತರ ಗುಂಪುಗಳು ಹೊರಡಿಸಿದ 'ಜನರ ಪ್ರಣಾಳಿಕೆ ಗಳನ್ನೂ ನಾವು ನೋಡಿದ್ದೇವೆ.

ಮೇ ದಿನದಂದು ಬಿಡುಗಡೆ ಮಾಡಿದ ತನ್ನ ಪ್ರಣಾಳಿಕೆಯಲ್ಲಿ ಬಿಜೆಪಿ, ತನ್ನ ಹಿಂದುತ್ವದ ಅಜೆಂಡಾವನ್ನು ಪ್ರಮುಖವಾಗಿ ಎತ್ತಿ ತೋರಿಸಿದೆ. ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವುದಾಗಿ ಭರವಸೆ, ಎಲ್ಲಾ ಅಕ್ರಮ ವಲಸಿಗರನ್ನು ತ್ವರಿತವಾಗಿ ಗಡೀಪಾರು ಮಾಡುವುದನ್ನು ಖಾತ್ರಿಪಡಿಸಲು ಕರ್ನಾಟಕದಲ್ಲಿ ರಾಷ್ಟ್ರೀಯ ನಾಗರಿಕರ ನೋಂದಣಿ ಮತ್ತು, ರಾಜ್ಯ ಪೋಲೀಸ್ ನಲ್ಲಿ ಕೆ–ಸ್ವಿಫ್ಟ್, "ಕರ್ನಾಟಕ – ಧಾರ್ಮಿಕ ಮೂಲಭೂತವಾದ ಮತ್ತು ಭಯೋತ್ಪಾದನೆಯ ವಿರುದ್ಧದ ರಾಜ್ಯ ಘಟಕ" ವಿಶೇಷ ವಿಭಾಗವನ್ನು ರಚಿಸುವುದು – ಈ ಅಂಶಗಳು ಪ್ರಣಾಳಿಕೆಯಲ್ಲಿವೆ.

ಕಾಂಗ್ರೆಸ್ನ 'ಗ್ಯಾರಂಟಿ'ಗಳನ್ನು 'ಗ್ಯಾರಂಟಿ ಅವಧಿ ಮೀರಿದ ಪಕ್ಷದ ಗ್ಯಾರಂಟಿಗಳು' ಎಂದು ಅಪಹಾಸ್ಯ ಮಾಡಿದ ನಂತರ ಮತ್ತು ಸಾಮಾನ್ಯವಾಗಿ 'ಬಿಟ್ಟಿ'ಕೊಡುಗೆಗಳನ್ನು ಅಣಕಿಸಿದ ನಂತರ, ಬಿಜೆಪಿ ಗೆ ತನ್ನ ಪ್ರಣಾಳಿಕೆಯಲ್ಲಿ ಕೆಲವು 'ಬಿಟ್ಟಿ' ಗಳನ್ನು ಸೇರಿಸಲೇಬೇಕಾಗಿ ಬಂದಿದೆ. ತನ್ನದೇ ಶೈಲಿಯ ಅಸ್ಪಷ್ಟವಾದ 'ಬಜೆಟ್ ಘೋಷಣೆ'ಗಳಿಂದ ('ನಿರ್ದಿಷ್ಟ ಅಭಿವೃದ್ಧಿ/ಯೋಜನೆಗೆ ಇಷ್ಟು 100 ಅಥವಾ 1000 ಕೋಟಿಗಳನ್ನು ಮೀಸಲಿಟ್ಟಿದೆ') ಕಾಂಗ್ರೆಸ್ ಪ್ರಚಾರವನ್ನು ಎದುರಿಸಲು ಸಾಧ್ಯವಾಗುವುದಿಲ್ಲ ಎಂದು ಅದು ಅರಿತುಕೊಂಡಿದೆ.

ಬಿಜೆಪಿ ತನ್ನದೇ ಆದ 'ಬಿಟ್ಟಿ' ಕೊಡುಗೆಗಳನ್ನು ಘೋಷಿಸಿತು–BPL ಕುಟುಂಬಗಳಿಗೆ ವಾರ್ಷಿಕವಾಗಿ ಮೂರು ಉಚಿತ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಮೂರು ಹಬ್ಬಗಳ ಸಮಯದಲ್ಲಿ; ಕಾರ್ಪೊರೇಶನ್‌ಗಳ ಪ್ರತಿ ವಾರ್ಡ್‌ಗಳಲ್ಲಿ ಅಟಲ್ ಆಹಾರ ಕೇಂದ್ರವನ್ನು ಸ್ಥಾಪನೆ (ಕಾಂಗ್ರೆಸ್‌ನ ಇಂದಿರಾ ಕ್ಯಾಂಟೀನ್‌ನಂತೆ): ಬಿಪಿಎಲ್ ಕುಟುಂಬಗಳಿಗೆ ದಿನಕ್ಕೆ ಅರ್ಧ ಲೀಟರ್ ಉಚಿತ ನಂದಿನಿ ಹಾಲನ್ನು ನೀಡುವುದರ ಜೊತೆಗೆ ಸಾಮಾನ್ಯ ಪಡಿತರ ಕಿಟ್‌ಗಳೊಂದಿಗೆ ತಿಂಗಳಿಗೆ ಐದು ಕೆಜಿ ರಾಗಿ; ವಿಧವಾ ಪಿಂಚಣಿ 800 ರೂ.ನಿಂದ 2,000 ರೂ.ಗೆ ಹೆಚ್ಚಳ; ಕಾರ್ಪೊರೇಶನ್ ಗಳ ಪ್ರತಿ ವಾರ್ಡ್ನಲ್ಲಿ 'ನಮ್ಮ ಕ್ಲಿನಿಕ್'ಗಳು (ಕಳೆದ 2 ಬಜೆಟ್ಗಳಲ್ಲಿ ಘೋಷಿಸಲಾಗಿದೆ, ಇದುವರೆಗೆ ಯಾವುದೇ ಪ್ರಗತಿ ಸಾಧಿಸಿಲ್ಲ); ಎಲ್ಲಾ ಹಿರಿಯ ನಾಗರಿಕರಿಗೆ ಉಚಿತ ವಾರ್ಷಿಕ ಪ್ರಮುಖ ಆರೋಗ್ಯ ತಪಾಸಣೆ.

ಈ 'ಬಿಟ್ಟಿ'ಗಳ ಕುರಿತಾಗಿ ಪ್ರಶ್ನೆಗಳನ್ನು ಎದುರಿಸಿದ ಬಿಜೆಪಿ ಅಧ್ಯಕ್ಷರು, 'ಕಾಂಗ್ರೆಸ್ನ ಖಾತರಿಗಳು 'ಬಿಟ್ಟಿ', ಬಿಜೆಪಿಯವು ಅಂತರರಾಷ್ಟ್ರೀಯ ಪರಿಸ್ಥಿತಿಯಿಂದ ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳನ್ನು ಎದುರಿಸಲು, ಜನರನ್ನು ಸಬಲಗೊಳಿಸುವ ಕ್ರಮಗಳು' ಎಂದು ಸಮರ್ಥಿಸಿಕೊಳ್ಳುತ್ತಾರೆ!

ಬಿಜೆಪಿ ಪ್ರಣಾಳಿಕೆಯ ಇತರ ಪ್ರಮುಖ ಅಂಶಗಳು – 10 ಲಕ್ಷ ಉತ್ಪಾದನಾ ಉದ್ಯೋಗಗಳು ಮತ್ತು ರಾಜ್ಯವನ್ನು ವಿದ್ಯುತ್ ವಾಹನ ಕೇಂದ್ರವನ್ನಾಗಿ ಮಾಡುವ ಭರವಸೆಯನ್ನು ಒಳಗೊಂಡಿವೆ. ಕಳೆದ ಬಜೆಟ್ನ ಇತರ ಸಾಮಾನ್ಯ ಘೋಷಣೆಗಳನ್ನು ಸಹ ಸೇರಿಸಲಾಗಿದೆ.

'ಬಿಟ್ಟಿ'ಗಳ ಸ್ಪರ್ಧೆಯಲ್ಲಿ ಕಾಂಗ್ರೆಸ್ ಮುಂದೆ

ಮರುದಿನ ಕಾಂಗ್ರೆಸ್ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು, ಅದರ ನಾಲ್ಕು 'ಖಾತರಿ'ಗಳನ್ನು ಪುನರುಚ್ಚರಿಸಿತು – ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್; ಪ್ರತಿ ಮಹಿಳಾ ಕುಟುಂಬದ ಮುಖ್ಯಸ್ಥರಿಗೆ ರೂ 2,000; ಬಡತನ ರೇಖೆಗಿಂತ ಕೆಳಗಿರುವ (BPL) ಕುಟುಂಬಕ್ಕೆ 10 ಕೆಜಿ ಅಕ್ಕಿ ಅಥವಾ ಧಾನ್ಯಗಳ ಆಯ್ಕೆ; ಮತ್ತು ನಿರುದ್ಯೋಗಿ ಪದವೀಧರರಿಗೆ ಎರಡು ವರ್ಷಗಳವರೆಗೆ 3,000 ರೂ. ಮತ್ತು ನಿರುದ್ಯೋಗಿ ಡಿಪ್ಲೋಮಾದಾರರಿಗೆ ಎರಡು ವರ್ಷಗಳವರೆಗೆ 1,500 ರೂ. ಈ ವಾರ ಘೋಷಿಸಿದ ಐದನೇ 'ಗ್ಯಾರಂಟಿ' ಸಾಮಾನ್ಯ BMTC/KSRTC ಬಸ್‌ಗಳಲ್ಲಿ ಎಲ್ಲಾ ಮಹಿಳೆಯರಿಗೆ ಉಚಿತ ಪ್ರಯಾಣ.

ಇದರ ಜೊತೆಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಪ್ರಮುಖ ನೀತಿ ಘೋಷಣೆಗಳನ್ನು ಸೇರಿಸಿದೆ. ಒಂದು ವರ್ಷದೊಳಗೆ ಎಲ್ಲ 'ಜನವಿರೋಧಿ' ಕಾನೂನುಗಳನ್ನು ಹಿಂಪಡೆಯುವುದಾಗಿ ಭರವಸೆ ನೀಡಿದೆ. ಉದ್ಯೋಗಿಗಳ ಕೆಲಸದ ಸಮಯವನ್ನು 8 ರಿಂದ 12 ಗಂಟೆಗಳವರೆಗೆ ಹೆಚ್ಚಿಸುವ ಕಾರ್ಖಾನೆಗಳ ಕಾಯಿದೆಗೆ ಮಾಡಿದ ತಿದ್ದುಪಡಿಗಳನ್ನು ಹಿಂಪಡೆಯಲು ಪ್ರಣಾಳಿಕೆಯು ಬದ್ಧವಾಗಿದೆ. ಬಿಜೆಪಿ ಜಾರಿಗೆ ತಂದಿರುವ ರೈತ ವಿರೋಧಿ ಕಾನೂನುಗಳನ್ನು ರದ್ದುಪಡಿಸುವುದಾಗಿ ಮತ್ತು ರೈತರ ಮೇಲಿನ ಪ್ರಕರಣಗಳನ್ನು ಹಿಂಪಡೆಯುವುದಾಗಿ ಪ್ರಣಾಳಿಕೆಯಲ್ಲಿ

ಭರವಸೆ ನೀಡಲಾಗಿದೆ. ರಾಜ್ಯದಲ್ಲಿ ಶಾಲಾ ಪಠ್ಯಪುಸ್ತಕಗಳಿಗೆ ಬಿಜೆಪಿ ಮಾಡಿದ ಬದಲಾವಣೆಗಳನ್ನು ಹಿಂಪಡೆಯಲು, ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿ ಮಾಡದೆ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಪಣ ತೊಟ್ಟಿದೆ.

ಕಾಂಗ್ರೆಸ್ ಪ್ರಣಾಳಿಕೆ ಎಲ್ಲ ಜನವಿಭಾಗಗಳಿಗೆ ನ್ಯಾಯಯುತ ಮೀಸಲಾತಿ ಒದಗಿಸುವ ಸವಾಲನ್ನು ಒಟ್ಟು ಮೀಸಲಾತಿಯ ಮಿತಿಯನ್ನು 75% ಕ್ಕೆ ಏರಿಸಿ ಅದನ್ನು 9ನೇಯ ಶೆಡ್ಯೂಲಿಗೆ ಸೇರಿಸುವ ವಾಗ್ದಾನ ಮಾಡಿದೆ. ಮುಸ್ಲಿಂ ಮೀಸಲಾತಿ ರದ್ದತಿ ಸೇರಿದಂತೆ ಬಿಜೆಪಿ ತಂದ ಮೀಸಲಾತಿ ವ್ಯವಸ್ಥೆಯಲ್ಲಿನ ಬದಲಾವಣೆಗಳನ್ನು ವಾಪಸು ತೆಗೆದುಕೊಳ್ಳುವುದು ಇದರಲ್ಲಿ ಸೇರಿರುತ್ತದೆ.

ಕಾಂಗ್ರೆಸ್ ಪ್ರಣಾಳಿಕೆಯು ಬಜರಂಗದಳ, ಪಿಎಫ್ಐ ಅಥವಾ ಇತರರು ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಸಮುದಾಯಗಳ ನಡುವೆ ದ್ವೇಷ ಅಥವಾ ದ್ವೇಷವನ್ನು ಉತ್ತೇಜಿಸುವ, ಜಾತಿ ಅಥವಾ ಧರ್ಮದ ಆಧಾರದ ಮೇಲೆ ಸಮುದಾಯಗಳ ನಡುವೆ ದ್ವೇಷವನ್ನು ಹರಡುವ ವ್ಯಕ್ತಿಗಳು ಮತ್ತು ಸಂಘಟನೆಗಳ ವಿರುದ್ಧ ದೃಢವಾದ ಮತ್ತು ನಿರ್ಣಾಯಕ ಕ್ರಮವನ್ನು ತೆಗೆದುಕೊಳ್ಳುವ ಸಂಕಲ್ಪವನ್ನು ಒಳಗೊಂಡಿದೆ. ಅಂತಹ ಯಾವುದೇ ಸಂಸ್ಥೆಗಳ ಮೇಲೆ ನಿಷೇಧ ಹೇರುವುದು ಸೇರಿದಂತೆ ಕಾನೂನಿನ ಪ್ರಕಾರ ನಿರ್ಣಾಯಕ ಕ್ರಮ ಕೈಗೊಳ್ಳಲು ಪ್ರಣಾಳಿಕೆ ಬದ್ಧವಾಗಿದೆ. ಪ್ರಣಾಳಿಕೆಯ ಈ ಅಂಶವನ್ನು ಬಳಸಿಕೊಂಡು ಬಿಜೆಪಿ ರಾಜಕೀಯ ಚರ್ಚೆಯ ದಿಕ್ಕನ್ನು ಬದಲಾಯಿಸಲು ಪ್ರಯತ್ನ ನಡೆಸಿದೆ.

ಸ್ಕೀಂ ಕಾರ್ಮಿಕರು–ಅಂಗನವಾಡಿ ಕಾರ್ಯಕರ್ತೆಯರ ವೇತನವನ್ನು ತಿಂಗಳಿಗೆ 15,000 ರೂ.ಗೆ, ಆಶಾ ಕಾರ್ಯಕರ್ತೆಯರಿಗೆ 8,000 ರೂ. ಗೆ, ಬಿಸಿಯೂಟದ ಕೆಲಸಗಾರರಿಗೆ ರೂ. 5000. ಗಳಿಗೆ ಹೆಚ್ಚಿಸುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ಪ್ರಣಾಳಿಕೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ 3 ಲಕ್ಷ ರೂಪಾಯಿ ನಿವೃತ್ತಿ ಸೌಲಭ್ಯವನ್ನು ನೀಡುವುದಾಗಿ ಸಹ ಭರವಸೆ ನೀಡಲಾಗಿದೆ. 2006 ರ ನಂತರ ಸೇರ್ಪಡೆಗೊಂಡ ರಾಜ್ಯ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಮರುಸ್ಥಾಪಿಸಲು ಪ್ರಣಾಳಿಕೆ ಬದ್ಧವಾಗಿದೆ.

ಮನೆ ಮಾಲೀಕರ ಹಕ್ಕುಗಳನ್ನು ರಕ್ಷಿಸಲು ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆ, 1972 ಅನ್ನು ತಿದ್ದುಪಡಿ ಮಾಡಲು; ಹೈನುಗಾರಿಗೆ ಒಂದು ಲೀಟರ್ ಹಾಲಿಗೆ ನೀಡುತ್ತಿರುವ ಪ್ರೋತ್ಸಾಹ ಧನವನ್ನು 5 ರಿಂದ 7 ರೂ ಹೆಚ್ಚಿಸಲು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪ್ರಣಾಳಿಕೆಯಲ್ಲಿ ಬದ್ಧವಾಗಿವೆ.

ಎರಡೂ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ (ಮಟ್ಟದಲ್ಲಿ ವ್ಯತ್ಯಾಸವಿದ್ದರೂ) ಜನರಿಗೆ ಕೆಲವು ತಕ್ಷಣದ ಪರಿಹಾರವನ್ನು ನೀಡಲು ನಿರ್ದಿಷ್ಟ ಭರವಸೆಗಳನ್ನು ನೀಡುತ್ತವೆ. ಆದರೆ, ಜನರ ಸಂಕಷ್ಟಗಳಿಗೆ ಮೂಲ ಕಾರಣವಾದ ನವ–ಉದಾರವಾದಿ ಆರ್ಥಿಕ ಕಾರ್ಯಸೂಚಿಗಳು ರೂಪಿಸುವ ನೀತಿಗಳ ಬಗ್ಗೆ ತಿಳಿಸುವುದಿಲ್ಲ ಎಂದು ಗಮನಿಸಬೇಕು. ಅದನ್ನು ಈ ಪಕ್ಷಗಳಿಂದ ನಿರೀಕ್ಷಿಸಲೂ ಸಾಧ್ಯವಿಲ್ಲ. ಆದರೆ ಎಡ–ಪ್ರಜಾತಾಂತ್ರಿಕ ಶಕ್ತಿಗಳು ತಾವು ಸ್ಪರ್ಧಿಸಿರುವ ಕಡೆಗಳಲ್ಲಿ ರಾಜಕೀಯ ಚರ್ಚೆಯಲ್ಲಿ ಈ ಅಂಶವನ್ನು ತರಲು ಪ್ರಯತ್ನಿಸಿವೆ.

ರಾಜಕೀಯ ವಾಗ್ವಾದದ ದಿಕ್ಕು ಬದಲಾಯಿಸಲು ಬಿಜೆಪಿ ಪ್ರಯತ್ನ

ವಾರದ ಬಹುಪಾಲು, ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು 'ಖಾತರಿ'ಗಳಿಗೆ ಅಂಟಿಕೊಂಡರು ಮತ್ತು ಬಿಜೆಪಿಯ ಕಾರ್ಯವೈಖರಿ, ಆಡಳಿತ–ವಿರೋಧಿ ಅಲೆಗೆ ಕಾರಣವಾದ (ನಿರುದ್ಯೋಗ, ಬೆಲೆಏರಿಕೆ, ಭ್ರಷ್ಟಾಚಾರ, ಕೋಮು




ಹಿಂಸಾಚಾರ ಇತ್ಯಾದಿ) ವಿಷಯಗಳ ಮೇಲೆ ದಾಳಿ ನಡೆಸಿದರು. ಬಿಜೆಪಿ ನಾಯಕರು ಕಾಂಗ್ರೆಸ್ ನ 'ಪರಿವಾರವಾದ' ಮತ್ತು ಭ್ರಷ್ಟಾಚಾರದ ವಿರುದ್ಧ, ಮೋದಿ ಮತ್ತು ಡಬಲ್ ಇಂಜಿನ್ ಸರ್ಕಾರ ಎಂಬ ತಮ್ಮ ಮಂತ್ರಕ್ಕೆ ಅಂಟಿಕೊಂಡಿದ್ದರು.. ಕಾಂಗ್ರೆಸ್ ಲಿಂಗಾಯತ ವಿರೋಧಿ ಎಂದು ಬಿಜೆಪಿ ಆರೋಪಿಸಲು ಪ್ರಯತ್ನಿಸಿತು ಮತ್ತು ಆರ್‌ಎಸ್‌ಎಸ್ ಸಿದ್ಧಾಂತವು ಬಸವ ತತ್ವ ವಿರೋಧಿ ಎಂದು ಕಾಂಗ್ರೆಸ್ ತಿರುಗೇಟು ನೀಡಿದೆ. ಈ ದಿಕ್ಕಿನಲ್ಲಿ ರಾಜಕೀಯ ಸಂವಾದ ನಡೆಯುತ್ತಿರುವಾಗಲೇ ಎರಡೂ ಕಡೆಯಿಂದ 'ಬೈಗುಳಗಳ ಸುರಿಮಳೆ' ಆರಂಭವಾಯಿತು.. ಮಲ್ಲಿಕಾರ್ಜುನ ಖರ್ಗೆ ಬಿಜೆಪಿಯನ್ನು 'ವಿಷಪೂರಿತ ಹಾವು'ಎಂದು ಕರೆದಿದ್ದು, ಇದು ಪ್ರಧಾನಿ ಮೋದಿಯವರ ಮೇಲಿನ ವೈಯಕ್ತಿಕ ದಾಳಿ ಎಂದು ಸ್ವತಃ ಪ್ರಧಾನಿ ಮತ್ತು ಇತರ ಬಿಜೆಪಿ ನಾಯಕರು ಹೇಳಿದ್ದಾರೆ. ಬಿಜೆಪಿ ನಾಯಕರೊಬ್ಬರು ಪ್ರಿಯಾಂಕಾ ವಾದ್ರಾ ಅವರನ್ನು 'ವಿಷ ಕನ್ಯಾ' ಎಂದು ಕರೆದರು ಮತ್ತು 'ಯಾರಾದರೂ ಹಿಂದೂ ಧರ್ಮವನ್ನು ಟೀಕಿಸಿದರೆ ದಮ್..ಡಂ' ಎಂದು ಗುಡುಗಿದರು. 'ಕಾಂಗ್ರೆಸ್ ಗೆದ್ದರೆ ಕೋಮುಗಲಭೆಯಾಗುತ್ತದೆ' ಎಂದು ಕೇಂದ್ರದ ಗೃಹ ಸಚಿವ ಅಮಿತ್ ಶಾ ಹೇಳಿದರು. ಮಾಯಾಂಕ್ ಖರ್ಗೆ ಅವರು ಮೋದಿಯನ್ನು 'ನಾಲಾಯಕ್ ಬೇಟಾ' ಎಂದು ಕರೆದಿದ್ದಾರೆ. ಪ್ರಧಾನಿ ಮೋದಿ ತಾವು '91 ಬಾರಿ ಬೈಗುಳ ಸಿಕ್ಕಿದೆ' ಎಂದು ಭಾವನಾತ್ಮಕ 'ಬಲಿಪಶು'ಕಾರ್ಡ್ ಆಡಲು ಆರಂಭಿಸಿದರು. 'ಕಾಂಗ್ರೆಸ್ ಆಡಳಿತ ಭ್ರಷ್ಟಾಚಾರ ಕಾಲ ಮತ್ತು ಬಿಜೆಪಿ ಆಡಳಿತ ಅಮೃತ ಕಾಲ'ಎಂದು ಪ್ರಧಾನಿ ಮೋದಿ ಘೋಷಿಸಿದರು, ಬಿಜೆಪಿ ಆಡಳಿತ 'ಬಿಜೆಪಿ ಶಾಸಕರಿಗೆ ಅಮೃತ ಕಾಲ ಮತ್ತು ಜನರಿಗೆ ವಿಷಕಾಲ' ಎಂದು ಕಾಂಗ್ರೆಸ್ ನಾಯಕರೊಬ್ಬರು ಪ್ರತಿದಾಳಿ ಮಾಡಿದರು. ಮೋದಿ ಮತ್ತು ಶಾ ಇಬ್ಬರೂ ಈ ವಾರ ಜೆಡಿ(ಎಸ್) ವಿರುದ್ಧ ವಾಗ್ದಾಳಿ ಆರಂಭಿಸಿದರು, 'ಜೆಡಿ(ಎಸ್) ಗೆ ಮತ ನೀಡಿದರೆ ಕಾಂಗ್ರೆಸ್ಗೆ ಮತ' ನೀಡಿದಂತೆ, ಜೆಡಿ(ಎಸ್) ಕಾಂಗ್ರೆಸ್ ನ ಬಿ ಟೀಂ ಎಂದು ಹೇಳಿದರು. ಕಾಂಗ್ರೆಸ್ ನಾಯಕರು ಜೆಡಿ(ಎಸ್) ಬಿಜೆಪಿಯ ಬಿ ಟೀಂ ಎಂದು ಹೇಳಿದರು. ಜೆಡಿಎಸ್ನ ಎಚ್ಡಿ ಕುಮಾರಸ್ವಾಮಿ 'ನಾವು ಕನ್ನಡಿಗರ ಬಿ ಟೀಂ'ಎಂದು ಕಾಂಗ್ರೆಸ್ ಮತ್ತು ಬಿಜೆಪಿಯ ಆರೋಪಗಳಿಗೆ ಉತ್ತರಿಸಿದರು. ಸರ್ಕಾರದ ಕ್ರಮಗಳನ್ನು ವಿರೋಧಿಸುವ ಮತ್ತು ಅಡ್ಡಿಪಡಿಸುವ ಎಲ್ಲರಿಗೂ ಬುಲ್ ಡೋಜರ್ಗಳ 'ಯುಪಿ ಮಾದರಿ'ಯ 'ಯೋಗಿ ರಾಜ್' ತರುವುದಾಗಿ ಅನೇಕ ಬಿಜೆಪಿ ನಾಯಕರು ಬೆದರಿಸಿದರು. ಕುತೂಹಲಕಾರಿ ವಿಷಯವೆಂದರೆ, 'ಗುಜರಾತ್ ಮಾದರಿ' ಇದುವರೆಗಿನ ಬಿಜೆಪಿ ಪ್ರಚಾರದಲ್ಲಿ ಮಾಯವಾಗಿರುವುದು ಎದ್ದು ಕಾಣುತ್ತಿದೆ.

'ಬೈಗುಳಗಳ ಸುರಿಮಳೆ'ಗೆ ಮುಖ್ಯ ಕಾರಣ, ಎರಡೂ ಪಕ್ಷಗಳ ನಾಯಕರು ಸಂಪೂರ್ಣ ಬಹುಮತವನ್ನು ತಲುಪಲು 'ಅಲೆ' ಸೃಷ್ಟಿಸಲು ಪ್ರಯತ್ನಿಸುತ್ತಿರುವುದು. ಇಬ್ಬರೂ ದಕ್ಷಿಣ ಕರ್ನಾಟಕದ ಮೇಲೆ ಕಣ್ಣಿಟ್ಟಿದ್ದಾರೆ ಮತ್ತು ಆ ಪ್ರದೇಶದಲ್ಲಿ ವಿಸ್ತರಿಸಲು ಜೆಡಿ (ಎಸ್) ಮೇಲೆ ದಾಳಿ ನಡೆಸುತ್ತಿದ್ದಾರೆ. ಆದಿಚುಂಚನಗಿರಿಯ ಒಕ್ಕಲಿಗ ಮಠದ ಶ್ರೀಗಳನ್ನು ಭೇಟಿ ಮಾಡಲು ಬಿಜೆಪಿ ವಿಶೇಷವಾಗಿ ಯೋಗಿಯನ್ನು ಕರೆತಂದಿದೆ, ಏಕೆಂದರೆ ಇಬ್ಬರೂ ನಾಥಪಂಥಕ್ಕೆ ಸೇರಿದವರು.

ಪ್ರಣಾಳಿಕೆಗಳ ಬಿಡುಗಡೆಯೊಂದಿಗೆ ರಾಜಕೀಯ=ಆರ್ಥಿಕ ವಿಷಯಗಳ ಮೇಲೆ ವಾಗ್ವಾದವನ್ನು ನಿರೀಕ್ಷಿಸಲಾಗಿತ್ತು. ಅದು 'ಬಿಟ್ಟಿ'ಗಳ ಓಟಕ್ಕೆ ಬದಲಾಗಿದೆ. 'ಕಾಂಗ್ರೆಸ್ ಯಾವತ್ತೂ ತನ್ನ ಭರವಸೆಗಳನ್ನು ಈಡೇರಿಸುವುದಿಲ್ಲ' ಮತ್ತು 'ನಮ್ಮದು ಸಬಲೀಕರಣ, ಅವರದು ಬಿಟ್ಟಿ' ಎಂಬ ನಿಲುವನ್ನು ಬಿಜೆಪಿ ಪ್ರತಿಪಾದಿಸುತ್ತಿದೆ. ಕಾಂಗ್ರೆಸ್ 'ಗ್ಯಾರಂಟಿ'ಗಳ ಪರಿಣಾಮವನ್ನು ಎದುರಿಸಲು ಬಿಜೆಪಿಗೆ ಸಹ 'ಗ್ಯಾರಂಟಿ' ನೀಡುವ ಒತ್ತಡಕ್ಕೆ ಸಿಲುಕಿದೆ ಎಂದು ಕಾಂಗ್ರೆಸ್ ತಿರುಗೇಟು ನೀಡಿದೆ.

ತೀವ್ರ ಸಂಕಟದಲ್ಲಿರುವ ಜನರಿಗೆ ಪರಿಹಾರ ಒದಗಿಸುವ ಕ್ರಮಗಳನ್ನು 'ಬಿಟ್ಟಿ ಎಂದು ಜರೆಯುವ ಬಿಜೆಪಿಯ ಪ್ರಚಾರಕ್ಕೆ ಕಾಂಗ್ರೆಸ್ ನಿಂದ ಮಾತ್ರವಲ್ಲ, ಇತರ ವಿರೋಧ ಪಕ್ಷಗಳು, ಜನಪರ ಸಂಘಟನೆಗಳು ಚಳುವಳಿಗಳು, ಜನಪರ ಪರಿಣತರಿಂದಲೂ ತೀವ್ರ ಆಕ್ರೋಶ, ವಿರೋಧ ವ್ಯಕ್ತವಾಗಿದೆ. 'ನಿಮ್ಮದು ಬಿಟ್ಟಿ, ನಮ್ಮದು ಸಬಲೀಕರಣ'ಎಂಬ ಬಿಜೆಪಿಯ ವಿರೋಧಾಭಾಸದ ನಿಲುವು ಸಹ ತೀವ್ರ ಟೀಕೆಗೆ ಒಳಗಾಗಿದೆ.



ಕೃಪೆ: ಸತೀಶ್ ಆಚಾರ್ಯ

ಈ ಸಾಮಾನ್ಯ ಆಕ್ರೋಶ, ಟೀಕೆ ಹಾಗೂ 'ಬಿಟ್ಟಿ'ಗಳ ಸ್ಪರ್ಧೆಯಲ್ಲಿ ಕಾಂಗ್ರೆಸ್ ಕೈಮೇಲಾಗುತ್ತಿದೆ ಎಂದು ಅರಿತ ಬಿಜೆಪಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ಭಜರಂಗದಳದ ನಿಷೇಧದ ವಿಷಯವನ್ನು ಕೈಗೆತ್ತಿಕೊಂಡು, 'ಹಿಂದೂ ವಿರೋಧಿ ಕಾಂಗ್ರೆಸ್' ಎಂಬ ಭಾವನಾತ್ಮಕ ಪ್ರಚಾರಕ್ಕೆ ಇಳಿದಿದೆ. 'ಮೊದಲು ರಾಮನನ್ನು ಬೀಗ ಹಾಕಿದ್ದೀರಿ, ಈಗ ಬಜರಂಗ ಬಲಿಗೆ ಬೀಗ ಹಾಕುತ್ತೀರಾ?' ಎಂಬ ಆರೋಪದ ಮೂಲಕ ಸ್ವತಃ ಪ್ರಧಾನಿ ಮೋದಿಯೇ ಈ ಅಭಿಯಾನದ ನೇತೃತ್ವ ವಹಿಸಿದ್ದಾರೆ. 'ಜೈ ಭಜರಂಗಬಲಿ' ಎಂದು ಬಿಜೆಪಿ ಬಟನ್ ಒತ್ತಿ ಎಂದು ಸಾರ್ವಜನಿಕ ಸಭೆಯಲ್ಲೇ ಹೇಳಿದರು. ಸಹಜವಾಗಿಯೇ ಉಳಿದವರು ಉತ್ಸಾಹದಿಂದ ಇದನ್ನೇ ಅನುಸರಿಸಿದ್ದಾರೆ. ಭಜರಂಗದಳ ರಾಜ್ಯದ ಎಲ್ಲ ಕಡೆ ಪ್ರತಿಭಟನೆ, 'ಹನುಮಾನ್ ಚಾಲೀಸ' ಪಠಣ ಗಳನ್ನು ಸಂಘಟಿಸಿ 'ಬಿಜೆಪಿ–ಪರ ಹವಾ' ಎಬ್ಬಿಸಲು ಪ್ರಯತ್ನಿಸುತ್ತಿದೆ.

ಬಿಜೆಪಿ ಚುನಾವಣಾ ಪ್ರಚಾರವನ್ನು ಮತ್ತೆ ಭಾವನಾತ್ಮಕಗೊಳಿಸಲು, 'ಭಜರಂಗ ಬಲಿಗೆ ಬೀಗ ಹಾಕುತ್ತಿದ್ದಾರೆ' ಎಂಬ ಏಕಮಾತ್ರ ಘೋಷಣೆಗೆ ಇಳಿಸಲು ಮತ್ತು ನೈಜ ಸಮಸ್ಯೆಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಪ್ರಯತ್ನಿಸುತ್ತಿದೆ. ಕಾಂಗ್ರೆಸ್ ಹನುಮ ಬೇರೆ, ಭಜರಂಗ ದಳ ಬೇರೆ, ದ್ವೇಷ ಹಬ್ಬಿಸುವ ಸಂವಿಧಾನ ಕಾನೂನು ಉಲ್ಲಂಘಿಸಿದ ಯಾರ ಮೇಲಾದರೂ ಕ್ರಮ ಕೈಗೊಳ್ಳುವುದು ಸುಪ್ರೀಂ ಕೋರ್ಟಿನ ನಿರ್ದೇಶನ ಎಂದು ಈ ಅಪಪ್ರಚಾರಕ್ಕೆ ಉತ್ತರಿಸಲು ಪ್ರಯತ್ನಿಸುತ್ತಿದೆ. ಜನರು ಯಾವ ಪ್ರಚಾರಕ್ಕೆ ಎಷ್ಟು ಸ್ಪಂದಿಸುತ್ತಾರೆ ಎಂಬುದರ ಮೇಲೆ ಅಂತಿಮ ಫಲಿತಾಂಶ ಅವಲಂಬಿತವಾಗಿರುತ್ತದೆ. ಆದಾಗ್ಯೂ 'ಭಜರಂಗದಳ ನಿಷೇಧ' ವಿವಾದಕ್ಕೆ ಇದುವರೆಗಿನ ಬಿಜೆಪಿ–ವಿರೋಧೀ ಟ್ರೆಂಡ್ ಅನ್ನು ರಿವರ್ಸ್ ಮಾಡುವ ಸಾಧ್ಯತೆಯಿದ್ದಂತೆ ಕಾಣುತ್ತಿಲ್ಲ.

ಚುನಾವಣಾ–ಪೂರ್ವ ಸಮೀಕ್ಷೆಗಳು

ಕಳೆದ ಕೆಲವು ದಿನಗಳಿಂದ ಅನೇಕ ಮಾಧ್ಯಮಗಳು ಮತ್ತು ಸಮೀಕ್ಷಾ ಏಜೆನ್ಸಿಗಳು ಮತದಾನದ ಪ್ರವೃತ್ತಿಗಳು ಮತ್ತು ಚುನಾವಣಾ ವಿಷಯಗಳ ಕುರಿತು ಅಭಿಪ್ರಾಯ ಸಂಗ್ರಹಗಳನ್ನು ಬಿಡುಗಡೆ ಮಾಡಿವೆ. 8 ಏಜೆನ್ಸಿಗಳು ಮಾಡಿದ ಮತದಾನದ ಪ್ರವೃತ್ತಿಗಳ ಮೇಲಿನ ಅಭಿಪ್ರಾಯ ಸಂಗ್ರಹಗಳಲ್ಲಿ 3 (ಸ್ಮಾಲ್ ಬಾಕ್ಸ್ ಇಂಡಿಯಾ, ಈ–ದಿನ, ಟಿವಿ9–ಸಿ–ವೋಟರ್) ಕಾಂಗ್ರೆಸ್ ಸ್ಪಷ್ಟ/ಸಮೀಪ ಬಹುಮತ ಗಳಿಸುವ ಮುನ್ಸೂಚನೆ ನೀಡಿವೆ. ಒಂದು ಸಮೀಕ್ಷೆ (ಪಬ್ಲಿಕ್ ಟಿವಿ) ಬಿಜೆಪಿ ಕಾಂಗ್ರೆಸ್ ಗಿಂತ ಮುನ್ನಡೆ ಸಾಧಿಸುತ್ತದೆ, ಆದರೆ ಬಹುಮತವಲ್ಲ ಎಂದು ಹೇಳಿದೆ. ಎರಡನೇ ಸಮೀಕ್ಷೆ, (ಜೀ ನ್ಯೂಸ್–ಮ್ಯಾಟ್ರಿಜ್, ಏಷ್ಯಾನೆಟ್ ಸುವರ್ಣ ನ್ಯೂಸ್ ಜನ್ ಕಿ ಬಾತ್) ಕಾಂಗ್ರೆಸ್ ಬಿಜೆಪಿ ಗಿಂತ ಮುನ್ನಡೆ ಸಾಧಿಸಲಿದೆ ಎಂದು ಭವಿಷ್ಯ ನುಡಿದಿವೆ. ಮತ್ತು ಎರಡು ಸಮೀಕ್ಷೆಗಳು (ಸೌತ್ ಫಸ್ಟ್–ಪೀಪಲ್ಸ್ ಪಲ್ಸ್, ವಿಸ್ತಾರ ನ್ಯೂಸ್) ಯಾವುದಕ್ಕೂ ಬಹುಮತವಿಲ್ಲದ ಸಮಬಲದ ಬಗ್ಗೆ ಭವಿಷ್ಯ ನುಡಿದಿವೆ. ಚುನಾವಣಾ ವಿಷಯಗಳ ಕುರಿತು ಸಿಎಸ್ಡಿಎಸ್–ಲೋಕನೀತಿ ನಡೆಸಿದ ಸಮೀಕ್ಷೆಯಲ್ಲಿ ಪ್ರಬಲವಾದ ಆಡಳಿತ ವಿರೋಧಿ ಅಲೆಯಿಂದಾಗಿ ಬಿಜೆಪಿಗೆ ಗಮನಾರ್ಹವಾದ ಬೆಂಬಲ ನಷ್ಟವಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಹೇಳಿದೆ.

ಮೇಲಿನ ಎಲ್ಲಾ ಅಂಶಗಳು ಎರಡು ಫಲಿತಾಂಶಗಳನ್ನು ಸೂಚಿಸುತ್ತಿವೆ. ಬಿಜೆಪಿಗೆ ಸ್ಪಷ್ಟ ಬಹುಮತ ಸಿಗದೇ ಸೋಲನ್ನು ಅನುಭವಿಸಲಿದೆ. ಪರ್ಯಾಯ ಪಕ್ಷಗಳು ಸ್ಪರ್ಧೆ ಮಾಡಿರುವ ಕ್ಷೇತ್ರದ ಸಮೀಕ್ಷೆ ನಡೆಸಿದಾಗ, ಬಾಗೇಪಲ್ಲಿಯಿಂದ ಸಿಪಿಐ(ಎಂ)ನ ಡಾ.ಅನಿಲ್‌ಕುಮಾರ್ ಮತ್ತು ಮೇಲುಕೋಟೆಯಿಂದ ಸರ್ವೋದಯದ ದರ್ಶನ್ ಪುಟ್ಟಣ್ಣಯ್ಯ ಎಂಬ ಕನಿಷ್ಠ ಇಬ್ಬರು ಪ್ರತಿನಿಧಿಗಳ ಮೂಲಕ ಮುಂದಿನ ಕರ್ನಾಟಕ ವಿಧಾನಸಭೆಯಲ್ಲಿ ಜನದನಿ ಮತ್ತೆ ಮೊಳಗಲಿದೆ ಎಂಬ ಭರವಸೆ ಮೂಡುತ್ತಿದೆ.

ರೈತರು ಮತ್ತು ಕೃಷಿ ಕಾರ್ಮಿಕರ ಅಖಿಲ ಭಾರತ ಆಂದೋಲನ ಆರಂಭ: ಅಕ್ಟೋಬರ್ 3-ಹುತಾತ್ಮ ದಿನಾಚರಣೆ; ನವೆಂಬರ್ 26-ವಿಜಯ ದಿನಾಚರಣೆ: ಎಸ್.ಕೆ.ಎಂ.

ಏಪ್ರಿಲ್ 30 ರಂದು ದೆಹಲಿಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ರಾಷ್ಟ್ರೀಯ ಸಭೆ ನಡೆಯಿತು, ಇದರಲ್ಲಿ 200 ಕ್ಕೂ ಹೆಚ್ಚು ಘಟಕ ಸಂಘಟನೆಗಳ ರೈತ ಮುಖಂಡರು ಭಾಗವಹಿಸಿದ್ದರು. ವಿವರವಾದ ಚರ್ಚೆ ಮತ್ತು ಸಮಾಲೋಚನೆಯ ನಂತರ ಈ ತಿಂಗಳಿಂದ ರೈತರು ಮತ್ತು ಕೃಷಿ ಕಾರ್ಮಿಕರ ವಿವಿಧ ಹಕ್ಕೊತ್ತಾಯಗಳ ಮೇಲೆ ಅಖಿಲ ಭಾರತ ಆಂದೋಲನವನ್ನು ನಿರ್ಧರಿಸಲಾಯಿತು, ಮತ್ತು 3 ನಿರ್ಣಯಗಳನ್ನು ಕೈಗೊಳ್ಳಲಾಯಿತು. ಇದನ್ನು ದಿಲ್ಲಿಯ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಯಿತು. ಎಸ್‌ಕೆಎಂ ನ ಅಖಿಲ ಭಾರತ ಮುಖಂಡರಾದ ಅಶೋಕ ಧವಳೆ, ಜೊಗಿಂದರ್ ಸಿಂಗ್ ಉಗ್ರಹಾನ್, ತಜಿಂದರ್ ಸಿಂಗ್ ವಿರ್ಕ್, ದರ್ಶನ್ ಪಾಲ್, ಹನ್ನನ್ ಮೊಲ್ಲ ಮತ್ತು ಅವಿಕ್ ಸಾಹ ಇದರಲ್ಲಿ ಭಾಗವಹಿಸಿದ್ದರು.

ರಾಷ್ಟ್ರೀಯ ಸಭೆಯು ಈ ಕೆಳಗಿನ ನಿರ್ಧಾರಗಳನ್ನು ತೆಗೆದುಕೊಂಡಿತು:

1) ಮೇ 26 ರಿಂದ 31ರ ವರೆಗೆ ಕನಿಷ್ಠ ಬೆಂಬಲ ಬೆಲೆ ಕಾಯ್ದೆ, ಸಾಲದಿಂದ ವಿಮೋಚನೆ, ರೈತ ಮತ್ತು ರೈತ ಕಾರ್ಮಿಕರ ಪಿಂಚಣಿ, ಸಮಗ್ರ ಬೆಳೆ ವಿಮಾ ಯೋಜನೆ, ರೈತರ ಕೊಲೆಗಾರ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಬಂಧನ, ರೈತರ ಮೇಲಿನ ಸುಳ್ಳು ಪ್ರಕರಣಗಳನ್ನು ಹಿಂಪಡೆಯುವುದು, ಹುತಾತ್ಮ ರೈತರ ಕುಟುಂಬಗಳಿಗೆ ಪರಿಹಾರ ಈ ಎಲ್ಲ ಮೂಲ ಪ್ರಶ್ನೆಗಳ ಮೇಲೆ ಭಾರತದ ಎಲ್ಲಾ ರಾಜ್ಯಗಳಲ್ಲಿ ಪ್ರತಿಭಟನೆಗಳು ಮತ್ತು ಆಂದೋಲನಗಳನ್ನು ನಡೆಸಲಾಗುವುದು. ಸ್ಥಳೀಯ ಜ್ವಲಂತ ಪ್ರಶ್ನೆಗಳನ್ನು ಕೂಡ ಇದರಲ್ಲಿ ಸೇರಿಸಲಾಗುವುದು. ಬೃಹತ್ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿ, ಎಲ್ಲಾ ಸಂಸತ್ ಸದಸ್ಯರು ಮತ್ತು ಪ್ರಮುಖ ರಾಜಕೀಯ ನಾಯಕರಿಗೆ ಅವರ ಕ್ಷೇತ್ರಗಳಲ್ಲಿ ಜ್ಞಾಪಕ ಪತ್ರವನ್ನು ಸಲ್ಲಿಸಲಾಗುವುದು, ರೈತರ ಎಲ್ಲ ಪ್ರಶ್ನೆಗಳನ್ನು ಪರಿಹರಿಸಲು ವಿಫಲವಾದರೆ ಮುಂದೆ ಇನ್ನಷ್ಟು ಪ್ರತಿಭಟನೆಗಳನ್ನು ಎದುರಿಸಬೇಕಾಗುತ್ತದೆ ಎಂದು ಅವರಿಗೆ ಎಚ್ಚರಿಕೆ ನೀಡಲಾಗುವುದು.

2) ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ, ಎಸ್‌ಕೆಎಂ ನ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಾವೇಶಗಳನ್ನು ಭಾರತದ ಪ್ರತಿಯೊಂದು ರಾಜ್ಯದಲ್ಲಿಯೂ ರೈತರು ಮತ್ತು ರೈತ ಕಾರ್ಮಿಕರನ್ನು ಹುರಿದುಂಬಿಸಲು ಮತ್ತು ಸಂಘಟಿಸಲು ನಡೆಸಲಾಗುವುದು. ಈಗಾಗಲೇ ಎಸ್‌ಕೆಎಂ ನಲ್ಲಿ ಇರುವ ಸಂಘಟನೆಗಳಲ್ಲದೆ, ಹೊರಗಿರುವ ರೈತ ಸಂಘಟನೆಗಳ ಬೆಂಬಲವನ್ನು ಕೂಡ ಪಡೆಯಲು ಪ್ರಯತ್ನಿಸಲಾಗುವುದು.

3) ಆಗಸ್ಟ್ 1ರಿಂದ15 ರ ನಡುವೆ, ಕೇಂದ್ರ ಸರ್ಕಾರವು ಕಾರ್ಪೊರೇಟ್‌ಗಳಿಗೆ ರೈತರು ಮತ್ತು ಕಾರ್ಮಿಕರ ಹಿತಾಸಕ್ತಿಗಳನ್ನು ಮಾರಾಟ ಮಾಡುವುದನ್ನು ಕೊನೆಗೊಳಿಸಬೇಕು ಎಂದು ಆಗ್ರಹಿಸಿ ಕಾರ್ಮಿಕ ಸಂಘಗಳು ಮತ್ತು ಸಂಘಟನೆಗಳೊಂದಿಗೆ ಸಮನ್ವಯದಲ್ಲಿ ಸಾಮೂಹಿಕ ಪ್ರತಿಭಟನೆಗಳನ್ನು ನಡೆಸಲಾಗುವುದು. ಆಗಸ್ಟ್ 9ರ ಕ್ವಿಟ್ ಇಂಡಿಯಾ ದಿನಾಚರಣೆ ಇದೇ ಅವಧಿಯಲ್ಲಿ ನಡೆಯುತ್ತದೆ.

4) ಸೆಪ್ಟೆಂಬರ್‌ನಿಂದ ನವೆಂಬರ್ ಮಧ್ಯದ ಅವಧಿಯಲ್ಲಿ, ದೇಶದಾದ್ಯಂತ ಬೃಹತ್ ಅಖಿಲ ಭಾರತ ಯಾತ್ರೆಗಳನ್ನು ನಡೆಸಲಾಗುವುದು, ಇವುಗಳಿಗೆ ಎಸ್‌ಕೆಎಂನ ರಾಷ್ಟ್ರೀಯ ನಾಯಕರು ನೇತೃತ್ವ ನೀಡುತ್ತಾರೆ. ಯಾತ್ರೆಗಳು ವಿಶೇಷವಾಗಿ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ, ತೆಲಂಗಾಣ ಮುಂತಾದ ವಿಧಾನಸಭಾ ಚುನಾವಣೆಗಳನ್ನು ಕಾಣಲಿರುವ ರಾಜ್ಯಗಳ ಮೇಲೆ ಗಮನ ಕೇಂದ್ರೀಕರಿಸಿ ನಡೆಯುತ್ತವೆ. ನೂರಾರು ಸ್ಥಳೀಯ ಉಪಯಾತ್ರೆಗಳನ್ನು ಕೂಡ ದೇಶಾದ್ಯಂತ ನಡೆಸಲಾಗುವುದು.

5) ಅಕ್ಟೋಬರ್ 3 ರಂದು ಲಖಿಂಪುರ ಖೇರಿಯಲ್ಲಿ ಬಿಜೆಪಿ ನಾಯಕರು ರೈತರನ್ನು ಹತ್ಯೆ ಮಾಡಿದ ದಿನದಂದು ಅಖಿಲ ಭಾರತ ಹುತಾತ್ಮ ದಿನಾಚರಣೆ ನಡೆಯಲಿದೆ.

6) ನವೆಂಬರ್ 26-28: ನವೆಂಬರ್ 26 ರೈತರ ಐತಿಹಾಸಿಕ ದಿಲ್ಲಿ ಚಲೋ ಮೆರವಣಿಗೆ ದೆಹಲಿಯ ಗಡಿಯನ್ನು ತಲುಪಿದ ದಿನ, ಅಖಿಲ ಭಾರತ ವಿಜಯ ದಿನಾಚರಣೆಯನ್ನು ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಕನಿಷ್ಠ 3 ದಿನಗಳ ಕಾಲ ಹಗಲು-ರಾತ್ರಿ ಧರಣಿ ನಡೆಸುವ ಮೂಲಕ ಆಚರಿಸಲಾಗುತ್ತದೆ. ಹಲವು ಸ್ಥಳಗಳಲ್ಲಿ ಈ ಕಾರ್ಯಾಚರಣೆ ನವಂಬರ್ 19ರಂದು ವಿವಿಧ ಸ್ಥಳಗಳಿಂದ ರೈತರ ಮೆರವಣಿಗೆಗಳ ಮೂಲಕ ಆರಂಭವಾಗುತ್ತದೆ. ನವಂಬರ್ 19, ಎರಡು ವರ್ಷಗಳ ಹಿಂದೆ ಪ್ರಧಾನ ಮಂತ್ರಿಗಳು ಎಲ್ಲ ಮೂರು ಕಾರ್ಪೊರೇಟ್-ಪರ, ರೈತ-ವಿರೋಧಿ ಕಾಯ್ದೆಗಳನ್ನು ರದ್ದು ಮಾಡುವುದಾಗಿ ಪ್ರಕಟಿಸಲೇಬೇಕಾಗಿ ಬಂದ ದಿನ.

ಈ ಕಾರ್ಯಾಚರಣೆಯ ಕಾರ್ಯಕ್ರಮವಲ್ಲದೆ, ಎಪ್ರಿಲ್ 30 ರ ಎಸ್‌ಕೆಎಂ ರಾಷ್ಟ್ರೀಯ ಸಭೆಯು ಈ ಕೆಳಗಿನ ಮೂರು ನಿರ್ಣಯಗಳನ್ನು ಅಂಗೀಕರಿಸಿತು:

1) ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ಕುಳಿತಿರುವ ಭಾರತದ ಮಹಿಳಾ ಕುಸ್ತಿಪಟುಗಳ ಪ್ರತಿಭಟನೆಯನ್ನು ಎಸ್‌ಕೆಎಂ ದೃಢವಾಗಿ ಮತ್ತು ನಿಸ್ಸಂದಿಗ್ಧವಾಗಿ ಬೆಂಬಲಿಸಿದೆ ಮತ್ತು ಕ್ರೀಡಾ ಪಟುಗಳಿಗೆ ಸೌಹಾರ್ದ ವ್ಯಕ್ತಪಡಿಸಿದೆ, ಬಿಜೆಪಿ ಸಂಸದನನ್ನು ತಕ್ಷಣವೇ ಬಂಧಿಸುವಂತೆ ಆಗ್ರಹಿಸಿದೆ. ಎಸ್‌ಕೆಎಂ ಮುಖಂಡರ ಪೂರ್ಣ ನಿಯೋಗವು ಪ್ರತಿಭಟನಾ ಸ್ಥಳಕ್ಕೆ ಹೋಗಿ ಕ್ರೀಡಾಪಟುಗಳನ್ನು ಭೇಟಿ ಮಾಡಿ ಅವರಿಗೆ ಎಸ್‌ಕೆಎಂ ನ ಬೆಂಬಲವನ್ನು ವ್ಯಕ್ತಪಡಿಸಿದರು. ಅದೇ ರೀತಿಯಲ್ಲಿ ಡಿಸೆಂಬರ್ 31, 2022ರಂದು ಒಬ್ಬ ಅಂತರ್‌ರಾಷ್ಟ್ರೀಯ ಕ್ರೀಡಾ ಪಟುವಿನಿಂದ ಲೈಂಗಿಕ ಕಿರುಕುಳದ ಎಫ್‌ಐಆರ್‌ಗೆ ಒಳಗಾಗಿರುವ ಹರ್ಯಾಣದ ಮಂತ್ರಿ ಸಂದೀಪ್ ಸಿಂಗ್‌ರನ್ನು ಕೂಡ ಬಂಧಿಸಬೇಕು ಎಂದು ಆಗ್ರಹಿಸಲಾಯಿತು.

2) ರೈತರ ಚಳವಳಿ ಮತ್ತು ಎಸ್‌ಕೆಎಂನ ದೃಢ ಬೆಂಬಲಿಗರಾಗಿದ್ದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ವಿರುದ್ಧ ಬಿಜೆಪಿ ಸರ್ಕಾರವು ಸಿಬಿಐನಂತಹ ಕೇಂದ್ರೀಯ ಏಜೆನ್ಸಿಗಳನ್ನು ಹರಿಯ ಬಿಟ್ಟಿರುವುದನ್ನು ಎಸ್‌ಕೆಎಂ ಖಂಡಿಸಿದೆ. ಪುಲ್ವಾಮಾದಲ್ಲಿ ನಮ್ಮ ಸೈನಿಕರ ಅನಗತ್ಯ ಪ್ರಾಣಹಾನಿ, ಉನ್ನತ ಮಟ್ಟದ ಬಿಜೆಪಿ ನಾಯಕತ್ವದ ಭ್ರಷ್ಟಾಚಾರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶ್ರೀ ಮಲಿಕ್ ಬಿಜೆಪಿ ಸರ್ಕಾರದ ದುಷ್ಕೃತ್ಯಗಳನ್ನು ಬಹಿರಂಗಪಡಿಸುತ್ತಿದ್ದಾರೆ. ಶ್ರೀ ಮಲಿಕ್ ಅವರ ಧೈರ್ಯವನ್ನು ಶ್ಲಾಘಿಸಿದ ಎಸ್‌ಕೆಎಂ, ಶ್ರೀ ಮಲಿಕ್ ಬಾಯಿ ಮುಚ್ಚಿಸುವ ಬಿಜೆಪಿ ಸರ್ಕಾರದ ಯತ್ನಗಳನ್ನು ಪ್ರತಿರೋಧಿಸುವ ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸಲು ನಿರ್ಧರಿಸಿದೆ.

3) ಭಾರತದ ಅಂಚೆ ನೌಕರರ ಅತ್ಯಂತ ಹಳೆಯ ಸಂಘಗಳಾದ ರಾಷ್ಟ್ರೀಯ ಅಂಚೆ ನೌಕರರ ಒಕ್ಕೂಟ ಮತ್ತು ಅಖಿಲ ಭಾರತ ಅಂಚೆ ನೌಕರರ ಸಂಘಗಳ ಮಾನ್ಯತೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿರುವುದನ್ನು ಎಸ್‌ಕೆಎಂ ಖಂಡಿಸಿದೆ, ಈ ಸಂಘಗಳು ದೆಹಲಿಯ ಐತಿಹಾಸಿಕ ಹೋರಾಟವನ್ನು ಬೆಂಬಲಿಸಿವೆ ಮತ್ತು ರೈತ ಸಂಘಟನೆಗಳಿಗೆ ಕೆಲವು ನಿಧಿಗಳ ದೇಣಿಗೆ ನೀಡಿವೆ ಎಂಬ ಕಾರಣಕ್ಕೆ ಈ ಕ್ರಮ ಕೈಗೊಂಡಿರುವುದಾಗಿ ಹೇಳಲಾಗಿದೆ. ಎಸ್‌ಕೆಎಂ ಈ ಸಂಘಟನೆಗಳೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದೆ ಮತ್ತು ಮಾನ್ಯತೆ ರದ್ದುಗೊಳಿಸಿರುವುದನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದೆ, ಹಾಗೂ ರೈತ ವಿರೋಧಿ, ಕಾರ್ಮಿಕ ವಿರೋಧಿ ಬಿಜೆಪಿ ಸರ್ಕಾರದ ವಿರುದ್ಧ ಕಾರ್ಮಿಕ ರೈತ ಐಕ್ಯತೆ ಹೆಚ್ಚುವುದನ್ನು ಎದುರು ನೋಡುತ್ತಿದೆ ಎಂದು ನಿರ್ಣಯದಲ್ಲಿ ಹೇಳಲಾಗಿದೆ.





ಸಾವರ್ಕರ್‌ರ 'ಹಿಂದುತ್ವ': ಭಾರತ ದೇಶಕ್ಕೆ ವೈಜ್ಞಾನಿಕ ಆಧಾರ......

ಪುಟ 2 ರಿಂದ

ರಾಜಕೀಯವಾಗಿ ಕಿರೀಟಧಾರಣೆಯಾದ ದಿನ ಮತ್ತು ಆ ನಂತರದ ಎಲ್ಲಾ ತಲೆಮಾರುಗಳು ಹೊಸ ಸಮಾನ ಗುರಿಗಾಗಿ, ಒಂದು ಸಮಾನ ಪತಾಕೆಗಾಗಿ, ಒಂದು ಸಮಾನ ಉದ್ದೇಶಕ್ಕಾಗಿ ಪ್ರಜ್ಞಾಪೂರ್ವಕವಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿಯೋ ಹೋರಾಡಿ ರಕ್ಷಿಸಲು ಮಡಿದ ದಿನವದು."

ಹಿಂದೂಇಸಂ ಮತ್ತು ಹಿಂದುತ್ವ ಕುರಿತ ಗೊಂದಲ

'ಹಿಂದುತ್ವ'ಎಂಬ ಪದವು ವಿಶ್ಲೇಷಣೆಯ ಎಲ್ಲಾ ಪ್ರಯತ್ನಗಳನ್ನು ಧಿಕ್ಕರಿಸುತ್ತದೆ" ಎಂದು ಸಾವರ್ಕರ್ ಅವರು ಆರಂಭದಲ್ಲೇ ಒಪ್ಪಿಕೊಳ್ಳುತ್ತಾರೆ. ಆದರೆ, ಅವರು ತಮ್ಮ ಹಿಂದುತ್ವ ಸಿದ್ಧಾಂತ ಹಾಗೂ ಹಿಂದೂಯಿಸಂ(ಹಿಂದೂವಾದ) ನಡುವೆ ಒಂದು ಸ್ಪಷ್ಟ ವ್ಯತ್ಯಾಸವನ್ನು ತೋರುವ ಪ್ರಯತ್ನದ ಮೂಲಕ ಆರಂಭಿಸುತ್ತಾರೆ. ಮೊದಲ ಕೆಲವು ಪುಟಗಳನ್ನು ಓದಿದ ನಂತರ ಆ ವಿಷಯದ ಮೇಲೆ ಒಂದು ಗಂಭೀರ ಪಾಂಡಿತ್ಯದ ಚರ್ಚೆಯನ್ನು ಪ್ರಾರಂಭಿಸಲು ಅವರು ಬಯಸುತ್ತಿದ್ದಾರೆ ಎಂದು ನಮಗನಿಸುತ್ತದೆ. ಅವರ ಪ್ರಕಾರ ಹಿಂದುತ್ವವನ್ನು ಹಿಂದೂಯಿಸಂ ಎಂಬ ಪದದೊಂದಿಗೆ ಗೊಂದಲಿಸಿಕೊಳ್ಳಬಾರದು. ಅವರು ಬರೆಯುತ್ತಾರೆ:

"ಹಿಂದುತ್ವ ಒಂದು ಪದವಲ್ಲ ಅದು ಚರಿತ್ರೆ. ಅದು ನಮ್ಮ ಜನಗಳ ಆಧ್ಯಾತ್ಮಿಕ ಅಥವಾ ಧಾರ್ಮಿಕ ಚರಿತ್ರೆಯಷ್ಟೇ ಅಲ್ಲ ಅದೇ ಮೂಲದ ಮತ್ತೊಂದು ಪದ 'ಹಿಂದೂಇಸಂ'ದೊಂದಿಗೆ ಅನೇಕ ವೇಳೆ ತಪ್ಪಾಗಿ ಅರ್ಥೈಸಿ ಗೊಂದಲ ಹುಟ್ಟಿಸುತ್ತದೆ, ಆದರೆ ಅದು ಸಂಪೂರ್ಣವಾಗಿ ಒಂದು ಚರಿತ್ರೆ. ಹಿಂದೂಇಸಂ ಒಂದು ಉತ್ಪನ್ನ ಮಾತ್ರ, ಹಿಂದುತ್ವದ ಒಂದು ಭಾಗದ ಅಂಶವಷ್ಟೆ. ಹಿಂದುತ್ವ ಏನು ಎಂದು ಸ್ಪಷ್ಟಗೊಳಿಸದಿದ್ದರೆ ಹಿಂದೂಇಸಂವನ್ನು ತಿಳಿಯಲು ಕಷ್ಟವಾಗುತ್ತದೆ ಮತ್ತು ಅಸ್ಪಷ್ಟವಾಗಿ ಉಳಿದುಬಿಡುತ್ತದೆ. ಈ ಎರಡು ಪದಗಳ ನಡುವಿನ ಭಿನ್ನತೆಯನ್ನು ಹೇಳಲಾಗದ ವೈಫಲ್ಯವು ನಮ್ಮ ಹಿಂದೂ ನಾಗರೀಕತೆಯ ಬೆಲೆ ಕಟ್ಟಲಾಗದ ಹಾಗೂ ಸಮಾನ ನಿಧಿಯನ್ನು ಅನುವಂಶಿಕವಾಗಿ ಪಡೆದಿರುವ ಸೋದರ ಸಮುದಾಯಗಳ ನಡುವೆ ತಪ್ಪುಗ್ರಹಿಕೆಗೆ ಮತ್ತು ಪರಸ್ಪರ ಅನುಮಾನಗಳಿಗೆ ಕಾರಣವಾಗುತ್ತದೆ .. .. ಅಸ್ಪಷ್ಟವಾಗಿ ತೋರುತ್ತಿರುವ ಹಿಂದೂಇಸಂ ಎಂಬ ಪದದೊಂದಿಗೆ ಹಿಂದುತ್ವವು ಸರ್ವಾಂಗ ಸಮವಾದುದಲ್ಲ ಎಂಬ ಅಂಶವನ್ನು ಇಲ್ಲಿ ಹೇಳಿದರೆ ಸಾಕು. 'ಇಸಂ' ಎಂಬುದು ಸಾಮಾನ್ಯವಾಗಿ ಸಿದ್ಧಾಂತ ಅಥವಾ ಆಧ್ಯಾತ್ಮ ಅಥವಾ ಧಾರ್ಮಿಕ ತತ್ವ ಅಥವಾ ಪದ್ಧತಿಯ ಮೇಲೆ ಹೆಚ್ಚೂ ಕಡಿಮೆ ಆಧಾರವಾದ ಸಂಹಿತೆ ಎಂಬ ಅರ್ಥ ನೀಡುತ್ತದೆ.

"ಆದರೆ, ಹಿಂದುತ್ವದ ಅಗತ್ಯವಾದ ಮಹತ್ವ ಕುರಿತು ನಾವು ತನಿಖೆ ಮಾಡುವ ಪ್ರಯತ್ನ ಮಾಡಿದರೆ ಯಾವುದೋ ಒಂದು ನಿರ್ದಿಷ್ಟ ದೇವಪ್ರಭುತ್ವ ಅಥವಾ ಧಾರ್ಮಿಕ ನಂಬಿಕೆ ಅಥವ ಪಂಥದ ಬಗ್ಗೆ ನಾವು ಪ್ರಥಮತಃ-ಪ್ರಧಾನವಾಗಿಯಂತೂ ಅಲ್ಲ- ಆಸಕ್ತರಾಗಿದ್ದೇವೆ ಅಂತಲ್ಲ. ನಮ್ಮ ಹಾದಿಯಲ್ಲಿ ಭಾಷಿಕ ಬಳಕೆಯು ಮಧ್ಯೆ ಬಂದು ನಿಲ್ಲದಿದ್ದರೆ, ಆಗ ಹಿಂದುತ್ವ ಪದಕ್ಕೆ 'ಹಿಂದೂಇಸಂ'ಗಿಂತ ಹೆಚ್ಚು ಹತ್ತಿರವಾಗಿ 'ಹಿಂದೂನೆಸ್' ಎಂಬ ಪದ ಸೂಕ್ತವಾಗುತ್ತದೆ. ಹಿಂದುತ್ವವು ಹಿಂದೂ ಜನಾಂಗದ ಒಟ್ಟಾರೆ ಇರವಿನ ಚಿಂತನೆಗಳ ಹಾಗೂ ಚಟುವಟಿಕೆಗಳ ಎಲ್ಲಾ ವಿಭಾಗಗಳನ್ನು ಒಳಗೊಳ್ಳುತ್ತದೆ . . ನಾವು ಯಾವುದೇ ಕಾರಣಕ್ಕೂ ಹೆಚ್ಚು ಸೀಮಿತವಾದ, ಕಡಿಮೆ ತೃಪ್ತಿಕರವಾದ ಹಾಗೂ ಮೂಲತಃ ಪಂಥೀಯವಾಗಿರುವ ಹಿಂದೂಇಸಂ ಎಂಬ ಪದಕ್ಕೆ ಒಂದು ನಿರೂಪಣೆ ಅಥವಾ ವಿವರಣೆಯನ್ನು ನೀಡಲು ಪ್ರಯತ್ನಿಸುತ್ತಿಲ್ಲ ಎಂದು ಅವಶ್ಯವಾಗಿ ಒತ್ತಿ ಹೇಳಬೇಕಾಗುತ್ತದೆ."

ಆದರೆ ಹಿಂದುತ್ವ ಎಂಬುದಕ್ಕೆ ಅವರು ತಮ್ಮ ವಿವರಣೆ ಕೊಟ್ಟು ಮುಗಿಸುವ ಹೊತ್ತಿಗೆ ಅವೆರಡರ ನಡುವಿನ ವ್ಯತ್ಯಾಸವೇ ಸಂಪೂರ್ಣವಾಗಿ ಮಾಯವಾಗಿತ್ತು. ಹಿಂದುತ್ವವು ರಾಜಕೀಯ ಹಿಂದೂವಾದವಲ್ಲದೇ ಬೇರೇನೂ ಆಗಿರಲಿಲ್ಲ. ಸಾವರ್ಕರ್ ಅವರು ಸಮರ್ಥಿಸಬೇಕಾದ ವಿಷಯವನ್ನು ಮುಗಿಸುವ ಹೊತ್ತಿಗೆ ಅವರಿಗೇನೇ ಆ ವ್ಯತ್ಯಾಸ ಮರೆತು ಹೋದಂತಿತ್ತು.

(ಮುಂದುವರೆಯುವುದು)

NFPE ಮತ್ತು AIPEU ಕಾರ್ಮಿಕ ಸಂಘಟನೆಗಳ ಮಾನ್ಯತೆ ರದ್ದತಿ ಒಂದು ಫ್ಯಾಸಿಸ್ಟ್ ನಡೆ!



NFPE ಮತ್ತು AIPEU ಗೆ ಇಂದು ಏನಾಗಿದೆಯೋ ಇದು, ನಾಳೆ ಯಾವುದೇ ಸರ್ಕಾರಿ ಅಥವಾ ಸಾರ್ವಜನಿಕ ವಲಯದ ನೌಕರರ ಒಕ್ಕೂಟಗಳಿಗೆ ಸಂಭವಿಸಬಹುದು! ಈ ಅಪಾಯವನ್ನು ಕಡಿಮೆ ಅಂದಾಜು ಮಾಡಬಾರದು. ಹಿಟ್ಲರ್ ಜರ್ಮನ್ ಟ್ರೇಡ್ ಯೂನಿಯನ್ ನಾಯಕರನ್ನು ಮೇಡೇ ರ್‍ಯಾಲಿಗೆ ಆಹ್ವಾನಿಸಿ, ಅವರನ್ನು ಅಲ್ಲಿಯೇ ಬಂಧಿಸಿ ಜೈಲಿಗೆ ಕಳುಹಿಸಿದನು. ಅವನು ಕಾರ್ಮಿಕ ಸಂಘಟನೆಗಳನ್ನೂ ನಿಷೇಧಿಸಿದನು. ಹಿಟ್ಲರನ ಫ್ಯಾಸಿಸಂನ ಹಾದಿಯನ್ನು ಅನುಸರಿಸಲು ಉತ್ಸುಕವಾಗಿರುವ ಮೋದಿ ಸರ್ಕಾರವು, ಕಾರ್ಮಿಕರ ದಿನವಾದ ಮೇ ದಿನಕ್ಕೆ ಕೆಲವು ದಿನಗಳ ಮೊದಲು ಟ್ರೇಡ್ ಯೂನಿಯನ್ ಮಾನ್ಯತೆಯನ್ನು ರದ್ದುಗೊಳಿಸಿದೆ. ಭಾರತೀಯ ಟ್ರೇಡ್ ಯೂನಿಯನ್ ಚಳವಳಿಯು ಇಂತಹ ಹೇಯ ಕೃತ್ಯಗಳನ್ನು ಎದುರಿಸುತ್ತದೆ ಮತ್ತು ಸೋಲಿಸುತ್ತದೆ ಎಂಬುದರಲ್ಲಿ ಎರಡನೇ ಅಭಿಪ್ರಾಯವಿಲ್ಲ.

ಮೋದಿ ಸರ್ಕಾರದ ಸಂಪರ್ಕ ಸಚಿವಾಲಯವು ಅಖಿಲ ಭಾರತ ಅಂಚೆ ನೌಕರರ ಸಂಘಟನೆ, ಅಂಚೆ ನೌಕರರ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಪಿಇ) ಮತ್ತು ಅಖಿಲ ಭಾರತ ಅಂಚೆ ನೌಕರರ ಒಕ್ಕೂಟ (ಎಐಪಿಇಯು) ಗಳ ಮಾನ್ಯತೆಯನ್ನು ರದ್ದುಗೊಳಿಸಿದೆ. ಈ ಒಕ್ಕೂಟಗಳು ನೌಕರರ ಬೆಂಬಲಿತ ಸಂಸ್ಥೆಗಳಾಗಿವೆ. ನಿರ್ದಿಷ್ಟವಾಗಿ ಹೇಳುವುದಾದರೆ, NFPE ಶೇ. 75 ಉದ್ಯೋಗಿಗಳ ಬೆಂಬಲವನ್ನು ಹೊಂದಿರುವ ಸಂಸ್ಥೆಯಾಗಿದೆ. ಪತ್ರಿಕಾ ವರದಿಗಳ ಪ್ರಕಾರ, ಶೇಕಡಾ 5 ಕ್ಕಿಂತ ಕಡಿಮೆ ಮತಗಳನ್ನು ಪಡೆದ BMS ಸಂಘಟನೆಯು ಸಲ್ಲಿಸಿದ ದೂರಿನ ಆಧಾರದ ಮೇಲೆ ಮಾನ್ಯತೆಯನ್ನು ರದ್ದುಗೊಳಿಸಲಾಗಿದೆ. ಇದನ್ನು ಯಾವದೋ ಎರಡು ಟ್ರೇಡ್ ಯೂನಿಯನ್ ಸಂಸ್ಥೆಗಳಿಗೆ ಮಾತ್ರ ಅನ್ಯಾಯವಾಗಿದೆ ಎಂದೋ, ಅಥವಾ ಇದೊಂದು ಸಣ್ಣ ಘಟನೆ ಎಂದೋ ಭಾವಿಸುವುದು ಅಪಾಯಕಾರಿಯಾಗುತ್ತದೆ. ಇದು ಮೋದಿ ಸರಕಾರದ ಅಡಿಯಲ್ಲಿ ನಿರ್ಮಾಣವಾಗಲಿರುವ ನಿರಂಕುಶ ಪ್ರಭುತ್ವದ ಮತ್ತೊಂದು ಪ್ರಮುಖ ನಡೆ! ಇದನ್ನು ಹೋಗಲಾಡಿಸದಿದ್ದರೆ, ಇದು ಎಲ್ಲರಿಗೂ ಅಪಾಯಕಾರಿ ಎಂಬುದನ್ನು ಸರ್ಕಾರಿ/ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುವ ದೇಶದ ಕಾರ್ಮಿಕ ಸಂಘ ಸಂಸ್ಥೆಗಳು ಅರಿತುಕೊಳ್ಳಬೇಕು.

ಈ ಎರಡು ಸಂಘಟನೆಗಳ ಮಾನ್ಯತೆ ರದ್ದುಮಾಡಲು ಸರ್ಕಾರ ನೀಡಿರುವ ಕಾರಣಗಳೇನು?

ಮಾನ್ಯತೆ ರದ್ದತಿಗೆ ಸರ್ಕಾರ ಮೂರು ಕಾರಣಗಳನ್ನು ಪ್ರಸ್ತುತಪಡಿಸುತ್ತದೆ. ಅವುಗಳೆಂದರೆ: ಸಂಘಟನೆಯು

1. ರೈತರ ಹೋರಾಟಕ್ಕೆ ಆರ್ಥಿಕ ಬೆಂಬಲ ನೀಡಿದೆ.
2. ಸಿಐಟಿಯು ಸಂಘಟನೆಗೆ ಹಣಕಾಸಿನ ನೆರವು ನೀಡಿದೆ.
3. ಸಿಪಿಐ(ಎಂ)ಗೆ ದೇಣಿಗೆ ನೀಡಿದೆ.

ಈ ಮೂರು ಕಾರಣಗಳೂ ಸುಳ್ಳು! ದೆಹಲಿಯಲ್ಲಿ ರೈತರ ಪ್ರತಿಭಟನೆಗೆ ಎನ್‌ಎಫ್‌ಪಿಇ ನೇರವಾಗಿ ಹಣ ನೀಡಲಿಲ್ಲ. NFPE ಕೇಂದ್ರ ಸರ್ಕಾರಿ ನೌಕರರ ಒಕ್ಕೂಟದ ಅಂಗಸಂಸ್ಥೆಯಾಗಿದೆ. ರೈತರಿಗೆ ಆರ್ಥಿಕ ನೆರವು ನೀಡುವಂತೆ ಮಹಾಸಮ್ಮೇಳನದಲ್ಲಿ ಕರೆ ನೀಡಿದಾಗ NFPE ಅಲ್ಪ ಮೊತ್ತವನ್ನು ನೀಡಿದೆ. ಮಹಾಸಮ್ಮೇಳನವೇ ನೇರ ಆರ್ಥಿಕ ನೆರವು ನೀಡಿದೆ. ಆದರೆ, ಆರ್ಥಿಕ ನೆರವು ನೀಡಿದವರು ಯಾರು ಎಂಬುದೇ ಪ್ರಶ್ನೆ. ಕಾರ್ಮಿಕ ಶಕ್ತಿಯ ಪ್ರಮುಖ ಭಾಗವೆಂದರೆ ರೈತರು. ಇವರು ಕಾರ್ಮಿಕ ವರ್ಗದ ಒಡನಾಡಿಗಳು. ಎನ್‌ಎಫ್‌ಪಿಇ ಅಥವಾ ಇತರ ಯಾವುದೇ ಟ್ರೇಡ್ ಯೂನಿಯನ್ ಸಂಘಟನೆಗಳು ವರ್ಗ ಸಹೋದ್ಯೋಗಿಗಳ ಆಧಾರದ ಮೇಲೆ ಅವರ ಹೋರಾಟಕ್ಕೆ ಆರ್ಥಿಕ ಬೆಂಬಲ ನೀಡುವುದು ಹೇಗೆ ತಪ್ಪಾಗುತ್ತದೆ? ಮಾನ್ಯತೆ ನಿರಾಕರಣೆಗೆ ಇದು ಹೇಗೆ ಆಧಾರವಾಗುತ್ತದೆ? ಆದರೆ, ಮೋದಿ ಸರ್ಕಾರದಿಂದ ನಾವು ಕಾರಣ ಮತ್ತು ನ್ಯಾಯವನ್ನು ನಿರೀಕ್ಷಿಸಿದರೆ ಅದು ನಮ್ಮ ತಪ್ಪು! ಮೋದಿ ಆಡಳಿತದ ಇತಿಹಾಸದಲ್ಲಿ ಅತಿ ಹೆಚ್ಚು ನಷ್ಟ ಅನುಭವಿಸಿದವರು ರೈತರು. ರೈತರು ರಾಷ್ಟ್ರೀಯ ರಾಜಧಾನಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಪ್ರದರ್ಶಿಸಿದರು ಮತ್ತು ಒಕ್ಕೂಟ ಸರ್ಕಾರ ರೈತ ವಿರೋಧಿ ಕಾನೂನುಗಳನ್ನು ಹಿಂಪಡೆಯುವಂತೆ ಮಾಡಿದರು. ಸಂಘಪರಿವಾರಕ್ಕೆ ಆ ಸಿಟ್ಟು ಜಾಸ್ತಿ. ಆ ಕೋಪವನ್ನು NFPE ಮತ್ತು AIPEU ನಲ್ಲಿ ನಿರ್ದೇಶಿಸಲ್ಪಟ್ಟಿದೆ ಎಂದು ತೋರುತ್ತದೆ!

ಸಿಐಟಿಯುಗೆ ಆರ್ಥಿಕ ನೆರವು ನೀಡಿದ್ದು ಮಾನ್ಯತೆ ರದ್ದತಿಗೆ ಇನ್ನೊಂದು ಕಾರಣ! ಇದು ಕೂಡ ನಿಜವಲ್ಲ. NFPE ಮತ್ತು AIPEU ಸೇರಿದಂತೆ ಹಲವಾರು ಸಂಸ್ಥೆಗಳನ್ನು ಒಳಗೊಂಡಿರುವ ಮಹಾಸಮೇಳನವು ವಿಶ್ವ ಕಾರ್ಮಿಕ ಒಕ್ಕೂಟವಾದ WFTU ನೊಂದಿಗೆ ತನ್ನನ್ನು ಸಂಯೋಜಿತವಾಗಿದೆ. WFTU ಗೆ ಪಾವತಿಸಬೇಕಾದ ಸಂಬಂಧಿತ ಶುಲ್ಕವನ್ನು CITU ಒದಗಿಸುತ್ತದೆ. ಇದು ಸಿಐಟಿಯುಗೆ ನೀಡಿದ ದೇಣಿಗೆ ಅಲ್ಲ! BPEF (ಭಾರತೀಯ ಅಂಚೆ ನೌಕರರ ಸಂಘ) ತನ್ನ ಸಂಪರ್ಕ ಶುಲ್ಕವನ್ನು BMS (ಭಾರತೀಯ ಮಜ್ದೂರ್ ಸಂಘ) ಮೂಲಕ ಪಾವತಿಸುತ್ತದೆ. ಆದರೆ NFPE ಮತ್ತು AIPEU ಅನ್ನು ಮಾತ್ರ ಬಲಿಪಶು ಮಾಡುವ ರಹಸ್ಯವೇನು? ಆದರೆ, ಇದರಲ್ಲಿಯೂ ಒಂದು ದೊಡ್ಡ ಸಮಸ್ಯೆ ಉದ್ಭವಿಸುತ್ತದೆ. NFPE / AIPEU ಅಥವಾ ಯಾವುದೇ ಇತರ ಟ್ರೇಡ್ ಯೂನಿಯನ್ ಮತ್ತೊಂದು ಟ್ರೇಡ್ ಯೂನಿಯನ್‌ಗೆ ಹಣಕಾಸಿನ ನೆರವು ನೀಡುವುದರಲ್ಲಿ ತಪ್ಪೇನು? ಟ್ರೇಡ್ ಯೂನಿಯನ್‌ಗಳು ಕಾರ್ಮಿಕರು ಮತ್ತು ಇತರ ಸಹೋದರ ಸಂಘಟನೆಗಳಿಂದ ಮಾತ್ರ ಆರ್ಥಿಕ ಬೆಂಬಲವನ್ನು ಪಡೆಯಬಹುದು. ಕಾರ್ಪೊರೇಟ್‌ಗಳಿಂದ ಆರ್ಥಿಕ ಸಹಾಯ ಪಡೆಯುವುದು ತಪ್ಪಾಗುತ್ತದೆ. ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಯಾರು ಹಣ ನೀಡುತಿದ್ದಾರೆ ಎಂಬುದನ್ನು ಗೌಪ್ಯವಾಗಿಟ್ಟುಕೊಂಡು ಈ ಆರ್ಥಿಕ ನೆರವು ಪಡೆಯುತ್ತಿಲ್ಲ. ಅಥವಾ ಜನರನ್ನು ವಂಚಿಸಿ ಲೂಟಿ ಮಾಡುವ ಸಂಸ್ಥೆಗಳಿಂದ ಈ ರೀತಿಯ ನಿಧಿಯನ್ನು ಬೆದರಿಸಿ ಪಡೆಯುವುದಿಲ್ಲ! ಅಷ್ಟೇ ಅಲ್ಲ ಒಂದು ಟ್ರೇಡ್ ಯೂನಿಯನ್ ಇನ್ನೊಂದಕ್ಕೆ ಆರ್ಥಿಕ ನೆರವು ನೀಡುವುದು ತಪ್ಪೇನೂ ಅಲ್ಲ! ಸಹಾಯ ಮಾಡುವುದು ಕೂಡ ಅವುಗಳ ಒಂದು ಕರ್ತವ್ಯ! ಯಾವುದೇ ವರ್ಗ–ಪ್ರಜ್ಞೆಯ ಕೆಲಸ ಮಾಡುವ ವ್ಯಕ್ತಿಯು ಇದನ್ನು ಗುರುತಿಸದಿರುವುದಕ್ಕೆ ಕಾರಣವೆಂದು ಉಲ್ಲೇಖಿಸುವುದು ದುರುದ್ದೇಶಪೂರಿತವಾಗಿದೆ ಎಂದು ಅರ್ಥಮಾಡಿಕೊಳ್ಳುತ್ತಾನೆ.

ಕಾರ್ಮಿಕ ಸಂಘಗಳು ಮತ್ತು ರಾಜಕೀಯ;

ಸಿಪಿಐ(ಎಂ)ಗೆ ದೇಣಿಗೆ ನೀಡಿದೆ ಎಂಬುದು ಮತ್ತೊಂದು ಆರೋಪ! ಅದು ಕೇಳಿದ ಮೊತ್ತ ಎಷ್ಟು? 4,950 ರೂಪಾಯಿ ಮಾತ್ರ. ಇದನ್ನು ರಾಜಕೀಯ ದೇಣಿಗೆ ಎಂದು ಪರಿಗಣಿಸಬಹುದೇ? ಭಾರತದ ಕಾರ್ಪೊರೇಟ್‌ಗಳು ರಾಜಕೀಯ ಪಕ್ಷಗಳಿಗೆ, ಅದರಲ್ಲೂ ಬಿಜೆಪಿಗೆ ಕೋಟ್ಯಂತರ ರೂಪಾಯಿಗಳನ್ನು ನೀಡುತ್ತವೆ. ಒಂದು ರಾಜಕೀಯ ಪಕ್ಷ 4,950 ರೂಪಾಯಿಗಳಲ್ಲಿ ಏನು ಮಾಡಬಹುದು? ಈ ಕನಿಷ್ಠ ಸಾಮಾನ್ಯ ಜ್ಞಾನವೂ ಸಹ ಈ ಆಡಳಿತಗಾರರಿಗೆ ಇಲ್ಲವೇ ಎಂದು ಪ್ರಶ್ನಿಸಬೇಕಾಗಿದೆ. ಆದರೆ ಯಾವುದೇ ಕ್ಷುಲ್ಲಕ ಕಾರಣಕ್ಕಾಗಿ ಕಪಟರಂತೆ ಕಾಯುವವರ ಸಾಮಾನ್ಯ ಜ್ಞಾನದ ಬಗ್ಗೆ ನಾವು ಮಾತನಾಡಲು ಹೇಗೆ ಸಾಧ್ಯ? ಈ ವಿಷಯದಲ್ಲೂ ಸತ್ಯ ಬೇರೆಯೇ ಇದೆ! 4,950 ರೂ.ಗಳ ಸಣ್ಣ ಮೊತ್ತ ದೇಣಿಗೆಯಾಗುವುದಿಲ್ಲ! ಇದು ಕೋವಿಡ್ ಸಮಯದಲ್ಲಿ ಪುಸ್ತಕದ ಕೆಲವು ಪ್ರತಿಗಳನ್ನು ಖರೀದಿಸಲು, ನೇರ ಸಂಪರ್ಕವನ್ನು ತಪ್ಪಿಸಲು ಬ್ಯಾಂಕ್ ಮೂಲಕ ಪಾವತಿಸಿದ ಮೊತ್ತವಾಗಿದೆ!

ಒಂದು ವೃತ್ತಿಸಂಘಟನೆ ರಾಜಕೀಯ ಪಕ್ಷಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳಬೇಕೆ? ಕಾರ್ಮಿಕ ಸಂಘಗಳಿಗೆ ರಾಜಕೀಯ ಬೇಕೆ? ಇವು ಬಹುಕಾಲದಿಂದ ನಡೆಯುತ್ತಿರುವ ಚರ್ಚೆಗಳು! ಟ್ರೇಡ್ ಯೂನಿಯನ್‌ಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳು ರಾಜಕೀಯೇತರವಾಗಿ ಇರಬೇಕೆಂದು ಆಳುವ ವರ್ಗಗಳು ಬಯಸುತ್ತವೆ. ಇವುಗಳ ರಾಜಕೀಯೇತರವು ಆಳುವವರ ಲಾಭಕೋರತನಕ್ಕೆ ಅನುಕೂಲಕರ ವಾತಾವರಣವಾಗಿದೆ ಎಂದು ಅವರು ಪರಿಗಣಿಸುತ್ತಾರೆ. ಪ್ರತಿಯೊಂದು ಸಾಮಾಜಿಕ ಆಂದೋಲನವೂ ಒಂದು ರಾಜಕೀಯ ಚಳುವಳಿ ಎಂಬುದನ್ನು ಅವರು ಮರೆಯುತ್ತಾರೆ ಅಥವಾ ಮರೆಮಾಚುವ ಪ್ರಯತ್ನ ಮಾಡುತ್ತಾರೆ. ಟ್ರೇಡ್ ಯೂನಿಯನ್ ಚಳುವಳಿಯು ಕಿರಿದಾದ ವೃತ್ತದಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ಅವರು ನಿರೀಕ್ಷಿಸುತ್ತಾರೆ. ಅಂತಹ ಟ್ರೇಡ್ ಯೂನಿಯನ್ ಚಳುವಳಿ ಅಂತಿಮವಾಗಿ ಸ್ವ–ಹಿತಾಸಕ್ತಿಯ ಸಂಘಟನೆಯಾಗುತ್ತದೆ ಎಂದು ಅನೇಕ ಅನುಭವಗಳು ತೋರಿಸುತ್ತವೆ. ಉತ್ತಮ ಟ್ರೇಡ್ ಯೂನಿಯನ್ ಸಂಸ್ಥೆಯು ತನ್ನ ಸದಸ್ಯರ ಕಲ್ಯಾಣವನ್ನು ಪರಿಗಣಿಸಬೇಕು. ಇದರ ಜತೆಗೆ ಸಾಮಾಜಿಕ ಕಾಳಜಿಯೂ ಇರಬೇಕು. ಸಾಮಾಜಿಕ ಕಾಳಜಿಯು ರಾಜಕೀಯವನ್ನು ಒಳಗೊಂಡಿರುತ್ತದೆ. ರಾಜಕೀಯವನ್ನು ಸಂಪೂರ್ಣವಾಗಿ ತ್ಯಜಿಸಿದ ಟ್ರೇಡ್ ಯೂನಿಯನ್ ಚಳವಳಿ ನಡೆಸುವುದು ಸಾಧ್ಯವಿಲ್ಲ! ಕಾರ್ಮಿಕರಿಗೆ ಅವರದ್ದೇ ಆದ ವರ್ಗ ರಾಜಕಾರಣವಿದೆ. ಅವರು ಯಾವುದೇ ರಾಜಕೀಯ ಪಕ್ಷಗಳ ರಾಜಕೀಯವನ್ನು ಅನುಸರಿಸಬೇಕಾಗಿಲ್ಲ. ಆದರೆ ತಮ್ಮ ವರ್ಗ ರಾಜಕಾರಣವನ್ನು ಕೈಬಿಟ್ಟರೆ ಟ್ರೇಡ್ ಯೂನಿಯನ್ ಚಳವಳಿಗೆ ಹಾನಿಯಾಗುತ್ತದೆ.

BMS (Bharatiya Mazdoor Sangh) ನ ರಾಜಕೀಯ;

ಪತ್ರಿಕಾ ವರದಿಗಳ ಪ್ರಕಾರ, ಒಕ್ಕೂಟದ ಮಾನ್ಯತೆ ರದ್ದುಗೊಳ್ಳಲು ಪ್ರಮುಖ ಕಾರಣವೆಂದರೆ BMS ಸಂಯೋಜಿತ "ಭಾರತೀಯ ಅಂಚೆ ನೌಕರರ ಸಂಘ"ದ ದೂರು. ಟ್ರೇಡ್ ಯೂನಿಯನ್ ಚಳುವಳಿಯನ್ನು ನಾಶಮಾಡಲು ಬಂಡವಾಳಶಾಹಿ ಪ್ರಯತ್ನಿಸುತ್ತಿರುವುದನ್ನು ನಾವು ಆಗಾಗ್ಗೆ ನೋಡುತ್ತೇವೆ. ಆದರೆ ಒಂದು ಟ್ರೇಡ್ ಯೂನಿಯನ್ ಅನ್ನು ಇನ್ನೊಂದು ಟ್ರೇಡ್ ಯೂನಿಯನ್ ನಾಶಪಡಿಸಲು ಪ್ರಯತ್ನಿಸುವ ದುಷ್ಕೃತ್ಯವನ್ನು ಬಿಎಂಎಸ್ ಮಾಡಿದೆ. ಅಂತಹ ಸಂಸ್ಥೆಯು ತನ್ನನ್ನು ತಾನು ಟ್ರೇಡ್ ಯೂನಿಯನ್ ಎಂದು ಕರೆದುಕೊಳ್ಳಲು ಅರ್ಹವಾಗಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. BMS ತನ್ನನ್ನು ರಾಜಕೀಯೇತರ ಸಂಘ ಎಂದು ಕರೆದುಕೊಳ್ಳುತ್ತದೆ. ಆದರೆ ಬಿಎಂಎಸ್ ಸಂಘಟನೆಯು ಆರ್‌ಎಸ್‌ಎಸ್‌ನ ಕಾರ್ಮಿಕ ಸಂಘಟನೆಯ ಮುಖವಾಗಿದೆ ಮತ್ತು ಬಿಜೆಪಿ ಆರ್‌ಎಸ್‌ಎಸ್‌ನ ರಾಜಕೀಯ ಮುಖವಾಗಿದೆ. ಬಿಎಂಎಸ್ ಎರಡು ಬಣಗಳಾಗಿ ವಿಭಜಿತವಾಗಿರುವಾಗ ರಾಜಕೀಯವನ್ನು ಮೀರಿದ್ದು ಹೇಗೆ? ಗೋಳ್ವಾಲ್ಕರ್ ಅವರು ದತ್ತೋಪಂತ್ ಬಾಪುರಾವ್ ತೇಂಗಡಿ ಅವರನ್ನು ಬಿಎಂಎಸ್ ರಚಿಸಲು ಕಳುಹಿಸಿದ್ದರು ಎಂದು ಬಿಎಂಎಸ್ ತನ್ನ ವೆಬ್‌ಸೈಟ್‌ನಲ್ಲಿ ಹೇಳಿದೆ. ಆರ್.ಎಸ್.ಎಸ್ ಸಂಘಟನೆಗೂ ರಾಜಕೀಯಕ್ಕೂ ಸಂಬಂಧವಿಲ್ಲ ಎಂದು ಇಂದು ಯಾರಾದರೂ ಒಪ್ಪಿಕೊಳ್ಳುವರೇ? ಬಿಎಂಎಸ್‌ನ ಮಾತೃಸಂಸ್ಥೆಯಾದ ಆರ್‌ಎಸ್‌ಎಸ್ ತನ್ನ ಕಾರ್ಯಕರ್ತರನ್ನು ಬಿಜೆಪಿಯಲ್ಲಿ ಕೆಲಸ ಮಾಡಲು ಕಳುಹಿಸುತ್ತದೆ ಮತ್ತು ಆ ಮೂಲಕ ಬಿಜೆಪಿಯನ್ನು ನಿಯಂತ್ರಿಸುವುದು ಸಾಮಾನ್ಯವಾಗಿದೆ. ಹೀಗಿರುವಾಗ ಬಿಎಂಎಸ್ ರಾಜಕೀಯದ ಬಗ್ಗೆ ನಿರಾಸಕ್ತಿ ತಾಳಿದೆ ಎನ್ನುವುದು ಹಸಿ ಸುಳ್ಳು. ಭಾರತೀಯ ಕಾರ್ಮಿಕರು ಇದನ್ನು ಒಪ್ಪುವುದಿಲ್ಲ. ಸ್ವಾತಂತ್ರ್ಯ ಹೋರಾಟಗಾರ ತಿಲಕರ ಜನ್ಮದಿನದಂದು ಬಿಎಂಎಸ್ ಆರಂಭಿಸಿರುವುದು ಸಂಸ್ಥೆಗೆ ಹೆಮ್ಮೆಯ ಸಂಗತಿ. ಆದರೆ ಬಿಎಂಎಸ್ ತಿಳಿದಿದೆಯೇ? ತಿಲಕರ ಬಂಧನದ ವಿರುದ್ಧ ಭಾರತೀಯ ಕಾರ್ಮಿಕ ವರ್ಗವು ರಾಜಕೀಯ ಮುಷ್ಕರ ಹೂಡಿತು. ಇದನ್ನು ತಿಳಿದ ಲೆನಿನ್ ಭಾರತೀಯ ಕೈಗಾರಿಕಾ ವರ್ಗದ ರಾಜಕೀಯ ಮನೋಭಾವವನ್ನು ಹೊಗಳಿ ಕಾರ್ಟೂನ್ ಬಿಡಿಸಿದ್ದು ಬಿಎಂಎಸ್ ಗೆ ಗೊತ್ತಿದೆಯೇ?

ಬಿಜೆಪಿ ಮತ್ತು ಸ್ವತಃ ತಾನು ಒಂದೇ ದಿಕ್ಕಿನಲ್ಲಿ ಏಕೆ ಪ್ರಯಾಣಿಸುತ್ತಿದ್ದೇವೆ ಎಂಬುದನ್ನು ಬಿಎಂಎಸ್ ವಿವರಿಸುತ್ತದೆಯೇ? ಸನಾತನ ಧರ್ಮ ಮತ್ತು ಮನುಸ್ಮೃತಿಯನ್ನು ಬಿಜೆಪಿ ತಿರಸ್ಕರಿಸಲಿಲ್ಲ. ತಾನೂ ಅದನ್ನು ಏಕೆ ತಿರಸ್ಕರಿಸಲಿಲ್ಲ ಎಂಬುದನ್ನು BMS ವಿವರಿಸುತ್ತದೆಯೇ? ವರ್ಣಾಶ್ರಮ ಪದ್ಧತಿ ಮತ್ತು ಜಾತೀಯತೆ ಹಿಂದೂ ಧರ್ಮದ ಅವಿಭಾಜ್ಯ ಅಂಶಗಳು ಎಂದು ಗೋಲ್ವಾಲ್ಕರ್ ಹೇಳುತ್ತಾರೆ. BMS ಕೂಡ ಇದನ್ನು ಒಪ್ಪುತ್ತದೆಯೇ, ಅಥವಾ ತಿರಸ್ಕರಿಸುತ್ತದೆಯೇ ಎಂದು ಇವರು ಹೇಳಬಲ್ಲರಾ? ಸಾರ್ವಜನಿಕ ವಲಯ ಮತ್ತು ಅದರ ಉದ್ಯೋಗಿಗಳನ್ನು ರಕ್ಷಿಸಲು ರಚಿಸಲಾದ CPSTU (Committee of Public Sector Trade Unions) ವ್ಯವಸ್ಥೆಯಲ್ಲಿ BMS ಸಹ ಪ್ರಮುಖ ಪಾತ್ರವನ್ನು ಹೊಂದಿದೆ. ಆದರೆ 1992 ರಲ್ಲಿ CPSTU ನಲ್ಲಿ ಬಾಬರಿ ಮಸೀದಿ ಧ್ವಂಸವನ್ನು ಖಂಡಿಸುವ ನಿರ್ಣಯವನ್ನು ಮಂಡಿಸಿದಾಗ BMS ಸಂಘಟನೆ CPSTU ನಿಂದ ಹಿಂದೆಸರಿಯಿತು! ಇದು ರಾಜಕೀಯ ಅಲ್ಲವೇ? ರೈತರ ಹೋರಾಟವನ್ನು ಬೆಂಬಲಿಸುವುದು ಒಂದು ರಾಜಕೀಯವಾದರೆ, ವಿರೋಧಿಸುವುದು ಇನ್ನೊಂದು ರಾಜಕೀಯ! ಇದು ಸರಿಯಾದ ರಾಜಕೀಯವೇ ಅನ್ನೋದೇ ಪ್ರಶ್ನೆ! ಬಿಎಂಎಸ್ (ಭಾರತೀಯ ಮಜ್ದೂರ್ ಸಂಘ) ಎಂಬುದು ಮೂಲಭೂತವಾಗಿ ಬಿಜೆಪಿಯ ಪೋಷಕ ಸಂಘಟನೆ ಎಂದು ಭಾರತೀಯ ಕಾರ್ಮಿಕ ವರ್ಗಕ್ಕೆ ತಿಳಿದಿದೆ.

ಕನಿಷ್ಠ ಪಕ್ಷ ಬಿಎಂಎಸ್ ಇಂದು ತೆಂಗಡಿಯ ಸಿದ್ಧಾಂತವನ್ನೂ ಬಿಟ್ಟುಕೊಡದೆ, ಮೋದಿ ಸರಕಾರದ ಖಾಸಗೀಕರಣ ಮತ್ತು ನವ ಉದಾರೀಕರಣ ನೀತಿಗಳನ್ನು ಬೆಂಬಲಿಸುತ್ತದೆ. ಇತರ ಸಂಘಟನೆಗಳಿಗೆ ರಾಜಕೀಯ ಸಂಬಂಧದ ಆರೋಪ ಹೊರಿಸಿ, ಅದರ ಆಧಾರದ ಮೇಲೆ ಒಕ್ಕೂಟದ ಮಾನ್ಯತೆಯನ್ನು ರದ್ದುಗೊಳಿಸುವುದು ಆಕಸ್ಮಿಕವಲ್ಲ; ಇದೊಂದು ಯೋಜಿತ ಷಡ್ಯಂತ್ರ. ಇದು ಇಡೀ ಭಾರತೀಯ ಟ್ರೇಡ್ ಯೂನಿಯನ್ ಚಳವಳಿಗೆ ದೊಡ್ಡ ಸವಾಲಾಗಿದೆ!

ಕೃಪೆ: ತಿಕ್ಕದೀರ್; ಅನು–ಸಿಚಿ

‘ಬೇಟಿ’ಗಳು ಘನತೆಯಿಂದ ಪ್ರತಿಭಟಿಸಲೂ ಬಿಡರೇಕೆ ‘ಬಚಾವ್ರೋ’ವಾಲಾಗಳು!

ಇದು ಅಮೃತ ಕಾಲ

ಮೇ 4ರ ರಾತ್ರಿ ದಿಲ್ಲಿ ಪೊಲೀಸರು ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಮಹಿಳಾ ಕುಸ್ತಿ ಪಟುಗಳು ಮತ್ತು ಬೆಂಬಲಿಗರ ಮೇಲೆ ದಬ್ಬಾಳಿಕೆ ನಡೆಸಿರುವುದಕ್ಕೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ಹರ್ಯಾಣಕ್ಕೆ ಕೀರ್ತಿ ತಂದಿರುವ ಕ್ರೀಡಾ ಪಟುಗಳು ಕಳೆದ ಏಪ್ರಿಲ್ 23 ರಿಂದ ಹಗಲು ರಾತ್ರಿ ಧರಣಿ ಕುಳಿತಿದ್ದಾರೆ. ಫುಟ್ ಪಾತ್ ಮೇಲೆ ಹಾಸಿಗೆ ಹಾಸಿಕೊಂಡು ಮಲಗುತ್ತಿದ್ದರೂ ಎರಡು–ಮೂರು ದಿನ ಸತತ ಮಳೆಯಿಂದಾಗಿ ನೆಲ, ಹಾಸು ಒದ್ದೆಯಾಗಿದ್ದರಿಂದ ಚಾರ್‌ಪಾಯಿ(ಸರಳ ಮಂಚ)ಗಳನ್ನು ತರಿಸಿಕೊಳ್ಳಬೇಕಾಯಿತು. ದಿಲ್ಲಿ ಪೊಲೀಸರಿಗೆ ಇದನ್ನೂ ಸಹಿಸಲಾಗಲಿಲ್ಲ, ಅವನ್ನು ಒಳಗೆ ತೆಗೆದುಕೊಂಡು ಹೋಗದಂತೆ ತಡೆದರು, ದಬ್ಬಾಳಿಕೆ ನಡೆಸಿದರು, ಮಹಿಳಾ ಪೊಲೀಸರ ಉಪಸ್ಥಿತಿಯಿಲ್ಲದೆ ಇದೆಲ್ಲವನ್ನೂ ಮಾಡಿದರು. ಈ ವೇಳೆ ಇಬ್ಬರು ಕುಸ್ತಿಪಟುಗಳಿಗೂ ಗಾಯಗಳಾಗಿವೆ ಮತ್ತು ಆ ವೇಳೆ ಪೊಲೀಸರು ಪಾನಮತ್ತರಾಗಿದ್ದರು ಎಂದೂ ವರದಿಯಾಗಿದೆ.



ಕೃಪೆ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

ದೆಹಲಿ ಪೊಲೀಸರ ಈ ವರ್ತನೆ ಅತ್ಯಂತ ಖಂಡನೀಯ ಎಂದಿರುವ ಜನವಾದಿ ಮಹಿಳಾ ಸಂಘಟನೆಯ ದಿಲ್ಲಿ ಮತ್ತು ಹರ್ಯಾಣ ರಾಜ್ಯಸಮಿತಿಗಳು ಮುಂಜಾನೆ, ಕುಸ್ತಿಪಟುಗಳನ್ನು ಬೆಂಬಲಿಸಿ ಪ್ರತಿಭಟನೆ ನಡೆಸಿದ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಬೀದಿಗಳಲ್ಲಿ ಅಮಾನುಷವಾಗಿ ಎಳೆದೊಯ್ದು ಬಂಧಿಸಿದ್ದನ್ನು ಕೂಡ ಖಂಡಿಸಿವೆ.

ದಿಲ್ಲಿ ಪೋಲೀಸರು ಎಫ್‌ಐಆರ್ ಹಾಕುವಂತೆ ಮಾಡಲೂ ಸುಪ್ರಿಂ ಕೋರ್ಟ್ ಮೊರೆ ಹೋಗಬೇಕಾಯಿತು. ಕೊನೆಗೂ ಆರೋಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಮೇಲೆ ಜಾಮೀನು ರಹಿತ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ ನಂತರ ಆತನನ್ನು ಬಂಧಿಸುವುದು ದಿಲ್ಲಿ ಪೋಲೀಸರ ಮುಖ್ಯ ಕೆಲಸವಾಗಬೇಕಿತ್ತು, ಅದರ ಬದಲು ನ್ಯಾಯ ಕೊಡಿಸಿ ಎಂದು ಕೇಳುವವರ ಮೇಲೆಯೇ ದಬ್ಬಾಳಿಕೆ ನಡೆಸುವುದು, ಅದೂ ಮಧ್ಯರಾತ್ರಿಯಲ್ಲಿ ಹಲ್ಲೆ ನಡೆಸುವದು ಎಂತಹ ಸಂಸ್ಕೃತಿ ಎಂದು ಪ್ರಶ್ನಿಸಿರುವ ಮಹಿಳಾ ಸಂಘಟನೆಯ ಮುಖಂಡರು ಇಂತಹ ಚೇಷ್ಟೆಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಆರೋಪಿಯ ವಿರುದ್ಧ ಕ್ರಮ ಕೈಗೊಂಡರೆ, ಅವರನ್ನು ಬಂಧಿಸಿದರೆ, ಆಟಗಾರರು ಜಂತರ್ ಮಂತರ್‌ನಲ್ಲಿ ಏಕೆ ಕುಳಿತುಕೊಳ್ಳುತ್ತಾರೆ? ಬೇಟೀ ಬಚಾವ್ರೋ ಎಂಬ ಘೋಷಣೆಯನ್ನು ಕೊಡುವ ಬಿಜೆಪಿ ಸರಕಾರ ನ್ಯಾಯಕ್ಕೆ ಮೊರೆ ಇಟ್ಟಿರುವ ‘ಬೇಟಿ’ಗಳಿಗೆ ರಕ್ಷಣೆ ನೀಡದೆ ಕೇವಲ ಲೈಂಗಿಕ ಶೋಷಣೆಯ ಆರೋಪಿಗಳಿಗೆ ಮಾತ್ರ ರಕ್ಷಣೆ ನೀಡುತ್ತಿದೆ. ಬಹಿರಂಗವಾಗಿ ಲೈಂಗಿಕ ಕಿರುಕುಳ ನೀಡುವವರ ಪರ ನಂತಿರುವುದು ಕಂಡು ಬರುತ್ತಿದೆ.

ಪ್ರತಿ ಸಣ್ಣ ಘಟನೆಗೂ ಟ್ವೀಟ್ ಮಾಡುವ ಪ್ರಧಾನಿ ನರೇಂದ್ರ ಮೋದಿ, ದೇಶಕ್ಕೆ ಕೀರ್ತಿ ತಂದ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದ ಕ್ರೀಡಾಪಟುಗಳ ಮೇಲೆ ಲೈಂಗಿಕ ಕಿರುಕುಳದ ವಿರುದ್ಧ ಮೌನವಾಗಿದ್ದಾರೆ ಎಂದು ಕಟುವಾಗಿ ಟೀಕಿಸಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ದಿಲ್ಲಿ ಮತ್ತು ಹರ್ಯಾಣದ ಮುಖಂಡರು ಆರೋಪಿಗಳಾದ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್‌ರನ್ನು ಬಂಧಿಸಬೇಕು ಮತ್ತು ರಾತ್ರಿ ಕುಸ್ತಿಪಟುಗಳ ಮೇಲೆ ಹಲ್ಲೆ ನಡೆಸಿದ ಪೊಲೀಸರು ಮತ್ತು ಅಧಿಕಾರಿಗಳ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ಕೃಪೆ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

ಈ ಸಂಸದ, ಇದೇ ರೀತಿ ಲೈಂಗಿಕ ಕಿರುಕುಳದ ಆರೋಪದಲ್ಲಿ ಸಿಲುಕಿರುವ ಹರ್ಯಾಣದ ಬಿಜೆಪಿ ಮಂತ್ರಿ ಮತ್ತು ಕೇಂದ್ರ ಸಂಪುಟದಲ್ಲಿರುವ ರೈತರ ಕೊಲೆಯ ಆರೋಪಿಯ ತಂದೆ– ಇವರೆಲ್ಲ ಪ್ರಧಾನ ಮಂತ್ರಿಗಳು ಮೌನವಹಿಸುವಷ್ಟು ಈ ಅಮೃತ ಕಾಲದಲ್ಲಿ ಪ್ರಭಾವಶಾಲಿಗಳಾಗಿ ಬಿಟ್ಟಿದ್ದಾರೆಯೇ ಎಂದೂ ಹಲವರಿಗೆ 56 ಅಂಗುಲದ ಬಗ್ಗೆಯೇ ಅನುಮಾನ ಬರುತ್ತಿದೆ!

ಸತತ ನಾಲ್ಕನೇ ತಿಂಗಳೂ ನಿರುದ್ಯೋಗ ದರದಲ್ಲಿ ಏರಿಕೆ

ಭಾರತದಲ್ಲಿ ನಿರುದ್ಯೋಗದ ದರ ಮಾರ್ಚ್ 2023 ರಲ್ಲಿ 7.8% ಇದ್ದದ್ದು ಏಪ್ರಿಲ್‌ನಲ್ಲಿ 8.11% ಕ್ಕೆ ಏರಿದೆ ಎಂದು ಸಿ.ಎಂ.ಐ.ಇ. ಮೇ 1 ರಂದು ಬಿಡುಗಡೆ ಮಾಡಿದ ಮಾಹಿತಿ ತೋರಿಸಿದೆ. ಇದು ಜನವರಿ ಮತ್ತು ಫೆಬ್ರವರಿಯಲ್ಲಿ 7.45% ಆಗಿತ್ತು. ಅಂದರೆ ನಿರುದ್ಯೋಗ ದರ ಸತತ ನಾಲ್ಕನೇ ತಿಂಗಳಿಗೆ ಏರಿದೆ. ನಗರಪ್ರದೇಶಗಳಲ್ಲಿ ನಿರುದ್ಯೋಗದ ದರ ಏರಿಕೆ ಗ್ರಾಮೀಣ ಪ್ರದೇಶಗಳಿಗಿಂತಲೂ ಹೆಚ್ಚು, 8.51% ದಿಂದ 9.81%ಕ್ಕೆ ಏರಿದೆ, ಗ್ರಾಮೀಣ ಪ್ರದೇಶಗಳಲ್ಲಿ 7.47%ದಿಂದ 7.34% ಕ್ಕೆ ತುಸು ಕಡಿಮೆಯಾಗಿದೆ

ಭಾರತದ ಜನಸಂಖ್ಯೆಯು ಹೆಚ್ಚುತ್ತಿರುವಾಗ ಮತ್ತು ನಿರ್ದಿಷ್ಟವಾಗಿ ದುಡಿಯುವ ವಯೋಗುಂಪಿನ ಸಂಖ್ಯೆಯು ಹೆಚ್ಚುತ್ತಿರುವಾಗ, ಭಾರತದ ಉದ್ಯೋಗಿಗಳ ಸಂಖ್ಯೆಯು ಹೆಚ್ಚಾಗುತ್ತಿಲ್ಲ ಎಂದು ಸಿಎಂಐ.ಇ. ಮುಖ್ಯಸ್ಥರೂ, ಆರ್ಥಿಕ ತಜ್ಞರೂ ಆಗಿರುವ ಮಹೇಶ್ ವ್ಯಾಸ್ ಹೇಳುತ್ತಾರೆ(ದಿ ವೈರ್, ಮೇ 2). ಕಳೆದ ಐದು ವರ್ಷಗಳಲ್ಲಿ ಇದು ಸುಮಾರು 40 ಕೋಟಿಯ ಆಚೀಚೆಯೇ ಉಳಿದಿದೆ.

ಭಾರತದಲ್ಲಿನ ಅಧಿಕೃತ ವ್ಯವಸ್ಥೆಯ ಪ್ರಕಾರ, ನಿರುದ್ಯೋಗಿಗಳು ಎಂದರೆ ಲಭ್ಯವಿದ್ದರೆ ಕೆಲಸ ಮಾಡಲು ಸಿದ್ಧರಿದ್ದರೂ ಉದ್ಯೋಗವಿಲ್ಲದವರು. ಸಿಎಂಐಇ ತನ್ನ ಸರ್ವೆ ಮತ್ತು ಲೆಕ್ಕಾಚಾರಗಳಲ್ಲಿ ಕೆಲಸ ಮಾಡಲು ಸಿದ್ಧರಿರುವವರು ಮತ್ತು ಸಕ್ರಿಯವಾಗಿ ಉದ್ಯೋಗವನ್ನು ಹುಡುಕುತ್ತಿರುವವರು, ಆದರೂ ಕೆಲಸ ಇಲ್ಲದವರು ಎಂದು ಸಣ್ಣ ಮಾರ್ಪಾಡು ಮಾಡಿದೆ. ಕಳೆದ ಕೆಲವು ವರ್ಷಗಳಲ್ಲಿ ಕೆಲಸ ಸಿಗುವ ಆಸೆಯನ್ನೇ ಕಳಕೊಂಡು ಉದ್ಯೋಗ ಅರಸುವುದನ್ನೇ ಬಿಟ್ಟು ಬಿಟ್ಟ ಜನಗಳ ಸಂಖ್ಯೆಯೂ ಗಮನಾರ್ಹವಾಗುತ್ತಿದೆ ಎಂದೂ ಸಿಎಂಐಇ ಸರ್ವೆಗಳಿಂದ ತಿಳಿದು ಬರುತ್ತಿದೆ.



ಕೃಪೆ: ಪಂಜು ಗಂಗೊಳ್ಳಿ, ಫೇಸ್‌ಬುಕ್

15–60 ವಯೋಗುಂಪನ್ನು ದುಡಿಮೆಯ ವಯೋಗುಂಪು ಎಂದು ಪರಿಗಣಿಸಲಾಗುತ್ತದೆ. ಭಾರತದಲ್ಲಿ ಈ ವಯೋಗುಂಪಿನ 40% ಮಾತ್ರ ಉದ್ಯೋಗ ಮಾಡಲು ಮುಂದೆ ಬರುತ್ತಿದ್ದಾರೆ, ಉಳಿದ 60% ಅವರ ಮೇಲೆ ಅವಲಂಬಿಸಿದ್ದಾರೆ ಎಂಬುದನ್ನು ಗಮನಿಸಬೇಕು ಎಂದೂ ವ್ಯಾಸ್ ಹೇಳುತ್ತಾರೆ.

ಅಂತರ್ರಾಷ್ಟ್ರೀಯ ಶ್ರಮ ಸಂಘಟನೆ, ಐಎಲ್‌ಒ ಪ್ರಕಾರ ಬದುಕಿನಲ್ಲಿ ಘನತೆ ಕೊಡುವ ಕೆಲಸವನ್ನಷ್ಟೇ ಉದ್ಯೋಗ ಎನ್ನಬೇಕು. ಸಿಎಂಐಇ ತನ್ನ ಸರ್ವೆಗಳಲ್ಲಿ ಘನತೆಯ ಉದ್ಯೋಗ, ಘನತೆ ನೀಡದ ಉದ್ಯೋಗ ಎಂದೇನೂ ಪ್ರತ್ಯೇಕಿಸುವುದಿಲ್ಲ. ಆದ್ದರಿಂದ ವಾಸ್ತವವಾಗಿ ಭಾರತದಲ್ಲಿನ ನಿರುದ್ಯೋಗ ಪ್ರಮಾಣ ಇನ್ನೂ ಹೆಚ್ಚಿದೆ ಎಂದು ಇತರ ಆರ್ಥಿಕ ತಜ್ಞರು ಅಭಿಪ್ರಾಯ ಪಡುತ್ತಾರೆ.

ಇನ್ನು ಉದ್ಯೋಗಗಳ ಗುಣಮಟ್ಟದ ಬಗ್ಗೆ ಹೇಳುವುದಾದರೆ, ಹೆಚ್ಚಿನವು ಬಹಳ ಕಡಿಮೆ ಆದಾಯ ನೀಡುವಂತವುಗಳು, ಬಹುಪಾಲು ಅಸಂಘಟಿತ ವಲಯದಲ್ಲಿನ ಅನೌಪಚಾರಿಕ ವ್ಯವಸ್ಥೆಗಳಷ್ಟೇ ಎಂದು ಸಿಎಂಐಇ ನ ಮಹೇಶ್ ವ್ಯಾಸ್ ಅವರೂ ಹೇಳುತ್ತಾರೆ.

80% ಕ್ಕಿಂತ ಹೆಚ್ಚು ಕಾರ್ಮಿಕರು ಅನೌಪಚಾರಿಕ ವಲಯದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಇದು ಇತ್ತೀಚಿನ ವರ್ಷಗಳಲ್ಲಿ ಮೂರು ಪ್ರಮುಖ ಪ್ರತಿಕೂಲ ಬದಲಾವಣೆಗಳ ಪರಿಣಾಮಗಳನ್ನು ಅನುಭವಿಸಿದ ವಲಯವಾಗಿದೆ– ಅವೆಂದರೆ, ನೋಟು ರದ್ಧತಿ, ಜಿಎಸ್‌ಟಿ ಮತ್ತು ಲಾಕ್‌ಡೌನ್‌ಗಳು. ಇದರಿಂದಾಗಿ ಸುಮಾರು ಒಂದು ಕೋಟಿ ಉದ್ಯೋಗಗಳು ನಾಶವಾದವು ಎಂದು ಅಂದಾಜು ಮಾಡಲಾಗಿದೆ.

ಇನ್ನೊಂದೆಡೆಯಲ್ಲಿ ಔಪಚಾರಿಕ ವಲಯದಲ್ಲಿ ಉದ್ಯೋಗಗಳು ಹೆಚ್ಚುತ್ತಿಲ್ಲ. ಬದಲಾಗಿ ಸರಕಾರೀ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡುತ್ತಿಲ್ಲ. ಉದಾಹರಣೆಗೆ, ಡಿಸೆಂಬರ್ 1, 2022 ರ ವೇಳೆಗೆ ರೈಲ್ವೇಯಲ್ಲಿ 3.12 ಲಕ್ಷ ಖಾಲಿ ಹುದ್ದೆಗಳಿದ್ದವು, ಅವುಗಳನ್ನು ಭರ್ತಿ ಮಾಡುತ್ತಿಲ್ಲ. ಇದು ರೈಲ್ವೆ ಇಲಾಖೆಯ ಕಾರ್ಯನಿರ್ವಹಣೆಯ ಮೇಲೂ ಪರಿಣಾಮ ಬೀರುತ್ತಿದೆ ಎಂದು ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ. ರಕ್ಷಣಾ ಕ್ಷೇತ್ರದಲ್ಲೂ ನೇಮಕಾತಿಗಳ ಕಡಿತವಾಗಿದ್ದು ಅಗ್ನಿಪಥ್ ಯೋಜನೆಯ ವಿರುದ್ಧ ಯುವಜನರು ಪ್ರತಿಭಟನೆ ನಡೆಸಿದರುವುದು ಯುವಕರಲ್ಲಿ ಉದ್ಯೋಗ ಸಿಗದ ಹತಾಶೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಪರಿಣಿತರು ಹೇಳುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿಯೂ ಜನಗಳಿಗೆ ಸ್ವಲ್ಪವಾದರೂ ಪರಿಹಾರ ಕೊಡುತ್ತಿರುವ ಉದ್ಯೋಗ ಖಾತ್ರಿ ಯೋಜನೆಗೂ ಸರಕಾರ ಬಜೆಟ್ ನೀಡಿಕೆಯಲ್ಲಿ ಗಮನಾರ್ಹ ಕಡಿತ ಮಾಡಿರುವುದರ ಪರಿಣಾಮದ ಬಗ್ಗೆ ಬಗ್ಗೆ ಈಗಾಗಲೇ ಆರ್ಥಿಕ ತಜ್ಞರು ಟಿಪ್ಪಣಿ ಮಾಡಿದ್ದಾರೆ.

ಈ ಬಾರಿ ಚುನಾವಣಾ ಬಾಂಡ್‌ಗಳ ಮಾರಾಟದಲ್ಲಿ 9 ಪಟ್ಟು ಏರಿಕೆ

ಕರ್ನಾಟಕ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಏಪ್ರಿಲ್ 3 ರಿಂದ ಏಪ್ರಿಲ್ 12 ರವರೆಗೆ ವಂತಿಗೆಗೆ ತೆರೆದಿದ್ದ ಚುನಾವಣಾ ಬಾಂಡ್ ಮಾರಾಟದ 26 ನೇ ಕಂತಿನಲ್ಲಿ ರೂ 970.50 ಕೋಟಿ ಮೌಲ್ಯದ ಒಟ್ಟು 1,470 ಚುನಾವಣಾ ಬಾಂಡ್‌ಗಳು ಮಾರಾಟವಾಗಿವೆ ಎಂದು ಆರ್‌ಟಿಐ ಉತ್ತರದಲ್ಲಿ ಪ್ರಖ್ಯಾತ ಆರ್‌ಟಿಐ ಕಾರ್ಯಕರ್ತ ಕಮೋಡೋರ್(ನಿವೃತ್ತ) ಲೋಕೇಶ್ ಬತ್ರಾರಿಗೆ ಎಸ್‌ಬಿಐ ತಿಳಿಸಿರುವುದಾಗಿ ವರದಿಯಾಗಿದೆ.

ಈ ಚುನಾವಣಾ ಬಾಂಡ್ ಸ್ಕೀಮ್ 2018ರಲ್ಲಿ ಬಂದಿದ್ದು, ಕರ್ನಾಟಕದ ಹಿಂದಿನ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ಈ ಸ್ಕೀಮಿನ ಎರಡನೆಯ ಕಂತು ಮಾರಾಟಕ್ಕೆ ಬಂದಿತ್ತು. ಅದರಲ್ಲಿ 114.90 ಕೋಟಿ ಮೌಲ್ಯದ 256 ಬಾಂಡ್‌ಗಳ ಮಾರಾಟವಾಗಿತ್ತು. ಅಂದರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ‘ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವ ಸ್ಕೀಮ್’ ಎಂದು ವರ್ಣಿಸಿರುವ ಇದು ಈ ಬಾರಿ 9 ಪಟ್ಟು ಹೆಚ್ಚು ಹಣವನ್ನು ಆಕರ್ಷಿಸಿದೆ. ಏಕೆ, ಯಾರಿಂದ ಮತ್ತು ಯಾರಿಗೆ ಎಂದು ಬೇರೆ ಹೇಳಬೇಕಾಗಿಲ್ಲ. ಈ ಸ್ಕೀಮನ್ನು ರದ್ದು ಮಾಡಬೇಕೆಂದು ಕೋರಿ ಸಲ್ಲಿಸಿರುವ ಅರ್ಜಿ ಸುಪ್ರಿಂ ಕೋರ್ಟಿನ ಮುಂದೆ ಈಗಲೂ ಬಾಕಿ ಪಟ್ಟಿಯಲ್ಲಿದೆ.

ಈ ಬಾರಿ, ಈ ಬಾಂಡ್‌ಗಳು ಹೈದರಾಬಾದ್‌ನ ಎಸ್‌ಬಿಐ ಶಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಿವೆ, ರೂ 335.30 ಕೋಟಿ ಅಥವಾ 34% ದಷ್ಟು.. ಇದರ ನಂತರದ ಸ್ಥಾನಗಳು ಕೋಲ್ಕತ್ತಾ (ರೂ. 197.40 ಕೋಟಿ), ಮುಂಬೈ (ರೂ. 169.37 ಕೋಟಿ), ಚೆನ್ನೈ (ರೂ. 122 ಕೋಟಿ) ಮತ್ತು ನವದೆಹಲಿ (ರೂ. 55.65 ಕೋಟಿ).

ಮಾರಾಟವಾದ ಒಟ್ಟು ಬಾಂಡ್‌ಗಳಲ್ಲಿ ಸುಮಾರು 58% ಎಸ್‌ಬಿಐನ ನವದೆಹಲಿ ಶಾಖೆಯಲ್ಲಿ (ರೂ 565.79 ಕೋಟಿ) ನಗದಾಗಿವೆ ಎಂದು ವರದಿಯಾಗಿದೆ.

2018ರಲ್ಲಿ ಈ ಸ್ಕೀಮ್ ಜಾರಿಗೆ ಬಂದಂದಿನಿಂದ ಈ ಎಪ್ರಿಲ್ ವರೆಗೆ 5ವರ್ಷಗಳಲ್ಲಿ ಒಟ್ಟು ರೂ.12979 ಕೋಟಿ ಮೌಲ್ಯದ ಚುನಾವಣಾ ಬಾಂಡ್‌ಗಳು ಮಾರಾಟವಾಗಿವೆಯಂತೆ. ಇವುಗಳಲ್ಲಿ 94.2% 1ಕೋಟಿರೂ.ಗಿಂತ ಹೆಚ್ಚಿನ ಮೌಲ್ಯದ ಬಾಂಡುಗಳು, ಅಂದರೆ ಭಾರೀ ಶ್ರೀಮಂತರು/ಕಾರ್ಪೊರೇಟ್‌ಗಳು ತಮ್ಮ ‘ಪ್ರಿಯ ರಾಜಕೀಯ’ಕ್ಕಾಗಿ ಖರೀದಿಸಿದವುಗಳು!

ಡಾಲರ್ ಆಧಿಪತ್ಯಕ್ಕೆ ಬೆದರಿಕೆ ಎಂದರೆ ಬಂಡವಾಳಶಾಹೀ ಪ್ರಾಬಲ್ಯಕ್ಕೆ ಬೆದರಿಕೆ





ಅಮೆರಿಕಾ ತನ್ನ ಡಾಲರ್ ಬಲದಿಂದ ಹತ್ತು-ಹಲವು ದೇಶಗಳ ಮೇಲೆ ನಿರ್ಬಂಧಗಳನ್ನು ಹೇರುತ್ತಿರುವ ಒಂದು ಪರಿಣಾಮವೆಂದರೆ ಡಾಲರಿನ ಪ್ರಾಬಲ್ಯವೇ ದುರ್ಬಲಗೊಳ್ಳುವಂತಾಗುವುದು. ನಿರ್ಬಂಧಗಳಿಗೆ ಒಳಗಾಗುವ ದೇಶಗಳು ಒಂದೊಂದಾಗಿ ಜತೆಗೂಡಿ ಪರ್ಯಾಯ ಕರೆನ್ಸಿ ವ್ಯವಸ್ಥೆಯನ್ನು ರೂಪಿಸಲು ಪ್ರಯತ್ನಿಸುವುದರ ಪರಿಣಾಮ ಇದು. ವರ್ತಮಾನದಲ್ಲಿ ನಾವು ನೋಡುತ್ತಿರುವ ಇಂತಹ ಪ್ರಯತ್ನಗಳು ಮುಂದುವರೆದ ಬಂಡವಾಳಶಾಹಿ ದೇಶಗಳ ಪ್ರಾಬಲ್ಯದ ಬುಡಕ್ಕೇ ಪೆಟ್ಟು ಕೊಡುತ್ತವೆ. ಹಾಗಾಗಿ ಅಮೆರಿಕಾ ಮಾತ್ರವಲ್ಲದೆ ಇಡೀ ಮೆಟ್ರೋಪಾಲಿಟನ್ ಬಂಡವಾಳಶಾಹಿ ಜಗತ್ತು ಇದನ್ನು ತಡೆಯಲು ಮಿತಿಮೀರಿದ ಪ್ರಯತ್ನಗಳನ್ನು ಮಾಡಲಿದೆ. ಈ ಪ್ರಯತ್ನಗಳು ಬಂಡವಾಳಶಾಹಿಯ ಪ್ರಸಕ್ತ ಬಿಕ್ಕಟ್ಟಿನ ಸ್ವರೂಪವನ್ನು ಪ್ರಕಟಪಡಿಸುತ್ತವೆ. ಆ ಕಾರಣದಿಂದಾಗಿಯೇ ಇದರ ಇನ್ನೊಂದು ಪರಿಣಾಮವೆಂದರೆ ಬಂಡವಾಳಶಾಹಿಯು ತನ್ನ ದುಷ್ಟತನದ ವಿಶ್ವರೂಪವನ್ನು ತೋರಿಸುವ ಸಾಧ್ಯತೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**

ಅಂತಾರಾಷ್ಟ್ರೀಯ ವ್ಯಾಪಾರ-ವಹಿವಾಟುಗಳು ಡಾಲರ್ ಕರೆನ್ಸಿಯಲ್ಲೇ ನಡೆಯುವ ಕಾರಣದಿಂದ ಮತ್ತು ಎಲ್ಲ ದೇಶಗಳ ಕೇಂದ್ರ ಬ್ಯಾಂಕುಗಳೂ ತಮ್ಮ ಮೀಸಲು ಸಂಗ್ರಹವನ್ನು ಡಾಲರ್ ಕರೆನ್ಸಿಯಲ್ಲೇ ಇಟ್ಟುಕೊಳ್ಳುವ ರೂಢಿಯಿಂದಾಗಿ ಡಾಲರನ್ನು ವಿಶ್ವದ ಮೀಸಲು ಕರೆನ್ಸಿಯಾಗಿ ಒಪ್ಪಿಕೊಳ್ಳಲಾಗಿದೆ. ಹಾಗಾಗಿ, ಡಾಲರ್ ಒಂದು ರೀತಿಯ ಪ್ರಾಮುಖ್ಯತೆಯನ್ನು ಹೊಂದಿದೆ. ಡಾಲರ್ ಹೊಂದಿರುವ ಈ ಪ್ರಾಮುಖ್ಯತೆಯನ್ನು ದುರ್ಬಳಕೆ ಮಾಡಿಕೊಂಡು ಅಮೆರಿಕಾ ತನಗೆ ಸರಿಹೊಂದದ ದೇಶಗಳ ಮೇಲೆ ನಿರ್ಬಂಧಗಳನ್ನು ಹೇರುತ್ತಾ ಬಂದಿದೆ. ನಿರ್ಬಂಧಗಳಿಗೆ ಒಳಗಾದ ದೇಶಗಳು ಪರ್ಯಾಯ ವ್ಯವಸ್ಥೆಗಳನ್ನು ರೂಪಿಸಿಕೊಳ್ಳುತ್ತವೆ. ಈ ಪರ್ಯಾಯ ವ್ಯವಸ್ಥೆಗಳು ಡಾಲರ್ ಪ್ರಾಬಲ್ಯವನ್ನು ದುರ್ಬಲಗೊಳಿಸುತ್ತವೆ ಎಂಬುದು ಅನೇಕ ಮಂದಿಗೆ ಮನದಟ್ಟಾಗಿದೆ ಮತ್ತು ಅದನ್ನು ಇತ್ತೀಚಿನ ದಿನಗಳಲ್ಲಿ ಅವರು ಬಹಿರಂಗವಾಗಿ ವ್ಯಕ್ತಪಡಿಸಿಯೂ ಆಗಿದೆ. ತನಗೆ ಸರಿಹೊಂದದ ದೇಶಗಳ ಮೇಲೆ ನಿರ್ಬಂಧಗಳನ್ನು ಹೇರುವ ಕ್ರಮವು ಡಾಲರ್ ಪಡೆದಿರುವ ವಿಶ್ವದ ಮೀಸಲು ಕರೆನ್ಸಿಯ ಸ್ಥಾನವನ್ನು ಗಂಡಾಂತರಕ್ಕೆ ಒಳಪಡಿಸುತ್ತದೆ ಎಂಬುದನ್ನು ಅಮೆರಿಕಾದ ಹಣಕಾಸು ಸಚಿವೆ ಜಾನೆಟ್ ಯೆಲೆನ್ ಅಂತಿಮವಾಗಿ ಒಪ್ಪಿಕೊಂಡಿದ್ದಾರೆ. ಆದರೆ, ಡಜನ್‌ಗಟ್ಟಲೆ ದೇಶಗಳನ್ನು ಗುರಿಯಾಗಿಸಿಕೊಂಡ ಅಮೆರಿಕವು ಅವುಗಳ ಮೇಲೆ ನಿರ್ಬಂಧಗಳನ್ನು ಹೇರುತ್ತಿರುವುದನ್ನು ನಾವು ಇಂದಿನ ದಿನಗಳಲ್ಲಿ ನೋಡುತ್ತಿದ್ದೇವೆ. ನಿರ್ಬಂಧಗಳ ಪರಿಣಾಮವಾಗಿ ಸಂಕಷ್ಟಗಳಿಗೆ ಒಳಗಾದ ಈ ದೇಶಗಳು ಒಗ್ಗೂಡುತ್ತವೆ ಮತ್ತು ಡಾಲರ್ ಕರೆನ್ಸಿಗೆ ಒಂದು ಪರ್ಯಾಯವನ್ನು ರೂಪಿಸಿಕೊಳ್ಳುತ್ತವೆ. ಈ ಪರ್ಯಾಯ ಕರೆನ್ಸಿ ವ್ಯವಸ್ಥೆಗಳ ಪರಿಣಾಮವಾಗಿ ಡಾಲರ್ ಪ್ರಾಬಲ್ಯದಿಂದಾಗಿ ಅಮೆರಿಕವು ವಿಶ್ವದ ಮೇಲೆ ಹೊಂದಿರುವ ಪ್ರಾಬಲ ದುರ್ಬಲಗೊಳ್ಳುವಂತಾಗುತ್ತದೆ.

ವಿಪರ್ಯಾಸವೆಂದರೆ, ವಿಶ್ವದ ಮೀಸಲು ಕರೆನ್ಸಿಯ ಸ್ಥಾನ ಪಡೆದಿರುವ ಡಾಲರ್, ನಿರ್ಬಂಧಗಳ ಪರಿಣಾಮವಾಗಿ ಗಂಡಾಂತರಕ್ಕೆ ಒಳಗಾಗಿದೆ ಎಂಬುದನ್ನು ಜಾನೆಟ್ ಯೆಲೆನ್ ಒಪ್ಪಿಕೊಂಡರೂ ಸಹ, ಅಮೆರಿಕವು ವರ್ತಮಾನದಲ್ಲಿ ವಿಧಿಸುತ್ತಿರುವ ನಿರ್ಬಂಧಗಳ ಪರವಾಗಿ ತಾವು ನಿಲ್ಲುವುದಾಗಿ



ಘೋಷಿಸಿದರು. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಬೈಡನ್ ಆಡಳಿತದ ಹಿರಿಯ ಸದಸ್ಯರೊಬ್ಬರಿಂದ ಬೇರೆ ಏನನ್ನು ತಾನೇ ನಿರೀಕ್ಷಿಸಬಹುದು. ಅಮೆರಿಕಾ ಇಷ್ಟಪಡದ ನೀತಿಗಳನ್ನು ಅನುಸರಿಸುವ ದೇಶಗಳ ವಿರುದ್ಧ ನಿರ್ಬಂಧಗಳನ್ನು ವಿಧಿಸಿದಾಗ ಅವು ಉದ್ದೇಶಿತ ದೇಶಗಳ ಜನರಿಗೆ ಹೆಚ್ಚಿನ ಕಷ್ಟಗಳನ್ನು ತರುತ್ತವೆ ಎಂಬುದನ್ನು ಮತ್ತು ಅಂತಹ ನೀತಿಗಳನ್ನು ಬದಲಿಸುವಲ್ಲಿ ನಿರ್ಬಂಧಗಳು ಪರಿಣಾಮಕಾರಿಯಾಗುತ್ತಿಲ್ಲ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಇರಾನಿನ ಉದಾಹರಣೆಯನ್ನೂ ಅವರು ಉಲ್ಲೇಖಿಸುತ್ತಾರೆ: ಅನೇಕ ವರ್ಷಗಳ ನಿರ್ಬಂಧಗಳಿಂದಾಗಿ ಇರಾನಿನ ಜನತೆ ಬಹಳ ತೊಂದರೆಗಳನ್ನು ಅನುಭವಿಸಿದರೂ ಸಹ, ಅಮೆರಿಕಾ ಇಷ್ಟಪಡದ ನೀತಿಗಳನ್ನು ಇರಾನಿನ ಸರ್ಕಾರ ಬದಲಿಸಲಿಲ್ಲ. ಈ ಬಗ್ಗೆ ಅವರು ಹೇಳಿದ ಮಾತುಗಳು ಹೀಗಿವೆ: "ಇರಾನ್ ಮೇಲೆ ಹೇರಿದ ನಮ್ಮ ನಿರ್ಬಂಧಗಳು ಆ ದೇಶದಲ್ಲಿ ನಿಜಕ್ಕೂ ಆರ್ಥಿಕ ಬಿಕ್ಕಟ್ಟನ್ನು ಸೃಷ್ಟಿಸಿವೆ. ನಿರ್ಬಂಧಗಳಿಂದಾಗಿ ಇರಾನ್ ಆರ್ಥಿಕವಾಗಿ ಬಹಳವಾಗಿ ಬಳಲುತ್ತಿದೆ... ಅದು ಅದರ ವರ್ತನೆಯಲ್ಲಿ ಬದಲಾವಣೆಯನ್ನು ತಂದಿದೆಯೇ? ಉತ್ತರ ನಾವು ಇಷ್ಟಪಡಬಹುದಾದ ರೀತಿಯಲ್ಲಿ ಇಲ್ಲ". ಈ ವಾಸ್ತವಾಂಶದ ಅರಿವಿದ್ದರೂ ಸಹ, ಅಮೆರಿಕಾ ವಿಧಿಸುವ ನಿರ್ಬಂಧಗಳನ್ನು ಬೆಂಬಲಿಸುವಲ್ಲಿ ಜಾನೆಟ್ ಯೆಲೆನ್ ಅವರಿಗೆ ಯಾವ ಅಳುಕೂ ಇಲ್ಲ. ಅದಕ್ಕೆ ತದ್ವಿರುದ್ಧವಾಗಿ, ಇರಾನಿನ ವಿಷಯದಲ್ಲಿ, ನಿರ್ಬಂಧಗಳನ್ನು ಇನ್ನಷ್ಟು ಬಲಪಡಿಸುವ ಮಾರ್ಗಗಳನ್ನು ಅಮೆರಿಕಾ ಹುಡುಕುತ್ತಿದೆ ಎಂದು ಅವರು ಅನುಮೋದನಾ ಪೂರ್ವಕವಾಗಿ ಹೇಳುತ್ತಾರೆ.

ನಿರ್ಬಂಧಗಳಿಗೆ ಗುರಿಯಾಗಿರುವ ದೇಶಗಳು ಅಮೆರಿಕಾದ ಪ್ರಾಬಲದ ವಿಶ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಪರ್ಯಾಯ ವ್ಯವಸ್ಥೆಗಳನ್ನು ಮಾಡುತ್ತವೆ ಎಂಬ ಅಂಶವು ಈಗ ನಿಚ್ಚಳವಾಗಿದೆ. ನಿರ್ಬಂಧಗಳಿಗೆ ಗುರಿಯಾಗಿರುವ ರಷ್ಯಾವು, ಸೋವಿಯತ್ ಒಕ್ಕೂಟವು ಹಿಂದಿನ ದಿನಗಳಲ್ಲಿ ಹೊಂದಿದ್ದ ರೀತಿಯ ದ್ವಿಪಕ್ಷೀಯ ವ್ಯಾಪಾರ ವ್ಯವಸ್ಥೆಯನ್ನು ಹಲವಾರು ದೇಶಗಳೊಂದಿಗೆ ಮರು-ಸ್ಥಾಪಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಈ ದ್ವಿಪಕ್ಷೀಯ ವ್ಯವಸ್ಥೆಯಡಿಯಲ್ಲಿ ವ್ಯಾಪಾರವನ್ನು, ಡಾಲರ್ ಬದಲಿಗೆ, ರೂಬಲ್ ಮತ್ತು ಸಂಬಂಧಿಸಿದ ದೇಶದ ಕರೆನ್ಸಿಯ ಮೂಲಕ ನಡೆಸಲಾಗುತ್ತದೆ. ಈ ಎರಡು ಕರೆನ್ಸಿಗಳ ವಿನಿಮಯ ದರವು ಡಾಲರ್ ಬದಲಾಗಿ ನಿಗದಿಪಡಿಸಿದ ಸ್ಥಿರ ಮಟ್ಟದಲೇ ಉಳಿಯುತ್ತದೆ.

ಈ ಏರ್ಪಾಟು ಏನನ್ನು ಮಾಡುತ್ತದೆ ಎಂದರೆ, ವಿಶ್ವ ವ್ಯಾಪಾರದ ಒಂದಿಷ್ಟು ಭಾಗದ ಮೇಲೆ ಹಣ ಚಲಾವಣೆಯ ಮಾಧ್ಯಮವಾಗಿದ್ದ ಡಾಲರನ್ನು ಅದು ನಿರ್ವಹಿಸುತ್ತಿದ್ದ ಪಾತ್ರದಿಂದ ತೆಗೆದುಹಾಕುತ್ತದೆ. ಇದು ಡಾಲರ್‌ನ ಪ್ರಾಬಲ್ಯಕ್ಕೆ ಅಡ್ಡಿಯಾಗುತ್ತದೆ. ವಿಶ್ವ ವ್ಯಾಪಾರ-ವಹಿವಾಟುಗಳನ್ನು ಲೆಕ್ಕ ಹಾಕುವ ಒಂದು ಘಟಕವಾಗಿ ಡಾಲರ್ ವಹಿಸುತ್ತಿದ್ದ ಪಾತ್ರವು, ಅಂದರೆ, ಬೆಲೆಗಳನ್ನು ಡಾಲರ್‌ಗಳಲ್ಲಿ ನಿರೂಪಿಸಲಾಗುತ್ತದೆ ಎಂಬ ಅಂಶವು ಯಾವುದೇ ಮಹತ್ವವನ್ನೂ ಹೊಂದಿಲ್ಲ. ಡಾಲರ್‌ನ ಆಧಿಪತ್ಯಕ್ಕೆ ಅದು ಆಧಾರವಾಗುವುದಿಲ್ಲ. ಡಾಲರ್‌ಗೆ ಒಂದು ವಿಶಿಷ್ಟ ಸ್ಥಾನವನ್ನು ಒದಗಿಸಿರುವುದು ವ್ಯಾಪಾರ-ವಹಿವಾಟುಗಳನ್ನು ನಡೆಸಲು ಡಾಲರ್‌ಗಳು ಬೇಕಾಗುತ್ತದೆ ಎಂಬ ಅಂಶದಿಂದಾಗಿ.

ನಿಜ, ಡಾಲರ್, ಸಂಪತ್ತನ್ನು ಹಿಡಿದಿಟ್ಟುಕೊಳ್ಳುವ ರೂಪವನ್ನು ಹೊಂದಿದೆ. ಡಾಲರಿನ ಪಾತ್ರವು ಉದ್ಭವಿಸುವುದು ಅದು ಹಣ ಚಲಾವಣೆಯ ಮಾಧ್ಯಮವಾಗುವುದರಿಂದ. ಸರಕುಗಳು ಒಂದು ಮೌಲ್ಯವನ್ನು ಹೊಂದಿರುತ್ತವೆ. ಆದರೆ, ಡಾಲರ್ ಅಂತಹ ಯಾವುದೇ ಮೌಲ್ಯವನ್ನೂ ಹೊಂದಿರುವುದಿಲ್ಲ. ಏಕೆಂದರೆ ಅದನ್ನು ಉತ್ಪಾದಿಸಲು(ಮುದ್ರಿಸಲು) ತಗಲುವ ವೆಚ್ಚವು ಅತ್ಯಲ್ಪವೇ. ಆದರೆ, ಡಾಲರಿಗೆ ಒಂದು ಮೌಲ್ಯ ಬರುವುದು ಅದನ್ನು ಯಾವುದೋ ಸರಕಿಗೆ



ಎದುರಾಗಿ ನಿಗದಿಮಾಡಲ್ಪಟ್ಟಿರುವುದರಿಂದ ಮತ್ತು ಅದನ್ನು ಹಣ ಚಲಾವಣೆಯ ಮಾಧ್ಯಮವಾಗಿ ಬಳಸಿದಾಗ ಡಾಲರ್‌ನ ಆ ಮೌಲ್ಯವು ದೃಢೀಕರಿಸಲ್ಪಡುವುದರಿಂದ. ಯಾವುದೇ ರೀತಿಯಲ್ಲಿ ಡಾಲರಿನ ಈ ಪಾತ್ರವು ಇಲ್ಲದಂತಾದರೆ, ಚಲಾವಣೆಯ ಮಾಧ್ಯಮವಾಗಿ ಡಾಲರ್ ನಿರ್ವಹಿಸುವ ಪಾತ್ರವನ್ನು ಬೇರೊಂದು ಕರೆನ್ಸಿಯು ನಿರ್ವಹಿಸಿದಾಗ, ಡಾಲರ್‌ನ ಪ್ರಾಬಲ್ಯವು ದುರ್ಬಲಗೊಳ್ಳುತ್ತದೆ. ಹೆಚ್ಚಿನ ಸಂಖ್ಯೆಯ ದೇಶಗಳ ಮೇಲೆ ನಿರ್ಬಂಧಗಳನ್ನು ವಿಧಿಸಿದಾಗ, ಆ ದೇಶಗಳು ತಮ್ಮ ವ್ಯವಹಾರ-ವಹಿವಾಟುಗಳಿಗಾಗಿ ಪರ್ಯಾಯ ಏರ್ಪಾಟುಗಳನ್ನು ಮಾಡಿಕೊಳ್ಳುತ್ತವೆ. ಈ ವಿದ್ಯಮಾನವು ಸಂಭವಿಸಿದಾಗ ಡಾಲರ್‌ನ ಪ್ರಾಬಲ್ಯವು ದುರ್ಬಲಗೊಳ್ಳುವ ಭಯ ಸಹಜವೇ.

ಡಾಲರನ್ನು ಅದರ ಆಧಿಪತ್ಯದಿಂದ ಉಚ್ಚಾಟಿಸಲು ನಿರ್ಬಂಧಗಳು ಮಾತ್ರವೇ ಕಾರಣವಲ್ಲ. ಡಾಲರ್ ಆಧಿಪತ್ಯದಿಂದ ಹೊರಬರಲು ಬಯಸುವ ಅಥವಾ ತಮ್ಮ ವ್ಯಾಪಾರದ ಅವಕಾಶಗಳನ್ನು ವಿಸ್ತರಿಸಲು ಬಯಸುವ ಅನೇಕ ದೇಶಗಳು, ಚಲಾವಣೆಯ ಮಾಧ್ಯಮವಾಗಿ ಡಾಲರನ್ನು ಹೊರಗಿಡುವ ವ್ಯವಸ್ಥೆಯನ್ನು ಸ್ವಯಂಪ್ರೇರಣೆಯಿಂದ ಮಾಡಿಕೊಳ್ಳಬಹುದು. ಸೋವಿಯತ್ ಒಕ್ಕೂಟದ ದಿನಗಳಲ್ಲಿ ಭಾರತವು ಸೋವಿಯತ್ ಒಕ್ಕೂಟದೊಂದಿಗೆ ಮಾಡಿಕೊಂಡ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವು ಯಾವುದೇ ನಿರ್ಬಂಧಗಳ ಕಾರಣದಿಂದಾಗಿ ಏರ್ಪಟ್ಟಿರಲಿಲ್ಲ ಮತ್ತು ಡಾಲರ್-ಪ್ರಾಬಲ್ಯದಿಂದ ತಪ್ಪಿಸಿಕೊಳ್ಳುವ ಪ್ರಮೇಯವೂ ಆಗ ಇರಲಿಲ್ಲ. ಡಾಲರ್-ಪ್ರಾಬಲ್ಯವಿದ್ದ ಸನ್ನಿವೇಶದಲ್ಲೂ ಸಾಧ್ಯವಿರುವಷ್ಟು ವ್ಯಾಪಾರ-ವಾಣಿಜ್ಯವನ್ನು ವಿಸ್ತರಿಸಿಕೊಳ್ಳುವ ಆಕಾಂಕ್ಷೆಯೇ ಈ ದ್ವಿಪಕ್ಷೀಯ ಒಪ್ಪಂದಗಳಿಗೆ ಕಾರಣವಾಗಿತ್ತು. ಡಾಲರ್ ಪ್ರಾಬಲ್ಯಕ್ಕೆ ಯಾವುದೇ ಸಂಭಾವ್ಯ ಸವಾಲುಗಳು ಎದುರಾಗದಂತೆ ನೋಡಿಕೊಳ್ಳುವ ಸಲುವಾಗಿ ಅಂತಹ ದ್ವಿಪಕ್ಷೀಯ ಒಪ್ಪಂದಗಳ ವಿರುದ್ಧವಾಗಿ ನವ-ಉದಾರವಾದಿ ಸಿದ್ಧಾಂತಿಗಳು ಒಂದು ಅವಿರತ ಸೈದ್ಧಾಂತಿಕ ಸಮರವನ್ನೇ ಸಾರಿದರು. ಅವರು ತಮ್ಮ ಸೈದ್ಧಾಂತಿಕ ಕಾರ್ಯಸೂಚಿಯನ್ನು ಪಾಲಿಸಿದರು. ಆದರೆ, ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು ಯಾವ ಸಿದ್ಧಾಂತವನ್ನೂ ಆಧರಿಸಿರಲಿಲ್ಲ. ಈಗಲೂ ಸಹ, ಅಮೆರಿಕದ ಯಾವುದೇ ನಿರ್ಬಂಧಗಳಿಗೆ ಒಳಪಡದ ಚೀನಾ ಮತ್ತು ಬ್ರೆಜಿಲ್ ದೇಶಗಳು ತಮ್ಮ ನಡುವಿನ ವ್ಯಾಪಾರವನ್ನು ತಮ್ಮದೇ ಕರೆನ್ಸಿಯಲ್ಲಿ ನಡೆಸುವ ವ್ಯವಸ್ಥೆಯನ್ನು ರೂಪಿಸಿಕೊಂಡಿವೆ.

ಅಂತೆಯೇ, ಬ್ರಿಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಇತ್ತೀಚೆಗೆ ನೇಮಕಗೊಂಡಿರುವ ಬ್ರೆಜಿಲ್‌ನ ಮಾಜಿ ಅಧ್ಯಕ್ಷೆ ದಿಲ್ಮಾ ರೌಸೆಫ್, 2022 ಮತ್ತು 2026ರ ನಡುವೆ, ಸದರಿ ಬ್ಯಾಂಕ್ ತನ್ನ ಸದಸ್ಯ ದೇಶಗಳಿಗೆ ನೀಡುವ ಸಾಲಗಳ ಶೇ. 30ರಷ್ಟು ಮೊತ್ತವು ಸ್ಥಳೀಯ ಕರೆನ್ಸಿಗಳಲ್ಲೇ ಇರುತ್ತದೆ ಎಂದು ಘೋಷಿಸಿದ್ದಾರೆ. ಈ ಕ್ರಮವು ಸಂಬಂಧಿಸಿದ ಅರ್ಥವ್ಯವಸ್ಥೆಗಳ ವ್ಯಾಪಾರ-ವಹಿವಾಟುಗಳನ್ನು ಡಾಲರ್ ಆಧಿಪತ್ಯದಿಂದ ವಿಮೋಚನೆಗೊಳಿಸುವ ಸಾಮಾನ್ಯ ಉದ್ದೇಶದಿಂದ ಕೂಡಿದೆಯೇ ವಿನಃ ಅದು ಯಾವ ನಿರ್ದಿಷ್ಟ ಒತ್ತಾಯಗಳಿಂದಲೂ ಕೂಡಿಲ್ಲ.

ಡಾಲರಿನ ಪ್ರಾಬಲ್ಯವು ಅಮೆರಿಕಾಗೆ ಕಲ್ಪಿಸಿಕೊಡುವ ಅನುಕೂಲಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಉಚಿತ. ಎರಡು ಸ್ಪಷ್ಟ ಅನುಕೂಲಗಳಿವೆ: ಮೊದಲನೆಯದು, ಡಾಲರನ್ನು ಮೀಸಲು ಕರೆನ್ಸಿಯಾಗಿ ಉಳಿದ ದೇಶಗಳು ಒಪ್ಪಿಕೊಂಡಿರುವ ಕಾರಣದಿಂದ ಮತ್ತು ಡಾಲರ್ ತನ್ನದೇ ಸ್ವಂತ ಕರೆನ್ಸಿ ಆಗಿರುವುದರಿಂದ, ಇತರ ದೇಶಗಳಂತಲ್ಲದೆ, ಅಮೆರಿಕಾ ಪಾವತಿ ಶೇಷ ಸಮಸ್ಯೆಯ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಸಂಪತ್ತನ್ನು ಡಾಲರ್ ರೂಪದಲ್ಲಿ ಹಿಡಿದಿಟ್ಟುಕೊಳ್ಳುವ ಪರಿಪಾಠವು ಸುರಕ್ಷಿತವಾಗಿರುವುದರಿಂದ, ಇತರ ದೇಶಗಳಿಗೆ ಐ.ಒ.ಯು.ಗಳನ್ನು (IOU- ನಾನು ಇಂತಿಷ್ಟು ಹಣಕ್ಕೆ ನಿಮಗೆ ಋಣಿಯಾಗಿದ್ದೇನೆ ಎಂದು ಸಹಿ ಹಾಕಿದ ಪತ್ರಗಳನ್ನು) ಕೊಡುವ ಮೂಲಕ ಅಮೆರಿಕಾ ತನ್ನ ಪಾವತಿಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು. ಅಮೆರಿಕಾ ಹೊಂದಿರುವ ಈ ಅನುಕೂಲದ ಮೂಲಕ ಅದು ವಿಶ್ವ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಕಾರ್ಯವನ್ನು ನಿರ್ವಹಿಸಬಹುದು ಮತ್ತು ನಿರ್ವಹಿಸುತ್ತದೆ ಕೂಡ. ಎರಡನೆಯದು, ಇದೇ ಕಾರಣದಿಂದಾಗಿ, ಅಮೇರಿಕದ ಬ್ಯಾಂಕುಗಳ ವ್ಯವಹಾರವು ಬಹಳವಾಗಿ ಹೆಚ್ಚುತ್ತದೆ. ಡಾಲರ್ ಕರೆನ್ಸಿಯಲ್ಲಿ ವ್ಯವಹಾರಗಳನ್ನು ನಡೆಸುವ ಪದ್ಧತಿಯು ಅಮೆರಿಕದ ಬ್ಯಾಂಕುಗಳಿಗೆ ಮಾತ್ರ ಸೀಮಿತವಾಗಿಲ್ಲ ಎಂಬುದು ನಿಜವೇ. ಆದರೆ, ವಿಶ್ವ ವ್ಯಾಪಾರದಲ್ಲಿ ಡಾಲರ್ ಕರೆನ್ಸಿಯು ಚಲಾವಣೆಯ ಮಾಧ್ಯಮವಾಗಿರುವುದರಿಂದ ಅಮೆರಿಕದ ಬ್ಯಾಂಕುಗಳೇ ಡಾಲರ್‌ನ ಬಹು ದೊಡ್ಡ ಫಲಾನುಭವಿಗಳು ಎಂಬುದರಲ್ಲಿ ಸಂದೇಹವಿಲ್ಲ.

ಈ ಸ್ಪಷ್ಟ ಅಂಶಗಳ ಜೊತೆಗೆ, ಡಾಲರ್ ಹೊಂದಿರುವ ಪ್ರಾಬಲ್ಯದಿಂದಾಗಿ ಅದು ಮೆಟ್ರೋಪಾಲಿಟನ್ ಬಂಡವಾಳಶಾಹಿ ಜಗತ್ತಿಗೂ ಸಹ ಪ್ರಯೋಜನಕಾರಿಯಾಗಿದೆ.

ಪುಟ 14 ಕ್ಕೆ

ಡಾಲರ್ ಆಧಿಪತ್ಯಕ್ಕೆ ಬೆದರಿಕೆ ಎಂದರೆ ಬಂಡವಾಳಶಾಹೀ....... ಪುಟ 13 ರಿಂದ

ಅಂದರೆ, ಅದು ಪ್ರಾಥಮಿಕ/ಮೂಲ ಸರಕುಗಳನ್ನು ಉತ್ಪಾದಿಸುವ ಮೂರನೇ ಜಗತ್ತಿನ ದೇಶಗಳ ಮೇಲೆ ಅವರ ಆದಾಯವನ್ನು ಕುಗ್ಗಿಸುವ ಮತ್ತು ಅದರಿಂದಾಗಿ ಅವರ ಸರಕುಗಳ ಮೇಲಿನ ಬೇಡಿಕೆಯನ್ನು ತಗ್ಗಿಸುವ ಕ್ರಮಗಳನ್ನು ಹೇರಲು ವ್ಯವಸ್ಥೆಗೆ ಅನುವು ಮಾಡಿಕೊಡುತ್ತದೆ. ಈ ಮೂಲಕ, ಅವರ ಸರಕುಗಳ ಬೆಲೆಗಳು ಏರಿಕೆಯಾಗದಂತೆ ನೋಡಿಕೊಂಡು ಮೆಟ್ರೋಪಾಲಿಟನ್ ದೇಶಗಳ ಹೆಚ್ಚುತ್ತಿರುವ ಪ್ರಾಥಮಿಕ ಸರಕುಗಳ ಮೇಲಿನ ಬೇಡಿಕೆಯ ಪೂರೈಕೆಯನ್ನು, ಈ ಸರಕುಗಳ ಉತ್ಪಾದನೆಯು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚದಿದ್ದರೂ ಸಹ ಖಚಿತಪಡಿಸಿಕೊಳ್ಳುತ್ತದೆ.

ಈ ಪ್ರಕ್ರಿಯೆಯು ಹೀಗೆ ಕಾರ್ಯನಿರ್ವಹಿಸುತ್ತದೆ: ಮೂರನೇ ಜಗತ್ತಿನಲ್ಲಿ ಉತ್ಪಾದಿಸಲಾದ ಯಾವುದೋ ಒಂದು ಪ್ರಾಥಮಿಕ ಸರಕಿಗೆ ಹೆಚ್ಚಿನ ಬೇಡಿಕೆ ಇದ್ದಾಗ, ಸ್ಥಳೀಯ ಕರೆನ್ಸಿಯಲ್ಲಿ ಅದರ ಬೆಲೆ ಏರಿಕೆಯಾಗುತ್ತದೆ. ಈ ಏರಿಕೆಯು, ವಿಶ್ವದ ಮೀಸಲು ಕರೆನ್ಸಿಗೆ (ಡಾಲರ್‌ಗೆ) ಹೋಲಿಸಿದರೆ ಸ್ಥಳೀಯ ಕರೆನ್ಸಿಯ ವಿನಿಮಯ ದರವು ಅಪಮೌಲ್ಯಗೊಳ್ಳುವ ನಿರೀಕ್ಷೆಗಳನ್ನು ಹುಟ್ಟಿಹಾಕುತ್ತದೆ, ಏಕೆಂದರೆ, ಸ್ಥಳೀಯ ಕರೆನ್ಸಿಯನ್ನು ಮತ್ತು ಮೀಸಲು ಕರೆನ್ಸಿಯನ್ನು ಬೇರೆ ಬೇರೆ ದೃಷ್ಟಿಯಲ್ಲೇ ನೋಡಲಾಗುತ್ತದೆ. ಇದು ಆ ನಿರ್ದಿಷ್ಟ ಮೂರನೇ ಜಗತ್ತಿನ ದೇಶದಿಂದ ಹಣಕಾಸು ಬಂಡವಾಳವು ಮೆಟ್ರೋಪಾಲಿಟನ್ ದೇಶಕ್ಕೆ ಪಲಾಯನಗೈಯ್ಯುವಂತೆ ಪ್ರಚೋದಿಸುತ್ತದೆ. ಇದು ನಿಜಕ್ಕೂ ಸ್ಥಳೀಯ ಕರೆನ್ಸಿಯ ಅಪಮೌಲ್ಯಕ್ಕೆ ಕಾರಣವಾಗುತ್ತದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಆ ನಿರ್ದಿಷ್ಟ ಮೂರನೇ ಜಗತ್ತಿನ ದೇಶವು ತನ್ನ ಬಡ್ಡಿ ದರವನ್ನು ಹೆಚ್ಚಿಸುತ್ತದೆ ಮತ್ತು "ಮಿತವ್ಯಯ"ದ ಕ್ರಮಗಳನ್ನು ಅಳವಡಿಸಿಕೊಳ್ಳುತ್ತದೆ. ಈ ಅಂಶಗಳು ಸ್ಥಳೀಯವಾಗಿ ವರಮಾನಗಳ ಕುಸಿತಕ್ಕೆ ಕಾರಣವಾಗುತ್ತವೆ ಮತ್ತು ಅದರಿಂದಾಗಿ ಆ ನಿರ್ದಿಷ್ಟ ಸರಕಿನ ಮತ್ತು ಇತರ ಸರಕುಗಳ ಸ್ಥಳೀಯ ಬಳಕೆಯಲ್ಲಿ ಕುಸಿತವಾಗುತ್ತದೆ. ಹಾಗಾಗಿ, ಭೂ ಬಳಕೆಯನ್ನು ಆ ನಿರ್ದಿಷ್ಟ ಸರಕಿನಿಂದ ಬೇರೆ ಉದ್ದೇಶಗಳ ಕಡೆಗೆ ತಿರುಗಿಸಲೂ ಬಹುದು. ಈ ರೀತಿಯಲ್ಲಿ ಆ ವಿರಳ ಪ್ರಾಥಮಿಕ ಸರಕನ್ನು ಮೆಟ್ರೋಪಾಲಿಟನ್ ದೇಶಕ್ಕೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತದೆ, ಮೂಲ ಬೇಡಿಕೆಯನ್ನು ಕಡೆಗಣಿಸಲಾಗುತ್ತದೆ ಮತ್ತು ಅದರ ಬೆಲೆಯನ್ನು ಪೂರ್ವಸ್ಥಿತಿಗೇ ತರಲಾಗುತ್ತದೆ.

ವಸಾಹತುಶಾಹಿ ಯುಗದಲ್ಲಿ ಮೂರನೇ ಜಗತ್ತಿನ ದೇಶಗಳ ಸರಕುಗಳ ಸ್ಥಳೀಯ ಬಳಕೆಯನ್ನು ಬಲ ಪ್ರಯೋಗದ ಮೂಲಕ ಸಂಕುಚಿತಗೊಳಿಸಿ, ಆ ಸರಕುಗಳ ಬೆಲೆಯನ್ನು ಹೆಚ್ಚಿಸದೇ ಅವುಗಳನ್ನು ಕಚ್ಚಾ ವಸ್ತುಗಳಾಗಿ ವಸಾಹತು ದೇಶಗಳಿಗೆ ಕೊಂಡೊಯ್ಯುವ ಸಲುವಾಗಿ ಆ ದೇಶಗಳನ್ನು ಹಿಂಡುತ್ತಿದ್ದ ರೀತಿಯಲ್ಲೇ ಇಂದಿನ ಬಂಡವಾಳಶಾಹಿ ಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಕರೆನ್ಸಿ ವ್ಯವಸ್ಥೆಯೂ ಸಹ ಅದೇ ಉದ್ದೇಶವನ್ನು ಈಡೇರಿಸುತ್ತಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಕಾಲೀನ ಕರೆನ್ಸಿ ವ್ಯವಸ್ಥೆಯು ಸಾಮ್ರಾಜ್ಯಶಾಹಿಯ ಅಭಿವ್ಯಕ್ತಿಯೇ. ಹಾಗಾಗಿ, ಪ್ರಾಥಮಿಕ ಸರಕುಗಳನ್ನು ಉತ್ಪಾದಿಸುವ ಮೂರನೇ ಜಗತ್ತಿನ ಯಾವುದೇ ದೇಶದ ಕರೆನ್ಸಿಯು, ಅಥವಾ ಅವುಗಳ ಒಂದು ಗುಂಪಿನ ಕರೆನ್ಸಿಯು, ಜಾಗತಿಕ ವ್ಯಾಪಾರ–ವಹಿವಾಟುಗಳಲ್ಲಿ ಕಾರುಬಾರು ನಡೆಸುವ(ಆಧಿಪತ್ಯದ) ಕರೆನ್ಸಿಯಾಗುವುದು ಸಾಧ್ಯವಿಲ್ಲ, ಮತ್ತು, ಇಡೀ ಸಾಮ್ರಾಜ್ಯಶಾಹಿ ಸಂರಚನೆಯನ್ನು ಹಾಳುಗೆಡವದೇ ಹಾಗೂ ಅದರ ಆಧಾರದ ಮೇಲೆ ನೆಲೆಸಿರುವ ಸಮಕಾಲೀನ ಬಂಡವಾಳಶಾಹಿಯ ಸ್ಥಿರತೆಗೆ ಧಕ್ಕೆ ತಾರದೇ, ಮೂರನೇ ಜಗತ್ತಿನ ಕರೆನ್ಸಿಯು ಆಧಿಪತ್ಯದ ಕರೆನ್ಸಿಯಾಗುವುದು ಸಾಧ್ಯವಿಲ್ಲ. ಡಾಲರ್‌ನ ಈ ಆಧಿಪತ್ಯವು ಬಂಡವಾಳಶಾಹಿ ಕರೆನ್ಸಿ ವ್ಯವಸ್ಥೆಯ ನಿರ್ಣಾಯಕ ಭಾಗವೇ.

ವರ್ತಮಾನದಲ್ಲಿ ನಾವು ನೋಡುತ್ತಿರುವ ಅಪ–ಡಾಲರೀಕರಣದತ್ತ (de- dollarization) ಸಾಗುವ ಈ ಕ್ರಮಗಳು ಮುಂದುವರೆದ ಬಂಡವಾಳಶಾಹಿ ದೇಶಗಳ ಪ್ರಾಬಲ್ಯದ ಬುಡಕ್ಕೇ ಪೆಟ್ಟು ಕೊಡುತ್ತವೆ. ಇದು ಒಂದು ಕರೆನ್ಸಿ ವ್ಯವಸ್ಥೆಯನ್ನು ಇನ್ನೊಂದರೊಂದಿಗೆ ಕೇವಲ ಬದಲಾಯಿಸುವ ಪ್ರಶ್ನೆಯಲ್ಲ. ಇದು ಮೆಟ್ರೋಪಾಲಿಟನ್ ಆಧಿಪತ್ಯದ ಬೆಂಬಲ ಹೊಂದಿದ ಮತ್ತು ಮೂರನೇ ಜಗತ್ತಿನ ಜನರಿಗೆ ನಷ್ಟವನ್ನುಂಟುಮಾಡಿ ತಲುಪಿದ ಇಡೀ ವ್ಯವಸ್ಥೆಯ ಸ್ಥಿರತೆಯ ಪ್ರಶ್ನೆಯಾಗಿದೆ. ಹಾಗಾಗಿ ಅಮೆರಿಕಾ ಮಾತ್ರವಲ್ಲದೆ ಇಡೀ ಮೆಟ್ರೋಪಾಲಿಟನ್ ಬಂಡವಾಳಶಾಹಿ ಜಗತ್ತು ಅಪ–ಡಾಲರೀಕರಣವನ್ನು ತಡೆಯಲು ಮಿತಿಮೀರಿದ ಪ್ರಯತ್ನಗಳನ್ನು ಮಾಡಲಿದೆ. ಈ ಪ್ರಯತ್ನಗಳು ಅಂತಹ ಅಪ–ಡಾಲರೀಕರಣದ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುವ ದೇಶಗಳ ವಿರುದ್ಧ ಆರ್ಥಿಕೇತರ ಒತ್ತಾಯದ ಕ್ರಮಗಳನ್ನೂ ಸಹ ಒಳಗೊಂಡಿರಬಹುದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಪ–ಡಾಲರೀಕರಣವನ್ನು ಸಾಧಿಸುವ ಪ್ರಯತ್ನವು ಬಂಡವಾಳಶಾಹಿಯ ಪ್ರಸಕ್ತ ಬಿಕ್ಕಟ್ಟಿನ ಸ್ವರೂಪವನ್ನು ಪ್ರಕಟಪಡಿಸುತ್ತದೆ. ಆ ಕಾರಣದಿಂದಾಗಿಯೇ ಬಂಡವಾಳಶಾಹಿಯು ತನ್ನ ದುಷ್ಟತನದ ವಿಶ್ವರೂಪವನ್ನು ತೋರಿಸಲಿದೆ.

ಕ್ರಿಮಿನಲ್ ಹಿನ್ನಲೆಯ ಅಭ್ಯರ್ಥಿಗಳು ಮತ್ತು ಕೋಟ್ಯಾಧಿಪತಿ ಅಭ್ಯರ್ಥಿಗಳು ಇಂತಹ ಜನಪ್ರತಿನಿಧಿಗಳಿಂದ ಜನರು ಏನನ್ನು ನಿರೀಕ್ಷಿಸಲಾದೀತು?

ರಾಜ್ಯ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ 581 (ಶೇ.22) ಮಂದಿ ಅಪರಾಧದ ಆರೋಪ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಈ ಪೈಕಿ 404 ಮಂದಿ ಗಂಭೀರ ಅಪರಾಧ ಆರೋಪಕ್ಕೆ ಗುರಿಯಾಗಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಅಂಕಿ–ಅಂಶ ಬಿಡುಗಡೆ ಮಾಡಿದ ಎಡಿಆರ್ ಮುಖ್ಯಸ್ಥ ತ್ರಿಲೋಚನ ಶಾಸ್ತ್ರಿ, ಕಣದಲ್ಲಿರುವ 2613 ಅಭ್ಯರ್ಥಿಗಳ ಪೈಕಿ 2586 ಮಂದಿಯ ನಾಮಪತ್ರಗಳನ್ನು ಪರಿಶೀಲಿಸಿದ್ದೇವೆ. ಉಳಿದ ಅಭ್ಯರ್ಥಿಗಳ ನಾಮಪತ್ರದಲ್ಲಿ ಕೆಲವು ಅಂಶಗಳು ಅಸ್ಪಷ್ಟವಾಗಿದ್ದು, ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಾಗಿಲ್ಲ ಎಂದಿದ್ದಾರೆ.

ಬಿಜೆಪಿಯ 96 (ಒಟ್ಟು ಅಭ್ಯರ್ಥಿಗಳು 224), ಕಾಂಗ್ರೆಸ್ಸಿನ 122 (220) ಅಭ್ಯರ್ಥಿಗಳು ಅಪರಾಧ ಪ್ರಕರಣ ಎದುರಿಸುತ್ತಿದ್ದಾರೆ. ಜೆಡಿಎಸ್ 70 (208), ಆಮ್ ಆದ್ಮಿ ಪಕ್ಷ 48(208), ಎನ್‌ಸಿಪಿ 2(9) ಹಾಗೂ 901 ಪಕ್ಷೇತರರ ಪೈಕಿ 119 ಸ್ಪರ್ಧಿಗಳ ವಿರುದ್ಧ ಪ್ರಕರಣ ದಾಖಲಾಗಿವೆ. ಇನ್ನು, ಬಿಜೆಪಿಯಿಂದ ಶೇ.43 (2018–ಶೇ.37), ಕಾಂಗ್ರೆಸ್‌ನಲ್ಲಿ ಶೇ.55 (2018–ಶೇ.55) ಹಾಗೂ ಜೆಡಿಎಸ್‌ನ ಶೇ.34 (2018–ಶೇ.21) ಅಭ್ಯರ್ಥಿಗಳು ಅಪರಾಧ ಎದುರಿಸುತ್ತಿದ್ದಾರೆ. ಚುನಾವಣೆಗಳಲ್ಲಿ ಘೋಷಿತ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಅಭ್ಯರ್ಥಿಗಳ ಸಂಖ್ಯೆ 2018ರಲ್ಲಿ ಶೇ. 15 ಇದ್ದುದು, 2023ರಲ್ಲಿ ಶೇ. 22ಕ್ಕೆ ಹೆಚ್ಚಳವಾಗಿದೆ.

ಇದರಲ್ಲಿ 49 ಅಭ್ಯರ್ಥಿಗಳ ವಿರುದ್ಧ ಮಹಿಳೆಯರಿಗೆ ಸಂಬಂಧಿಸಿದ ಅಪರಾಧ ಪ್ರಕರಣ ವಿಚಾರಣೆ ಹಂತದಲ್ಲಿವೆ. ಒಬ್ಬರು ಅತ್ಯಾಚಾರ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ. 8 ಅಭ್ಯರ್ಥಿಗಳ ವಿರುದ್ಧ ಕೊಲೆ, 35 ಅಭ್ಯರ್ಥಿಗಳು ಕೊಲೆ ಯತ್ನ ಪ್ರಕರಣ ಎದುರಿಸುತ್ತಿರುವುದಾಗಿ ನಾಮಪತ್ರದಲ್ಲಿ ಹೇಳಿಕೊಂಡಿದ್ದಾರೆ. ಒಟ್ಟಾರೆ 111 ಕ್ಷೇತ್ರದಲ್ಲಿ 3ಕ್ಕಿಂತ ಹೆಚ್ಚು ಅಭ್ಯರ್ಥಿಗಳು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದು, ಅವನ್ನು 'ರೆಡ್ ಅಲರ್ಟ್' ಕ್ಷೇತ್ರಗಳೆಂದು ಪರಿಗಣಿಸಿದ್ದೇವೆ ಎಂದು ಶಾಸ್ತ್ರಿ ತಿಳಿಸಿದ್ದಾರೆ.

ಕೋಟ್ಯಾಧಿಪತಿ ಅಭ್ಯರ್ಥಿಗಳು;

ಬಿಜೆಪಿಯಿಂದ 216, ಕಾಂಗ್ರೆಸ್ 215, ಜೆಡಿಎಸ್ 170 ಹಾಗೂ ಆಪ್‌ನಿಂದ 107 ಕೋಟ್ಯಧಿಪತಿ ಸ್ಪರ್ಧಿಗಳು ಕಣದಲ್ಲಿದ್ದಾರೆ. ಪಕ್ಷೇತರರಾಗಿ ಸ್ಪರ್ಧಿಸಿರುವವರಲ್ಲಿ 215 ಕೋಟ್ಯಧಿಪತಿಗಳಿದ್ದಾರೆ. ಒಟ್ಟಾರೆ ಪ್ರತಿ ಅಭ್ಯರ್ಥಿಯ ಸರಾಸರಿ ಆಸ್ತಿ 12.26 ಕೋಟಿ ಆಗುತ್ತದೆ ಎಂದು ತಿಳಿಸಿದರು. ಒಟ್ಟಾರೆ 60ಕ್ಕೂ ಹೆಚ್ಚಿನ ಅಭ್ಯರ್ಥಿಗಳು 100 ಕೋಟಿ ರೂ.ಗೂ ಹೆಚ್ಚಿನ ಆಸ್ತಿ ಹೊಂದಿದ್ದಾರೆ.

ಇವರಿಂದ ಏನನ್ನು ನಿರೀಕ್ಷಿಸಲಾದೀತು?;

ಇದನ್ನು ಗಮನಿಸಿದಾಗ, ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ಮಾಡುತ್ತಿರುವ ಬಿಜೆಪಿ, ಈ ಹಿಂದೆ ಆಡಳಿತ ಮಾಡಿರುವ ಕಾಂಗ್ರೆಸ್ ಹಾಗೂ ಜೆಡಿಎಸ್ ಮತ್ತು ದೆಹಲಿ, ಪಂಜಾಬ್ ರಾಜ್ಯಗಳಲ್ಲಿ ಉತ್ತಮ ಮತ್ತು ಜನಪರ ಆಡಳಿತ ನಡೆಸುತ್ತಿದ್ದೇವೆ ಎಂದು ಹೇಳಿಕೊಳ್ಳುವ ಆಮ್ ಆದ್ಮಿ ಪಕ್ಷ, ಈ ಎಲ್ಲಾ ಪಕ್ಷಗಳೂ ಜನರ ನಡುವೆ ಹೇಳಿಕೊಳ್ಳುವಂತಹ ಮತ್ತು ಮತದಾದರರ ಮನ ಗೆಲ್ಲುವ ಸಾಧನೆಗಳೇನೂ ತಮ್ಮ ಬಳಿ ಇಲ್ಲ ಎಂಬುದನ್ನು ಒಪ್ಪಿಕೊಂಡಂತ್ತಾಗುತ್ತದೆ. ತಮ್ಮ ಪಕ್ಷದ ಸಾಧನೆಗಳನ್ನು ತೋರಿಸುವ ಮೂಲಕವಾಗಲೀ, ತಮ್ಮ ಪಕ್ಷದ ಸಿದ್ಧಾಂತ, ನೀತಿ ನಿಲುವುಗಳ ಕುರಿತು ಮತದಾರರಿಗೆ ತಿಳಿಸಿ, ಮತದಾರರ ಮನ ಗೆಲ್ಲಲು ಸಾಧ್ಯವಿಲ್ಲ ಎಂದರಿತ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ತೋಳ್ಬಲ ಮತ್ತು ಹಣಬಲದಿಂದ ಗೆಲ್ಲಬಹುದಾಧ ಕ್ರಿಮಿನಲ್ ಗಳು ಮತ್ತು ಚುನಾವಣೆಯಲ್ಲಿ ದೊಡ್ಡ ಮೊತ್ತದ ಹಣ ವೆಚ್ಚ ಮಾಡುವ ಸಾಮರ್ಥ್ಯವುಳ್ಳ ಕೋಟ್ಯಾಧಿಪತಿಗಳಿಗೆ ಟಿಕೆಟ್ ನೀಡಿ ಚುನಾವಣಾ ಕಣಕ್ಕಿಸುತ್ತಾರೆ. ಇಂಥವರ ಸಂಖ್ಯೆ ಚುನಾವಣೆಯಿಂದ ಚುನಾವಣೆಗೆ ಹೆಚ್ಚಾಗುತ್ತಲೇ ಇದೆ.

ಇಂಥವರು ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ, ಹಣವುಳ್ಳವರು ಮತ್ತು ಅಪರಾಧಿಗಳು ಜನರ ಪ್ರತಿನಿಧಿಗಳಾಗಿ ಆಯ್ಕೆಯಾಗಿ, ಶಾಸನಗಳನ್ನು ರಚಿಸುವ ಶಾಸನ ಸಭೆಗಳಲ್ಲಿ ಕುಳಿತುಕೊಳ್ಳುತ್ತಾರೆ. ತಮ್ಮ ಅಕ್ರಮಗಳು, ಅಪರಾಧಗಳ ವಿರುದ್ಧ ತಮ್ಮ ಮೇಲೆ ಕಾನೂನು ಕ್ರಮ ಜರುಗಿಸಬೇಕಾದ ಸಾಂವಿಧಾನಿಕ ಸಂಸ್ಥೆಗಳನ್ನು ತಾವೇ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದು ಪ್ರಜಾಪ್ರಭುತ್ವದ ಒಂದು ವ್ಯಂಗ್ಯವೇ ಸರಿ. ಇಂತಹ ಜನಪ್ರತಿನಿಧಿಗಳಿಂದ ಪ್ರಜೆಗಳು ಪ್ರಾಮಾಣಿಕ ಸೇವೆ, ಕಾನೂನು ಪಾಲನೆ ಅಥವಾ ಜನಪರ ಯೋಜನೆಗಳನ್ನು ನಿರೀಕ್ಷಿಸಲಾದೀತೆ? ಇವರು ಭ್ರಷ್ಟಾಚಾರ, ಮೋಸ, ವಂಚನೆ, ಸಾರ್ವಜನಿಕ ಸಂಪತ್ತುಗಳ ಲೂಟಿ ತಡೆಯುತ್ತಾರೆ ಎಂದು ನಿರೀಕ್ಷಿಲಾದೀತೆ? ಸಮಾಜದಲ್ಲಿ ಶಾಂತಿ, ಸೌಹಾರ್ಧತೆಯ ವಾತಾವರಣ ನಿರ್ಮಿಸುತಾರೆ ಎಂದು ನಿರೀಕ್ಷಿಸಲಾದೀತೆ? ದೇಶದಲ್ಲಿ ಈಗಾಗಲೇ ಇದನ್ನೆಲ್ಲಾ ಜನರು ಕಣ್ಣಾರೆ ಕಂಡು, ಸ್ವತಃ ಅನುಭವಿಸುತ್ತಿದ್ದಾರೆ. ಜನತೆ ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ದಿನಗಳು ಮತ್ತಷ್ಟು ಅಪಾಯಕಾರಿಯಾಗಲಿದೆ.

ಮಹಿಳಾ ಅಭ್ಯರ್ಥಿಗಳ ಇಳಿಕೆ: 2023 ಚುನಾವಣೆಯಲ್ಲಿ ಶೇ.7ರಷ್ಟುಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದು, 2018ಕ್ಕೆ ಹೋಲಿಸಿದರೆ ಚುನಾವಣೆಗೆ ಸ್ಪರ್ಧಿಸಿದ ಮಹಿಳೆಯರ ಪ್ರಮಾಣ ಶೇ.1ರಷ್ಟು ಇಳಿಕೆಯಾಗಿದೆ ಎಂದು ಹೇಳಿದರು.

ಶಿಕ್ಷಣ: ಇನ್ನು ಶೇ.48 ಅಭ್ಯರ್ಥಿಗಳು 5 ಹಾಗೂ 12ನೇ ತರಗತಿ ನಡುವೆ ಶಿಕ್ಷಣ ಪಡೆದಿದ್ದಾಗಿ ಘೋಷಿಸಿಕೊಂಡಿದ್ದಾರೆ. ಶೇ. 43ರಷ್ಟು ಅಭ್ಯರ್ಥಿಗಳು ಪದವಿ ಅಥವಾ ಅದಕ್ಕಿಂತ ಹೆಚ್ಚಿನ ಶೈಕ್ಷಣಿಕ ಅರ್ಹತೆ ಇದೆಯೆಂದು ನಾಮಪತ್ರದಲ್ಲಿ ತಿಳಿಸಿದ್ದಾರೆ. ಒಬ್ಬರು ತಮ್ಮ ಶೈಕ್ಷಣಿಕ ಅರ್ಹತೆ ನೀಡಿಲ್ಲ.

ಯುವಕರು ಹೆಚ್ಚು: 832 ಅಭ್ಯರ್ಥಿಗಳು 25 ರಿಂದ 40 ವರ್ಷದೊಳಗಿನವರಾಗಿದ್ದರೆ, 1,356 ಅಭ್ಯರ್ಥಿಗಳು 41 ರಿಂದ 60 ವರ್ಷ ಎಂದು ಘೋಷಿಸಿಕೊಂಡಿದ್ದಾರೆ. 389 ಅಭ್ಯರ್ಥಿಗಳು 61 ರಿಂದ 80 ವರ್ಷದವರಾಗಿದ್ದಾರೆ. 9 ಅಭ್ಯರ್ಥಿಗಳು 80 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ.

ಪತ್ರಿಕಾ ಸ್ವಾತಂತ್ರ್ಯದಲ್ಲಿ ಭಾರತದ ಸ್ಥಾನ 150 ರಿಂದ 161 ಕ್ಕೆ ಕುಸಿತ


2023ರ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ 161ನೇ ಸ್ಥಾನಕ್ಕೆ ಕುಸಿದಿದೆ. 30ನೇ 'ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ'ದಂದು ಆರ್‌ಎಸ್‌ಎಫ್(ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್– ಗಡಿಗಳಿಲ್ಲದ ಪತ್ರಕರ್ತರು) ಪ್ರಕಟಿಸಿರುವ ವಿಶ್ವ ಪತ್ರಿಕಾ ಸ್ವಾತಂತ್ರ್ಯದ ಕುರಿತ ವಾರ್ಷಿಕ ವರದಿಯಲ್ಲಿ ಇದು ಪ್ರಕಟವಾಗಿದೆ. ಇದು ಆರ್‌ಎಸ್‌ಎಫ್ ಬಿಡುಗಡೆ ಮಾಡಿರುವ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದ 21ನೇ ಆವೃತ್ತಿ.



ಭಾರತವು ಈ ಸೂಚ್ಯಂಕದಲ್ಲಿ 180 ದೇಶಗಳ ಪೈಕಿ 161ನೇ ಸ್ಥಾನಕ್ಕಿಳಿದಿದೆ. 2022ರಲ್ಲಿ ಭಾರತ 150ನೇ ಸ್ಥಾನದಲ್ಲಿತ್ತು. ಅಂದರೆ ಈಗ 11 ಸ್ಥಾನ ಕುಸಿದಿದೆ. ಕಳೆದ ವರ್ಷವೂ ಅದು 8 ಶ್ರೇಯಾಂಕಗಳ ಕುಸಿತ ಕಂಡಿತ್ತು. 2021ರಲ್ಲಿ ಅದು 142ನೇ ಸ್ಥಾನದಲ್ಲಿತ್ತು.

ಈ ವರದಿಯ ಪ್ರಕಾರ ಪತ್ರಿಕಾ ಸ್ವಾತಂತ್ರ್ಯದ ದೃಷ್ಟಿಯಿಂದ ಭಾರತವು ದಕ್ಷಿಣ ಏಷ್ಯಾದ ಅತ್ಯಂತ ಕೆಟ್ಟ ದೇಶವಾಗಿದೆ. ದಕ್ಷಿಣ ಏಷ್ಯಾದ ದೇಶಗಳಲ್ಲಿ, ಭೂತಾನ್ 90 ನೇ ಸ್ಥಾನದಲ್ಲಿದೆ, ನೆರೆಯ ಶ್ರೀಲಂಕಾ 135 ನೇ ಸ್ಥಾನದಲ್ಲಿದೆ, ಪಾಕಿಸ್ತಾನ 150 ನೇ ಸ್ಥಾನದಲ್ಲಿದೆ ಮತ್ತು ತಾಲಿಬಾನ್ ಪ್ರಾಬಲ್ಯದ ಅಫ್ಘಾನಿಸ್ತಾನ 152 ನೇ ಸ್ಥಾನದಲ್ಲಿದೆ. ಆದರೆ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಹೇಳಲಾದ ಭಾರತ 161 ನೇ ಸ್ಥಾನಕ್ಕೆ ಇಳಿದಿದೆ. ಬಾಂಗ್ಲಾದೇಶ ಮಾತ್ರ 163 ನೇ ಸ್ಥಾನದಲ್ಲಿದ್ದು ಭಾರತಕ್ಕಿಂತ ಕೆಳ ಮಟ್ಟದಲ್ಲಿದೆ.

ಪತ್ರಕರ್ತರ ಪರಿಸ್ಥಿತಿ ಅತ್ಯಂತ ಕೆಟ್ಟದಾಗಿದೆ ಎಂದು ನಂಬಲಾದ 31 ದೇಶಗಳಲ್ಲಿ ಭಾರತವೂ ಸೇರಿದೆ. ಆರ್‌ಎಸ್‌ಎಫ್ ಸಹ ಭಾರತವು ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಏಕೆ ಹಿಂದುಳಿದಿದೆ ಎಂಬುದನ್ನು ವಿವರಿಸಿದೆ. "ಪತ್ರಿಕಾ ನಿರ್ವಾಹಕರ ವಿರುದ್ಧದ ಹಿಂಸಾಚಾರ, ರಾಜಕೀಯ ಪಕ್ಷಪಾತದ ಮಾಧ್ಯಮ ಮತ್ತು ಮಾಧ್ಯಮ ಮಾಲೀಕತ್ವದ ಏಕಸ್ವಾಮ್ಯ ಎಲ್ಲವೂ 'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ'ದಲ್ಲಿ ಪತ್ರಿಕಾ ಸ್ವಾತಂತ್ರ್ಯವು ಅಪಾಯದಲ್ಲಿದೆ ಎಂದು ಸೂಚಿಸುತ್ತದೆ" ಎಂದು ಅದು ಗಮನಿಸಿದೆ.



ಕೃಪೆ: ಪೆನ್‌ಪೆನ್ಸಿಲ್‌ಡ್ರಾ, ಫೇಸ್‌ಬುಕ್

2016 ರಿಂದ 2021 ರ ನಡುವೆ, ಯುನೆಸ್ಕೋ ವರದಿಯ ಪ್ರಕಾರ, ವಿಶ್ವದಾದ್ಯಂತ 455 ಪತ್ರಕರ್ತರು ಹತ್ಯೆಯಾಗಿದ್ದಾರೆ. 2022ರಲ್ಲೇ 86 ಮಂದಿ ಕೊಲೆಯಾಗಿದ್ದಾರೆ. ಭಾರತವೊಂದರಲ್ಲೇ 22 ಪತ್ರಕರ್ತರು ಹತ್ಯೆಯಾಗಿದ್ದಾರೆ.



ಕ್ರಿಮಿನಲ್ ಗಳಿಗೆ ಟಿಕೆಟ್ ಕೊಟ್ಟಿರುವ ಬಿಜೆಪಿಯಿಂದ ಮತ್ತೇನು ನಿರೀಕ್ಷಿಸಲು ಸಾಧ್ಯ? –ಬೃಂದಾ ಕಾರಟ್

'ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಬಿಜೆಪಿಯು ಕ್ರಿಮಿನಲ್ ಹಿನ್ನಲೆಯುಳ್ಳ ವ್ಯಕ್ತಿಗಳನ್ನು ಪೋಷಿಸುತ್ತಿದೆ. ಕಲಬುರಗಿ ಜಿಲ್ಲೆಯ ಚಿತ್ತಾಪುರದಿಂದ ಪಡಿತರ ಅಕ್ಕಿ, ಮಕ್ಕಳ ಹಾಲಿನ ಪುಡಿ ಕದ್ದ ಆರೋಪಿಗೂ ಬಿಜೆಪಿ ಟಿಕೆಟ್ ನೀಡಿದೆ. ಬಿಜೆಪಿ ನೈತಿಕವಾಗಿ ಭ್ರಷ್ಟಗೊಂಡಿದೆ' ಎಂದು ಹರಿಹಾಯ್ದಿರುವ ಸಿಪಿಎಂ ಪಾಲಿಟ್ ಬ್ಯೂರೊ ಸದಸ್ಯೆ ಬೃಂದಾ ಕಾರಟ್, 'ಅಪರಾಧ ಹಿನ್ನಲೆಯುಳ್ಳ ವ್ಯಕ್ತಿಗಳನ್ನು ಹೊಂದಿರುವ ಪಕ್ಷದಿಂದ ಮತ್ತೇನು ನಿರೀಕ್ಷಿಸಲು ಸಾಧ್ಯ?' ಎಂದು ಪ್ರಶ್ನಿಸಿದರು.

ಕಲಬುರಗಿ ಗ್ರಾಮೀಣ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಸಿಪಿಎಂ ಅಭ್ಯರ್ಥಿ ಪಾಂಡುರಂಗ ಮಾವಿನಕರ ಪರ ಚುನಾವಣಾ ಪ್ರಚಾರ ನಡೆಸಲು ಕಲಬುರಗಿ ಜಿಲ್ಲೆಗೆ ಬೇಟಿ ನೀಡಿದ್ದ ವೇಳೆ ದಿನಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನವೊಂದರಲ್ಲಿ ಮಾತನಾಡಿದರು.

ರಾಜ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಸಂದರ್ಶಕರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಕಳೆದ ಮೂರೂವರೆ ವರ್ಷಗಳಲ್ಲಿ ರಾಜ್ಯ ಬಿಜೆಪಿ ಸರ್ಕಾರ ದುರಾಡಳಿತ ನಡೆಸಿದೆ. ಬಡವರು, ಶ್ರಮಿಕರು, ರೈತರಿಗೆ ಪ್ರಯೋಜನವಾಗುವ ಯಾವ ಕೆಲಸಗಳೂ ನಡೆದಿಲ್ಲ. ಬಿಜೆಪಿ ರಾಜ್ಯದಲ್ಲಿ ಸೋಲುವ ಸುಳಿವು ದೊರೆತ ಹಿನ್ನೆಲೆಯಲ್ಲಿ, ಪ್ರಧಾನಿ ರಾಜ್ಯದಲ್ಲಿ 24 ಗಂಟೆಯೂ ನಿರಂತರವಾಗಿ 'ಪ್ರಚಾರದ ಡ್ಯೂಟಿ ನಡೆಸಿದ್ದಾರೆ. ಜನರು ಅಡುಗೆ ಅನಿಲ ಸಿಲಿಂಡರ್ ಬೆಲೆ ಹೆಚ್ಚಳ, ಪೆಟ್ರೋಲ್, ಡೀಸಲ್, ಅಡುಗೆ ಎಣ್ಣೆ ಬೆಲೆ ಹೆಚ್ಚಳ, ನಿರುದ್ಯೋಗದಿಂದ ತತ್ತರಿಸಿದ್ದಾರೆ. ಹೀಗಾಗಿ, ರಾಜ್ಯದಲ್ಲಿ ಈ ಬಾರಿ ಬಿಜೆಪಿ ಹೀನಾಯವಾಗಿ ನೆಲಕಚ್ಚಲಿದೆ' ಎಂದರು.

ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ ಒಂದಾಗಿದ್ದ ಎಲ್ಲಾ ಎಡಪಕ್ಷಗಳು ಚುನಾವಣೆಯಲ್ಲಿ ಒಗ್ಗಟ್ಟಿಲ್ಲವೇಕೆ? ಎಂಬ ಪ್ರಶ್ನೆಗೆ ಉತ್ತರಿಸಿದ ಬೃಂದಾ ಅವರು, 'ಪ್ರತಿ ರಾಜ್ಯದಲ್ಲೂ ಆಯಾ ಜಿಲ್ಲೆಯ ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯತಂತ್ರ ರೂಪಿಸುತ್ತೇವೆ. ಈಗಲೂ ಹಲವು ವಿಚಾರಗಳಲ್ಲಿ ನಮ್ಮಲ್ಲಿ ಒಗ್ಗಟ್ಟಿದೆ. ಸಂವಿಧಾನವನ್ನು ಬುಲ್ಡೋಜರ್ ಮೂಲಕ ಕೆಡವಿ ಹಾಕುವ ಕೇಂದ್ರ ಬಿಜೆಪಿ ಸರ್ಕಾರದ ಹುನ್ನಾರಕ್ಕೆ ನಮ್ಮೆಲ್ಲರ ವಿರೋಧವಿದೆ. ಮುಂಬರುವ ಲೋಕಸಭಾ ಚುನಾವಣೆ ವೇಳೆಗೆ ಎಲ್ಲ ಪ್ರತಿಪಕ್ಷಗಳು ಬಿಜೆಪಿ ವಿರುದ್ಧ ಒಂದಾಗಲಿವೆ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಕಾಂಗ್ರೆಸ್ ಪಕ್ಷದ ಶಾಸಕರನ್ನು ಸೆಳೆದು 'ಆಪರೇಶನ್ ಕಮಲ' ಮೂಲಕ ಬಿಜೆಪಿ ಸರ್ಕಾರ ರಚಿಸಿತ್ತು. ಇದೀಗ ಅದೇ ಪಕ್ಷದಿಂದ ಬಂದ ನಾಯಕರಿಗೆ ಕಾಂಗ್ರೆಸ್ ಟಿಕೆಟ್ ನೀಡುವ ಬದಲು, ಎರಡು ಅಥವಾ ಮೂರು ವರ್ಷ ಪಕ್ಷ ಸಂಘಟಿಸಲು ಸೂಚಿಸಬೇಕಿತ್ತು' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಿಪಿಎಂ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಿಲ್ಲವೇಕೆ ಎಂಬ ಪ್ರಶ್ನೆಗೆ 'ಈ ಬಾರಿ ನಮ್ಮ ಪಕ್ಷದ ಸಂಘಟನಾ ಶಕ್ತಿಯನ್ನು ಗುಣಾತ್ಮಕವಾಗಿ ಬಳಸಿಕೊಳ್ಳುವ ಉದ್ದೇಶವಿದೆ. ಹೆಚ್ಚು ಮತಗಳು ಬರುವ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದೇವೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ನಮ್ಮ ಅಭ್ಯರ್ಥಿ ಗೆಲುವು ಸಾಧಿಸುವರು. ಇಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗೆ ಜೆಡಿಎಸ್ ಬೆಂಬಲ ಘೋಷಿಸಿ, ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಬೆಂಬಲಿಸಿರುವುದು ನಮ್ಮ ಅಭ್ಯರ್ಥಿಗಳಿಗೆ ಹೆಚ್ಚು ಬಲ ತಂದುಕೊಟ್ಟಿದೆ' ಎಂದು ಉತ್ತರಿಸಿದರು.

ಮೋದಿ ಅವರಿಗೆ ಅದಾನಿ, ಅಂಬಾನಿ ಬಗ್ಗೆಯೇ ಹೆಚ್ಚು ಆಸಕ್ತಿ:

ಆಳಂದ ತಾಲ್ಲೂಕಿನ ನರೋಣಾದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಬೃಂದಾ ಕಾರಟ್ ಅವರು 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಡಜನರ ಹಿತಕ್ಕಿಂತ ತಮ್ಮ ಶ್ರೀಮಂತ ಗೆಳೆಯರಾದ ಅದಾನಿ, ಅಂಬಾನಿ ಬಗ್ಗೆಯೇ ಹೆಚ್ಚು ಆಸಕ್ತಿ. ಅದಕ್ಕೆ ಲಕ್ಷಾಂತರ ಕೋಟಿ ರೂಪಾಯಿ ಕಾರ್ಪೊರೇಟ್ ತೆರಿಗೆ ಮನ್ನಾ ಮಾಡಿದ್ದಾರೆ. ಇತ್ತ ಬಡವರಿಗೆ ಆಸರೆಯಾದ ಉದ್ಯೋಗ ಖಾತ್ರಿ ಯೋಜನೆಯ ಮೊತ್ತವನ್ನು ಕಡಿತಗೊಳಿಸಿದ್ದಾರೆ' ಎಂದು ಟೀಕಿಸಿದರು.

'ಮೊದಿ ಮನ್ ಕಿ ಬಾತ್ ಬಿಟ್ಟು ಜನರ ಬಡತನ, ನಿರುದ್ಯೋಗದ ಬಗ್ಗೆ ಮಾತಾಡಲಿ. ಡಬಲ್ ಎಂಜಿನ್ ಸರ್ಕಾರದ ನೀತಿಯಿಂದ ಶೇ. 1ರಷ್ಟು ಜನರ ಬಳಿ ಶೇ. 40ರಷ್ಟು ಸಂಪತ್ತು ಕ್ರೋಡೀಕರಣಗೊಂಡಿದೆ. ಉಳಿದ ಶೇ. 99 ಜನರು ಶೇ. 60ರಷ್ಟು ಸಂಪತ್ತು ಹಂಚಿಕೊಂಡಿದ್ದಾರೆ. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದರು. ಅವು ಎಲ್ಲಿ ಹೋದವು? ಸರ್ಕಾರವು ಜನರ ಕವಚವಾಗಬೇಕು' ಎಂದರು.

ಸಂತ್ರಸ್ತ ಕುಸ್ತಿಪಟುಗಳು ಕಾಣುತ್ತಿಲ್ಲವೇ?;

'ಬಿಜೆಪಿ ಅತಿ ಕ್ರೂರ ಅಪರಾಧಿಗಳನ್ನು ರಕ್ಷಿಸುತ್ತಿದೆ. ದೇಶಕ್ಕೆ ಪದಕ ತಂದುಕೊಟ್ಟ ಕುಸ್ತಿಪಟುಗಳು ಲೈಂಗಿಕ ದೌರ್ಜನ್ಯ ಎಸಗಿದ ಕುಸ್ತಿ ಫೆಡರೇಶನ್ ಅಧ್ಯಕ್ಷ, ಸಂಸದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ದೆಹಲಿಯ ಜಂತರ್ ಮಂತರ್ ನಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ದೇಶವೆಲ್ಲ ತಿರುಗುವ ಮೋದಿಗೆ ಈ ಸಂತ್ರಸ್ತ ಕುಸ್ತಿಪಟುಗಳು ಕಾಣುತ್ತಿಲ್ಲವೇ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.


'ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ'ದ 30ನೇ ವಾರ್ಷಿಕೋತ್ಸವದ ವೇಳೆಯಲ್ಲಿ...

ಇತ್ತೀಚೆಗೆ ಭಾರತದಲ್ಲಿಯೂ ಪತ್ರಕರ್ತರ ಮೇಲೆ ಹಲ್ಲೆ, ಕೊಲೆ, ಬಂಧನ, ಪ್ರಕರಣಗಳು ಹೆಚ್ಚುತ್ತಿವೆ. ವಿವಿಧ ವ್ಯಕ್ತಿಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಅಧಿಕಾರವನ್ನು ಪ್ರಶ್ನಿಸುವ ಯಾರ ಮೇಲಾದರೂ ಮೊಕದ್ದಮೆ ಹೂಡುವ ಮತ್ತು ಬೆದರಿಕೆ ಹಾಕುವ ಶೈಲಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಡಿಸೆಂಬರ್ 2022 ರ ಜನಗಣತಿಯ ಪ್ರಕಾರ, ವಿಶ್ವಾದ್ಯಂತ 363 ಪತ್ರಕರ್ತರು ಮತ್ತು ಭಾರತದಲ್ಲಿ ಒಂದರಲ್ಲೇ 7 ಪತ್ರಕರ್ತರು ತಮ್ಮ ಕರ್ತವ್ಯವನ್ನು ನಿರ್ವಹಿಸಿದ ಕಾರಣಕ್ಕಾಗಿ ಜೈಲು ಪಾಲಾಗಿದ್ದಾರೆ. ಇದರಲ್ಲಿ ಇತ್ತೀಚೆಗೆ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಕೇರಳದ ಸಿದ್ದಿಕ್ ಕಪ್ಪನ್ ಕೂಡ ಸೇರಿದ್ದಾರೆ. ಅವರಲ್ಲಿ ಹಲವರ ವಿರುದ್ಧ ಭಾರತ ಸರ್ಕಾರವು ರಾಷ್ಟ್ರೀಯ ಭದ್ರತಾ ಕಾಯ್ದೆ ಮತ್ತು ಭಯೋತ್ಪಾದನೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿದೆ. ಜಾಮೀನು ಸಿಕ್ಕರೂ ಹೊರ ಬರದಂತೆ ಪದೇ ಪದೇ ಕೇಸುಗಳನ್ನು ದಾಖಲಿಸಿ ವರ್ಷಗಟ್ಟಲೆ ಜೈಲಿನಲ್ಲಿಟ್ಟಿದ್ದಾರೆ. ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ವಿಶ್ವ ಪತ್ರಿಕಾ ಸ್ವಾತಂತ್ರ್ಯದಲ್ಲಿ ಭಾರತದ ಈ ಸ್ಥಾನವನ್ನು ನಿರ್ಣಯಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಮಾಧ್ಯಮಗಳ ಸ್ವಾತಂತ್ರ್ಯವನ್ನು ರಕ್ಷಿಸುವ ಸಲುವಾಗಿ, 1991 ರಲ್ಲಿ ಯುನೆಸ್ಕೋ ಮೂಲಕ ಆಫ್ರಿಕಾದ ಪತ್ರಕರ್ತರು ಅಂಗೀಕರಿಸಿದ ನಿರ್ಣಯದ ಆಧಾರದ ಮೇಲೆ, 1993ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಮೇ 3ನ್ನು 'ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ' ಎಂದು ಘೋಷಿಸಿತ್ತು. ಸರಕಾರಗಳು ಪತ್ರಿಕಾ ಸ್ವಾತಂತ್ರ್ಯಕ್ಕೆ ಬದ್ಧರಾಗಿರಬೇಕು ಎಂಬುದನ್ನು ಪ್ರತಿವರ್ಷ ನೆನಪಿಸಲೆಂಬುದು ಇದನ್ನು ಘೋಷಿಸಿದುದರ ಆಶಯವಾಗಿತ್ತು. ಪರ್ತಕರ್ತರಿಗೆ ಇದು " ಪತ್ರಿಕಾ ಸ್ವಾತಂತ್ರ್ಯ ಮತ್ತು ವೃತ್ತಿ ನೈತಿಕತೆ'ಯ ಪ್ರಶ್ನೆಗಳನ್ನು ಕುರಿತು ಚಿಂತನೆ ನಡೆಸಬೇಕಾದ ದಿನ ಎಂದು ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ) ಈ ಸಂದರ್ಭದಲ್ಲಿ ನೀಡಿರುವ ಹೇಳಿಕೆಯಲ್ಲಿ ಪತ್ರಕರ್ತರನ್ನು ಮತ್ತು ಮಾಧ್ಯಮಗಳಲ್ಲಿ ದುಡಿಯುತ್ತಿರುವ ಎಲ್ಲ ಉದ್ಯೋಗಿಗಳನ್ನು ಅಭಿನಂದಿಸುತ್ತ ಹೇಳಿದೆ.

ವಿಶ್ವ ಸಂಸ್ಥೆಯ ಘೋಷಣೆಯ 30 ವರ್ಷಗಳ ನಂತರ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ ಎಂದಿರುವ ಡಿಯುಜೆ 'ಧ್ರುವೀಕರಣದಲ್ಲಿ ಎರಡು ಪಟ್ಟು ಹೆಚ್ಚಳವಾಗಿದೆ ಎಂದು ಆರ್‌ಎಸ್‌ಎಫ್ ಇತ್ತೀಚೆಗೆ ಎಚ್ಚರಿಕೆ ನೀಡಿರುವುದನ್ನು ಉಲ್ಲೇಖಿಸಿದೆ. ಮಾಧ್ಯಮ ಧ್ರುವೀಕರಣವು ದೇಶಗಳೊಳಗೆ ವಿಭಜನೆಯನ್ನು ಉತ್ತೇಜಿಸುತ್ತಿದೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶಗಳ ನಡುವೆಯೂ ವಿಭಜನೆಯನ್ನು ಉತ್ತೇಜಿಸುತ್ತಿದೆ ಎಂದು ಅದು ಹೇಳಿದೆ. ಕೊವಿಡ್ ಮಹಾಸೋಂಕಿನ ನಂತರ ಅನೇಕ ಆರ್ಥಿಕತೆಗಳ ಕುಸಿತವು ಅನೇಕ ದೇಶಗಳಲ್ಲಿ ಧ್ರುವೀಕರಣವನ್ನು ಮತ್ತಷ್ಟು ಉತ್ತೇಜಿಸಿದೆ.

ಜನರ ನಡುವೆ ಒಡಕು ಮೂಡಿಸುವಲ್ಲಿ ದೊಡ್ಡ ಕಾರ್ಪೊರೇಟ್ ಮಾಧ್ಯಮಗಳು ಸಕ್ರಿಯ ಪಾತ್ರ ವಹಿಸಿವೆ. ಭಾರತದಲ್ಲಿಯೂ ಸ್ಥಿತಿ ಭಿನ್ನವಾಗಿಲ್ಲ ಎಂದು ಡಿಯುಜೆ ತನ್ನ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದೆ. ಕಾರ್ಪೊರೇಟ್ ಮಾಧ್ಯಮಗಳು ಅಥವಾ ಮಡಿಲ ಮಾಧ್ಯಮ(ಗೋದೀ ಮೀಡಿಯ)ಗಳು ಪ್ರಸ್ತುತ ಸರ್ಕಾರಕ್ಕೆ ಮತ್ತು ಆರ್‌ಎಸ್‌ಎಸ್‌ನ ಹಿಂದುತ್ವದ ಅಜೆಂಡಾಕ್ಕೆ ಸಂಪೂರ್ಣ ಬೆಂಬಲವನ್ನು ನೀಡುತ್ತವೆ. ಅನೇಕ ಟಿವಿ ಚಾನೆಲ್‌ಗಳು ಈಗ ಆಡಳಿತ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಕಾರ್ಪೊರೇಟ್‌ಗಳ ಒಡೆತನದಲ್ಲಿವೆ. ಕಾರ್ಪೊರೇಟ್ ಭ್ರಷ್ಟಾಚಾರ, ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳು, ಜನರ ಸಮಸ್ಯೆಗಳು ಮತ್ತು ಪ್ರತಿಪಕ್ಷಗಳು ಎತ್ತುವ ಸಮಸ್ಯೆಗಳನ್ನು ಸಾಮಾನ್ಯವಾಗಿ ನಿರ್ಲಕ್ಷಿಸಲಾಗುತ್ತದೆ ಅಥವಾ ಮುಚ್ಚಿಡಲಾಗುತ್ತದೆ. ಅಧಿಕಾರದಲ್ಲಿರುವವರ ಬಾಲ ಹಿಡಿಯಲು ನಿರಾಕರಿಸುವ ಅನೇಕ ಸ್ವತಂತ್ರ ಚಿಂತನೆಯ ಪತ್ರಕರ್ತರು ಕೆಲಸ ಕಳೆದುಕೊಂಡಿದ್ದಾರೆ ಅಥವಾ ಈ ಪ್ರಕ್ರಿಯೆಯಲ್ಲಿ ಬದಿಗೆ ಸರಿಸಲ್ಪಟ್ಟಿದ್ದಾರೆ.



ವ್ಯಂಗ್ಯಚಿತ್ರ: ಇರ್ಫಾನ್, ನ್ಯೂಸ್‌ಕ್ಲಿಕ್

ಇತ್ತೀಚಿನ ವರ್ಷಗಳಲ್ಲಿ ಸ್ವತಂತ್ರ ಮಾಧ್ಯಮ ಮತ್ತು ಸ್ವತಂತ್ರ ಪತ್ರಕರ್ತರ ಮೇಲಿನ ದಾಳಿಗಳು ತೀವ್ರವಾಗಿ ಹೆಚ್ಚಿವೆ. ಇವುಗಳು ಬೆದರಿಕೆಯಿಂದ ಹಿಡಿದು ಕಾನೂನನ್ನು ದುರುಪಯೋಗಪಡಿಸಿಕೊಳ್ಳುವ ದೈಹಿಕ ಮತ್ತು 'ಕಾನೂನು' ದಾಳಿಗಳವರೆಗೆ ಇರುತ್ತವೆ. ವಿಶೇಷವಾಗಿ ಮಹಿಳಾ ಪತ್ರಕರ್ತರನ್ನು ಟ್ರೋಲಿಂಗ್ ಮಾಡುವುದು ನಿರ್ದಯ ಸ್ವರೂಪ ಪಡೆದಿದೆ. ಅನೇಕ ಪತ್ರಕರ್ತರ ಮೇಲೆ ಅವರು ತಮ್ಮ ವೃತ್ತಿ ಧರ್ಮ ಪಾಲಿಸಿದ್ದಕ್ಕಾಗಿ ಮನಬಂದಂತೆ ಪ್ರಕರಣಗಳನ್ನು ದಾಖಲಿಸಿ ಮತ್ತು ಬಂಧಿಸಿ ಅವರನ್ನು ಕಿರುಕುಳಕ್ಕೆ ಒಳಪಡಿಸಲಾಗುತ್ತಿದೆ.

ಈ ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದಂದು ಮಾಧ್ಯಮಗಳ ಮೇಲಿನ ದಾಳಿಯನ್ನು ನಿಲ್ಲಿಸುವಂತೆ ಕೇಂದ್ರ ಸರಕಾರವನ್ನು, ಮತ್ತು ಪತ್ರಕರ್ತರು ಹಾಗೂ ಇತರ ನಾಗರಿಕರ ವಿರುದ್ಧ ಪದೇ ಪದೇ ಬಳಸಲಾಗುವ ದೇಶದ್ರೋಹ ಮತ್ತು ಮಾನನಷ್ಟ ಕಾನೂನುಗಳನ್ನು ತೆಗೆದು ಹಾಕುವಂತೆ ಸಂಸತ್ತು ಮತ್ತು ನ್ಯಾಯಾಂಗವನ್ನು ಆಗ್ರಹಿಸುವುದಾಗಿ ದಿಲ್ಲಿ ಪತ್ರಕರ್ತರ ಸಂಘ ಹೇಳಿದೆ. ಯುಎಪಿಎ ಮತ್ತು ಪಿಎಂಎಲ್‌ಎಯಂತಹ ಕಠಿಣ ಕಾನೂನುಗಳನ್ನು ತುರ್ತಾಗಿ ಪರಿಷ್ಕರಿಸಬೇಕು, ಮತ್ತು ಸ್ವತಂತ್ರ ಮಾಧ್ಯಮಗಳ ಮರಣಶಾಸನವಾಗಿ ಬಡಿಯಲಿರುವ ಡಿಜಿಟಲ್ ಮಾಧ್ಯಮದ ಹೊಸ ನಿಯಮಗಳನ್ನು ಸಂಸತ್ತು ಮರು ಪರಿಶೀಲಿಸಬೇಕು ಎಂದೂ ಅದು ಆಗ್ರಹಿಸಿದೆ.

ಕಾರ್ಯನಿರತ ಪತ್ರಕರ್ತರ ಕಾಯಿದೆಯನ್ನೂ ಹೀರಿಕೊಂಡಿರುವ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸುವುದನ್ನು ನಿಲ್ಲಿಸಬೇಕು ಎಂದೂ ಡಿಯುಜೆ ಈ ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದಂದು ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಒತ್ತಾಯಿಸಿದೆ. ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ಈ ಕಾಯಿದೆ ಪ್ರಮುಖ ಪಾತ್ರ ವಹಿಸಿದೆ ಎನ್ನುತ್ತ ಮಾಧ್ಯಮ ವ್ಯಕ್ತಿಗಳು ಮತ್ತು ಇಡೀ ಮಾಧ್ಯಮವನ್ನು ರಕ್ಷಿಸಲು ಒಂದು ವಿಶೇಷ ಕಾನೂನನ್ನು ತರಬೇಕೆಂದು ಆಗ್ರಹಿಸಿರುವ ಡಿಯುಜೆ, ಇಡೀ ಉದ್ಯಮಕ್ಕೆ ಹೊಸ ತ್ರಿಪಕ್ಷೀಯ ವೇತನ ಮಂಡಳಿಯನ್ನು ತಕ್ಷಣವೇ ಘೋಷಿಸಬೇಕೆಂದೂ ಕೇಳಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE MAY 8-14, 2023 Price: Rs. 10/- Date of Publication: 05 MAY 2023 RNI No. KARKAN /2006/17926 Posted on 09-05-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

‘ವಿಜ್ಞಾನ ದಿನ’ದ ಕೆಲವು ದಿನಗಳ ಮೊದಲು, ಸ್ವಾಯತ್ತ ಸಂಸ್ಥೆಯಾದ ‘ವಿಜ್ಞಾನ್ ಪ್ರಸಾರ್’ ನ್ನು ಮುಚ್ಚುವುದನ್ನು ಸೂಚ್ಯವಾಗಿ ಘೋಷಿಸಿತು.‘ವಿಜ್ಞಾನ್ ಪ್ರಸಾರ್’ ವಿಜ್ಞಾನ ಸಂವಹನ ಮತ್ತು ವೈಜ್ಞಾನಿಕ ಅರಿವಿನ ನೆಹರು ಕಾಲದ ಕಲ್ಪನೆಯಾಗಿದ್ದು, ಸ್ವಾತಂತ್ರ್ಯದ ಆರಂಭಿಕ ದಿನಗಳ ಕಲ್ಪನೆಯಾಗಿ ತನ್ನನ್ನು ತಾನೇ ಗುರುತಿಸಿಕೊಂಡಿದೆ. ಇತ್ತೀಚೆಗೆ, ‘ವಿಜ್ಞಾನ್ ಪ್ರಸಾರ’ ವು ತನ್ನ ಮೂಲ ಉದ್ದೇಶದಿಂದ ದೂರ ಸರಿದಿದೆ.ನಿರ್ವಾಹಕ ಮಂಡಳಿ ‘ವಿಜ್ಞಾನ್ ಪ್ರಸಾರ್’ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂಗಸಂಸ್ಥೆಯಾದ ‘ವಿಜ್ಞಾನ ಭಾರತಿ’ (ಅಂದರೆ VIBHA–ವಿಭಾ) ನಡುವೆ ತಿರುಗುವ ಬಾಗಿಲು ತೆರೆದಿದೆ. ವಿಜ್ಞಾನ ಪ್ರಸಾರ ಸಂಸ್ಥೆಯು ವೈಜ್ಞಾನಿಕ ಮನೋಭಾವ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಉತ್ತೇಜಿಸುವ ಸಂಸ್ಥೆ ಎಂಬ ಕಲ್ಪನೆ ಸತ್ತಿದೆ.



‘ವಿಜ್ಞಾನ್ ಪ್ರಸಾರ್’: ನೆಹರು ಕಾಲದ ಒಂದು ಕಲ್ಪನೆಯ ಕಗ್ಗೊಲೆ

ಮೂಲ: ದಿನೇಶ್ ಸಿ ಶರ್ಮ ಅನುವಾದ: ಜಿ.ಎಸ್.ಮಣಿ

(‘ದಿ ಹಿಂದು’ ಪತ್ರಿಕೆಯಲ್ಲಿ ಮೇ ಎರಡನೇ ತಾರೀಕಿನಂದು ಪ್ರಕಟವಾದ ಲೇಖನದ ಕನ್ನಡ ಅನುವಾದ)

ಈ ವರ್ಷದ ‘ವಿಜ್ಞಾನ ದಿನ’ದ (ಫೆಬ್ರವರಿ 28) ಕೆಲವು ದಿನಗಳ ಮೊದಲು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ (DST) ಅಧಿಕೃತ ಪತ್ರಿಕಾ ಪ್ರಕಟಣೆಯು ಅದರ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಸಂಸ್ಥೆಯಾದ ‘ವಿಜ್ಞಾನ್ ಪ್ರಸಾರ್’ನ್ನು ಮುಚ್ಚುವುದನ್ನು ಸೂಚ್ಯವಾಗಿ ಘೋಷಿಸಿತು. ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸುವ ಮತ್ತು ಸಂವಹನದ ಮೂಲಕ ವಿಜ್ಞಾನದ ಸಾರ್ವಜನಿಕ ತಿಳುವಳಿಕೆಯನ್ನು ಹೆಚ್ಚಿಸುವ ಕಾರ್ಯವನ್ನು ಹೊಂದಿರುವ ಏಜೆನ್ಸಿಯನ್ನು ಮುಚ್ಚುವ ತನ್ನ ನಿರ್ಧಾರವನ್ನು ಅದು ವಿವರಿಸಲಿಲ್ಲ. ಕೇಂದ್ರ ಸರ್ಕಾರದ ವಿವಿಧ ವಿಭಾಗಗಳ ಅಡಿಯಲ್ಲಿ ಕಾರ್ಯನಿರ್ವಹಣೆಯನ್ನು ತರ್ಕಬದ್ಧಗೊಳಿಸಲು ‘ನೀತಿಆಯೋಗ್’ ಪ್ರಾರಂಭಿಸಿದ ಪ್ರಕ್ರಿಯೆಯ ಒಂದು ಭಾಗವಾಗಿದೆ ಎಂದು ಅಧಿಕಾರಿಗಳು ಈ ಕ್ರಮವನ್ನು ವಿವರಿಸಲು ಪ್ರಯತ್ನಿಸಿದ್ದಾರೆ.

ಈ ಕಸರತ್ತಿನಲ್ಲಿ ಸೇರಿರುವುದು ‘ವಿಜ್ಞಾನ್ ಪ್ರಸಾರ್’ಒಂದೇ ಅಲ್ಲ ಎಂಬುದು ಸಮಾಧಾನ ತರುವ ಸಂಗತಿಯೇನಲ್ಲ. ಯಾವುದೇ ಸಾರ್ವಜನಿಕ ಸಮಾಲೋಚನೆ ಇಲ್ಲದೆ ಇಡೀ ಪ್ರಕರಣವನ್ನು ಗೌಪ್ಯವಾಗಿ ಮಾಡಲಾಗಿದೆ. ಇದು ಸ್ವಾಯತ್ತ ಸಂಸ್ಥೆಗಳನ್ನು ಗುರಿಯಾಗಿಸುವ ಪ್ರಕ್ರಿಯೆಯಾಗಿ ಪ್ರಾರಂಭವಾದಾಗಿನಿಂದ, ಸರ್ಕಾರವು ತನ್ನ ಎಲ್ಲಾ ಏಜೆನ್ಸಿಗಳನ್ನು ಕೇಂದ್ರೀಯವಾಗಿ ನಡೆಸಬೇಕೆಂದು ಬಯಸುತ್ತದೆ ಮತ್ತು ಅವುಗಳಿಗೆ ಕ್ರಿಯಾತ್ಮಕ, ಸಾಂಸ್ಥಿಕ ಮತ್ತು ಬೌದ್ಧಿಕ ಸ್ವಾಯತ್ತತೆ ಇಲ್ಲ ಎಂಬುದನ್ನು ಸೂಚಿಸುತ್ತದೆ.

“ವಿಜ್ಞಾನ್ ಪ್ರಸಾರ್” ನ ಮೂಲಗಳು

‘ವಿಜ್ಞಾನ್ ಪ್ರಸಾರ್’ 1989 ರಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದ್ದರೂ, ಇದು ವಿಜ್ಞಾನ ಸಂವಹನ ಮತ್ತು ವೈಜ್ಞಾನಿಕ ಅರಿವಿನ ನೆಹರು ಕಾಲದ ಕಲ್ಪನೆಯಾಗಿದ್ದು, ಸ್ವಾತಂತ್ರ್ಯದ ಆರಂಭಿಕ ದಿನಗಳ ಕಲ್ಪನೆಯಾಗಿ ತನ್ನನ್ನು ತಾನೇ ಗುರುತಿಸಿಕೊಂಡಿದೆ. ಇದು 1947 ರಿಂದ ವೈಜ್ಞಾನಿಕ ಮನೋಭಾವಕ್ಕೆ ಸಂಬಂಧಿಸಿದ ಸರ್ಕಾರಿ ಸಂಸ್ಥೆಗಳು ಮತ್ತು ನೀತಿಗಳ ಮುರಿಯದ ಸರಪಳಿಯ ಭಾಗವಾಗಿದೆ.

ಜವಾಹರಲಾಲ್ ನೆಹರು ಅವರಿಗೆ, ರಾಷ್ಟ್ರ ನಿರ್ಮಾಣ ಯೋಜನೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಅತ್ಯಗತ್ಯವೆಂಬ ವಿಚಾರವಿತ್ತು. ಇಂತಹ ವಿಚಾರ ರಾಷ್ಟ್ರೀಯ ಪ್ರಯೋಗಾಲಯಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ದೊಡ್ಡ ಅಣೆಕಟ್ಟುಗಳು ಇತ್ಯಾದಿಗಳ ರಚನೆಯಲ್ಲಿ ಪ್ರತಿಫಲಿತವಾಯಿತು. ಅತಾರ್ಕಿಕತೆ ಮತ್ತು ಅಂಧಶ್ರದ್ಧೆಯ ವಿರುದ್ಧ ಹೋರಾಡಲು, ನೆಹರೂ ಅವರು ’ವಿಜ್ಞಾನ ಮಂದಿರ’ಗಳನ್ನು ತೆರೆಯುವ ಯೋಜನೆಯನ್ನು ಬೆಂಬಲಿಸಿದರು. ಗ್ರಾಮೀಣ ಜನರಲ್ಲಿ ವೈಜ್ಞಾನಿಕ ವಿಚಾರಗಳನ್ನು ಜನಪ್ರಿಯಗೊಳಿಸಲು ಸ್ಥಾಪಿಸಲಾದ ಈ ವಿಜ್ಞಾನ ಕೇಂದ್ರಗಳು ಮೂಲಭೂತ ವೈಜ್ಞಾನಿಕ ಉಪಕರಣಗಳು, ಪುಸ್ತಕಗಳು, ಫಿಲ್ಮ್ ಸ್ಲೈಡ್‌ಗಳು ಇತ್ಯಾದಿಗಳನ್ನು ಹೊಂದಿದ್ದವು. 1960 ರ ದಶಕದಲ್ಲಿ, ಆಲ್ ಇಂಡಿಯಾ ರೇಡಿಯೋ ಮತ್ತು ’ಕೃಷಿ ವಿಜ್ಞಾನ ಕೇಂದ್ರಗಳ’ ಮೂಲಕ ವಿಜ್ಞಾನ ಸಂವಹನವು, ಈ ದಿನಗಳಲ್ಲಿ ಹಸಿರು ಕ್ರಾಂತಿಗೆ ಶಕ್ತಿ ತುಂಬಿದ ಹೊಸ, ಹೆಚ್ಚು ಇಳುವರಿ ನೀಡುವ ಬೆಳೆಗಳ ತಳಿಗಳ ಅಳವಡಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು.

ಶಕ್ತಿ ಇಂಧನ ಬಿಕ್ಕಟ್ಟು ಮತ್ತು ಮೂಢ ನಂಬಿಕೆಗಳಂತಹ ಹೊಸ ಸಾಮಾಜಿಕ ಸವಾಲುಗಳು ಹೊರಹೊಮ್ಮುತ್ತಿದ್ದಂತೆ, ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೆ ಸಾರ್ವಜನಿಕ ಚರ್ಚೆಯನ್ನು ಉತ್ತೇಜಿಸಲು ‘ವಿಜ್ಞಾನ ತಂತ್ರಜ್ಞಾನ ಇಲಾಖೆ’ ಒಂದು ಹೊಸ ಸಂಸ್ಥೆಯನ್ನು ರಚಿಸಿತು. ಹೀಗೆ 1982 ರಲ್ಲಿ ನ್ಯಾಷನಲ್ ಕೌನ್ಸಿಲ್ ಫಾರ್ ಸೈನ್ಸ್‌ಅಂಡ್ ಟೆಕ್ನಾಲಜಿ ಕಮ್ಯುನಿಕೇಷನ್ (NCSTC–ವಿಜ್ಞಾನ ತಂತ್ರಜ್ಞಾನ ಸಂವಹನೆಯ ರಾಷ್ಟ್ರಮಂಡಳಿ) ಜನಿಸಿತು. ಇದು ಹಲವಾರು ಸ್ವಯಂಪ್ರೇರಿತ ಗುಂಪುಗಳು ಮತ್ತು ತಳಮಟ್ಟದ ವಿಜ್ಞಾನ ಚಳುವಳಿಗಳನ್ನು ಬೆಂಬಲಿಸಿತು. ಅದರ ಪ್ರಮುಖ ಕೊಡುಗೆಗಳಲ್ಲಿ ಒಂದು "ಭಾರತ ಜನ ವಿಜ್ಞಾನ ಜಾಥಾ’ (BJVJ) ಚಳುವಳಿ. ಅದರ ಯಶಸ್ವಿ ಮುಕ್ತಾಯದ ನಂತರ, ಸ್ವಯಂಸೇವಾ ಸಂಸ್ಥೆಗಳ ಜಾಲಕ್ಕೆ ಅದು ಜನ್ಮ ನೀಡಿತು. ಇದು ಆಲ್ ಇಂಡಿಯಾ ಪೀಪಲ್ಸ್ ಸಾಯನ್ಸ್ ನೆಟ್‌ವರ್ಕ್‌ನ (All India People's Science Network-ಅಖಿಲ ಭಾರತ ಜನ ವಿಜ್ಞಾನ ಜಾಲ) ರೂಪವನ್ನು ಪಡೆದುಕೊಂಡಿದೆ ಮತ್ತು ಈ ಜಾಲ ಇಲ್ಲಿಯವರೆಗೆ ಉಳಿದುಕೊಂಡಿದೆ.

NCSTC-ವಿಜ್ಞಾನ ತಂತ್ರಜ್ಞಾನ ಸಂವಹನೆಯ ರಾಷ್ಟ್ರ ಮಂಡಳಿಯ ಕೆಲಸದಿಂದ ಮತ್ತು ಭಾರತ್ ಜನ ವಿಜ್ಞಾನ ಜಾಥಾದ ಪ್ರಭಾವದಿಂದ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಸಂಸ್ಥೆಯ ಕಲ್ಪನೆಯು ಮೂಡಿ ಬಂತು. ಇದು ‘ವಿಜ್ಞಾನ್ ಪ್ರಸಾರ್’ ವಾಗಿತ್ತು. ವಿಜ್ಞಾನ ತಂತ್ರಜ್ಞಾನ ಸಂವಹನೆಯ ರಾಷ್ಟ್ರಮಂಡಳಿ ಮತ್ತು ವಿಜ್ಞಾನ್ ಪ್ರಸಾರ್ ಎರಡಕ್ಕೂ ಸಾಮಾನ್ಯ ಚಾಲನಾ ಶಕ್ತಿಯಾಗಿ ಕೆಲಸ ಮಾಡಿದವರು: ನರೇಂದರ್ ಕೆ ಸೆಹಗಲ್. ವಿಜ್ಞಾನ್ ಪ್ರಸಾರ್ ವೈಜ್ಞಾನಿಕ ಮನೋಭಾವದ ವಿಷಯವನ್ನು ಸಿದ್ಧಪಡಿಸಿತು ಮತ್ತು 1990 ರ ದಶಕದಲ್ಲಿ ರೇಡಿಯೋ ಮತ್ತು ಟಿವಿ ಮೂಲಕ ವ್ಯಾಪಕವಾಗಿ ಪ್ರಸಾರ ಮಾಡಿತು. ಇದು "ವಿಜ್ಞಾನ ವಿಧಿ” (16 ಭಾಷೆಗಳಲ್ಲಿ ವಿಜ್ಞಾನದ ವಿಧಾನದ 13 ಭಾಗಗಳ ರೇಡಿಯೊ ಸರಣಿ), "ಭಾರತ್ ಕಿಚಾಪ್’ (ಭಾರತದ ವಿಜ್ಞಾನದ ಇತಿಹಾಸದ 13 ಭಾಗಗಳ ಟಿವಿ ಸರಣಿ), ಮಾನವ್ ಕಾ ವಿಕಾಸ್’(ಮಾನವನ ವಿಕಾಸ) (144–ಭಾಗಗಳ ರೇಡಿಯೋ ಸರಣಿಯಲ್ಲಿ 18 ಭಾಷೆಗಳಲ್ಲಿ ಮಾನವ ವಿಕಾಸ), ‘ಕ್ಯೋನ್ ಔರ್ ಕೈಸೆ’ (ವಿಮರ್ಶಾತ್ಮಕ ಚಿಂತನೆಯ ಟಿವಿ ಸರಣಿ), ಮತ್ತು ‘ಎ ಕ್ವೆಶ್ಚನ್ ಆಫ್ ಸೈನ್ಸ್’ (ವೈಜ್ಞಾನಿಕ ಪ್ರಶ್ನೆಗಳ ಮೇಲೆ ಟಿವಿ ಕಾರ್ಯಕ್ರಮ). ಇದು ಪ್ರಮುಖ ವಿಜ್ಞಾನಿಗಳು, ವಿಜ್ಞಾನದ ಇತಿಹಾಸ ಮತ್ತು ಅಂತಹುದೇವಿಷಯಗಳ ಕುರಿತು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲು ಚಲನಚಿತ್ರ ನಿರ್ಮಾಪಕರನ್ನು ನಿಯೋಜಿಸಿತು. 1995 ರ ಸಂಪೂರ್ಣ ಸೂರ್ಯಗ್ರಹಣದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸುರಕ್ಷಿತ ವೀಕ್ಷಣಾ ಅವಕಾಶಗಳನ್ನು ಸೃಷ್ಟಿಸಲು ಒಂದು ವರ್ಷದ ಅವಧಿಯ ಕಾರ್ಯಕ್ರಮವಾದ ಎಕ್ಲಿಪ್ಸ್–95 (ಗ್ರಹಣ–95) ಒಂದು ಗಮನಾರ್ಹವಾದ ಜನರನ್ನು ತಲುಪುವ ಯೋಜನೆಯಾಗಿದೆ. ಅಂದಿನಿಂದ, ಜನಪ್ರಿಯ ಖಗೋಳಶಾಸ್ತ್ರವು ವೈಜ್ಞಾನಿಕ ಸಾಕ್ಷರತೆ ಮತ್ತು ಜಾಗೃತಿಯನ್ನು ಹರಡುವ ಸಾಧನವಾಗಿ ಏಜೆನ್ಸಿಯ ಚಟುವಟಿಕೆಗಳ ಪ್ರಮುಖ ಅಂಶವಾಗಿದೆ.

ಮೂಲ ಉದ್ದೇಶದಿಂದ ದೂರವಾಗಿದೆ

ತೀರಾ ಇತ್ತೀಚೆಗೆ,‘ವಿಜ್ಞಾನ್ ಪ್ರಸಾರ’ವು ತನ್ನ ಮೂಲ ಉದ್ದೇಶದಿಂದ ದೂರ ಸರಿದಿದೆ. ಸಾಕಷ್ಟು ಸಿದ್ಧತೆ ಮತ್ತು ಸಮನ್ವಯವಿಲ್ಲದೆ ಹೊಸ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಉದಾಹರಣೆಗೆ, ಏಜೆನ್ಸಿಯು ದೂರದರ್ಶನಗಳ ಸಹಯೋಗದೊಂದಿಗೆ ವಿಜ್ಞಾನಕ್ಕಾಗಿ ಒಂದು ಗಂಟೆಯ ದೈನಂದಿನ ಕಾರ್ಯಕ್ರಮವನ್ನು ‘ಡಿಡಿಸೈನ್ಸ್’ ಎಂಬ ಹೆಸರಿನಲ್ಲಿ ಪ್ರಾರಂಭಿಸಿತು. ಆದರೆ ಅದು ಮೊದಲು ಪ್ರಸಾರವಾದ ಸಾಕ್ಷ್ಯಚಿತ್ರಗಳನ್ನು ತನಗೆ ಬೇಕಾದಂತೆ ಮರುಹೊಂದಿಸಲು ಪ್ರಾರಂಭಿಸಿತು. ಇದರ ನಂತರ `IndiaScience.in' ಎಂಬ ಓಟಿಟಿ(OTT) ಚಾನೆಲ್ ಆರಂಭವಾಯಿತು. ಈ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ವಿಜ್ಞಾನ್ ಪ್ರಸಾರ್ ದನಾಯಕತ್ವವು ಸರ್ಕಾರದ ಪ್ರಚಾರದೊಂದಿಗೆ ವಿಜ್ಞಾನ ಸಂವಹನವನ್ನು ಸಮೀಕರಿಸುವ ಬಲೆಗೆ ಬಿದ್ದಿತು. ಓಟಿಟಿ ವಿಜ್ಞಾನ ವಾಹಿನಿಯು ಪ್ರಧಾನಮಂತ್ರಿಯವರ ಗಣರಾಜ್ಯೋತ್ಸವದ ಭಾಷಣ ಮತ್ತು ‘ಪರೀಕ್ಷಾ ಪೇಚರ್ಚಾ’ದಂತಹ ವಾಡಿಕೆಯ ಘಟನೆಗಳನ್ನು ಒಳಗೊಂಡ ಪ್ರಚಾರ ವೇದಿಕೆಯಾಗಿ ಅವನತಿ ಹೊಂದಿತು. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರ ಕ್ಷೇತ್ರದಲ್ಲಿ ನಡೆದ ಸಣ್ಣ ಘಟನೆಗಳನ್ನು ಸಹ ‘ವಿಜ್ಞಾನ ಚಾನೆಲ್’ ಕರ್ತವ್ಯವೆಂಬಂತೆ ಎತ್ತಿ ತೋರಿಸತೊಡಗಿತು. ಪುರಾತನ ಗ್ರಂಥಗಳು ಮತ್ತು ಯೋಗದ "ವೈಜ್ಞಾನಿಕ ಪ್ರಯೋಜನಗಳನ್ನು" ವೈಭವೀಕರಿಸಲು ಇದು ಯಾವುದೇ ಅವಕಾಶವನ್ನೂ ಬಿಡಲಿಲ್ಲ.

ನಿರ್ವಾಹಕ ಮಂಡಳಿ ‘ವಿಜ್ಞಾನ್ ಪ್ರಸಾರ್’ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂಗಸಂಸ್ಥೆಯಾದ ‘ವಿಜ್ಞಾನ ಭಾರತಿ’ (ಅಂದರೆ VIBHA–ವಿಭಾ)ನಡುವೆ ತಿರುಗುವ ಬಾಗಿಲು ತೆರೆಯಿತು. ವಿಜ್ಞಾನ ಪ್ರಸಾರದ ಹಿರಿಯ ಅಧಿಕಾರಿಗಳು ‘ವಿಭಾ’ದಲ್ಲಿ ಹುದ್ದೆಗಳನ್ನು ಹೊಂದಿದ್ದರು ಮತ್ತು ಈ ಎರಡೂ ಏಜೆನ್ಸಿಗಳು ಸೇರಿ ‘ವಿಜ್ಞಾನ್ ಪ್ರಸಾರ್’ದಿಂದ ಧನಸಹಾಯ ಪಡೆದ ಜಂಟಿ ಕಾರ್ಯಕ್ರಮಗಳನ್ನು ಆಯೋಜಿಸಿವೆ. ‘ವಿಜ್ಞಾನ ವಿದ್ಯಾರ್ಥಿ ಮಂಥನ್’ ಎಂಬ ಜಾಲತಾಣ ವಿಜ್ಞಾನ ಪ್ರತಿಭಾ ಪರೀಕ್ಷೆಯನ್ನು ಆಯೋಜಿಸಲು ವರ್ಷಕ್ಕೆ ಅಂದಾಜು ರೂ.1.5 ಕೋಟಿಯನ್ನು ‘ವಿಭಾ’ಗೆ ನೀಡಲಾಯಿತು; ಇದು "ಪ್ರಾಚೀನ ವಿಜ್ಞಾನ"ದ ಮೇಲೆ ಒಂದು ಘಟಕವನ್ನು ಒಳಗೊಂಡಿತ್ತು. ವಿಭಾದ ಉದಯವು ಕಳೆದ ಐದು ವರ್ಷಗಳಲ್ಲಿ ವಿಜ್ಞಾನ್ ಪ್ರಸಾರ್ ದ ಅವನತಿಯೊಂದಿಗೆ ಮೇಳೈಸಿರುವುದು ವಿಚಿತ್ರ ಸತ್ಯವಾಗಿದೆ.

‘ವಿಜ್ಞಾನ್ ಪ್ರಸಾರ್’ ಅನ್ನು ಮುಚ್ಚುವ ಉದ್ದೇಶವನ್ನು ಸರ್ಕಾರ ಬಹಿರಂಗಪಡಿಸಿಲ್ಲ. ಅದೇನೇ ಇರಲಿ, ವಿಜ್ಞಾನ ಪ್ರಸಾರ ಸಂಸ್ಥೆಯು ವೈಜ್ಞಾನಿಕ ಮನೋಭಾವ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಉತ್ತೇಜಿಸುವ ಸಂಸ್ಥೆ ಎಂಬ ಕಲ್ಪನೆ ಸತ್ತಿದೆ. ಅಸ್ತಿತ್ವವನ್ನು ಬೇರೆ ಯಾವುದೇ ರೂಪದಲ್ಲಿ ಉಳಿಸಿದರೆ ಅದು ಅಪ್ರಸ್ತುತವಾಗುತ್ತದೆ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**